Motion to consider the situation arising out of the move of the Central Government in respect of the Mahajan Commission Report deviating from the recommendation to the detriment of the Mysore State

(Debate continued)

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಸುಮಾರು 5 ನಿಮಿಷಗಳ ಕಾಲ ನಾನು ಮಾತನಾಡಿದ್ದೇನೆ. ಆದರೆ ನಿನ್ನೆ ನಾನು ನನ್ನ ಭಾಷಣವನ್ನು ಮುಂದುವರಿಸಿ ಮುಕ್ತಾಯ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಿನ್ನೆ ಮಾತನಾಡಿದ್ದನ್ನೇ ಮಾತನಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಾನು ನಿನ್ನೆ ಎಲ್ಲಿಗೆ ಬಿಟ್ಟಿದ್ದೇನೆ ಅಲ್ಲಿಂದ ಪ್ರಾರಂಭ ಮಾಡುತ್ತೇನೆ. ನಾನು ನಿನ್ನೆ ಹೇಳುತ್ತಿದ್ದೆ ಮಾನ್ಯ ಸಭಾಧ್ಯಕ್ಷರ ರೂಮಿನಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ನಾನು ಸೇರಿದ್ದೆವೆಂದು. ಆಗ ಸಬ್‌ಸ್ಟ್ಯಾಂಟೀವ್ ಮೋಷನ್ ಯಾವ ರೀತಿ ಇರಬೇಕು, ಯಾರು ಮೂವ್ ಮಾಡಬೇಕು ಎನ್ನುವಂಥ ಪ್ರಶ್ನೆಯನ್ನು ತಮ್ಮ ಸಮ್ಮುಖದಲ್ಲಿ ಚರ್ಚೆ ಮಾಡಲಿಲ್ಲ. ಮತ್ತು ತಾವು ಇದರ ಬಗ್ಗೆ ಆಸಕ್ತಿಯನ್ನು ವಹಿಸಲಿಲ್ಲ. ಏತಕ್ಕೆಂದರೆ ಇದು ನಮಗೆ ಸಂಬಂಧಪಟ್ಟ ವಿಚಾರ. ಅನೇಕ ವಿಚಾರಗಳನ್ನು ತಾವು ಮಾತನಾಡಿದ್ದೀರಿ ಎಂದು ಅವರು ಹೇಳುತ್ತಾರೆ, ಆದರೆ ಅರ್ಥ ತಾವು ಅದರಲ್ಲಿ ಭಾಗಿಯಾಗಿದ್ದೀರಿ ಎಂದು ಹೇಳುವುದಕ್ಕಾಗುವುದಿಲ್ಲ. ಸಭಾಧ್ಯಕ್ಷರ ರೂಮಿಗೆ ಹೋಗಿ ನಾವೇ ಕುಳಿತುಕೊಂಡೆವು. ಅವರು ನಮ್ಮನ್ನು ಕರೆಯಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಸಭಾಧ್ಯಕ್ಷರು ನನ್ನನ್ನು ಕರೆಸಿಕೊಂಡರು. ಇಲ್ಲದಿದ್ದರೆ ನಾನು ಬರುತ್ತಾ ಇರಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳುವಂಥಾದ್ದು ಏನಾದರೂ ಇದ್ದರೆ ಶಾಂತಿ ರೀತಿಯಿಂದ ಹೇಳಲಿ. ನಾನು ನನ್ನ ಭಾಷಣವನ್ನು ಮುಗಿಸಿದ ನಂತರ ಕೇಳುವಂಥಾ ಪ್ರಶ್ನೆ ಇದ್ದರೆ ಕೇಳಬಹುದು. ತಾವು ಕರೆಸಿಕೊಂಡದ್ದು, ಮತ್ತು ವಿರೋಧಪಕ್ಷದ ನಾಯಕರ ಜೊತೆಯಲ್ಲಿ, ನನ್ನ ಜೊತೆಯಲ್ಲಿ ವಿಚಾರ ಏನು ನಡೆಯಿತು ಎನ್ನುವುದನ್ನು ನಾನು ಹೇಳುತ್ತಿದ್ದೆ. ಅದನ್ನು ಹೇಳುವುದಕ್ಕೆ ಅವಕಾಶವನ್ನು ಕೊಡದೆ ನನ್ನನ್ನು ಕೂರಿಸಿದರೆ ನಾನು ಏನು ಹೇಳುವುದಕ್ಕಾಗುತ್ತದೆ ? ಸಬ್‌ಸ್ಟ್ಯಾಂಟೀವ್ ಮೋಷನ್ ಯಾವರೀತಿ ಇರಬೇಕು, ಯಾರು ಅದನ್ನು ಸಭೆಯಲ್ಲಿ ಮೂವ್ ಮಾಡಬೇಕು, ಅದರ ಸ್ಟ್ರಕ್ಚರ್ ಏನಿರಬೇಕು ಎಂಬುದನ್ನು ಚರ್ಚೆಮಾಡುವುದಕ್ಕೆ ತಾವು ನಮ್ಮನ್ನು ಕರೆಸಲಿಲ್ಲ. ಅಷ್ಟೊತ್ತು ನಾವು ಈ ಸಭೆಯಲ್ಲಿ ಇದನ್ನು ಚರ್ಚೆ ಮಾಡುವುದು ಬೇಡ, ಅಡ್ಜರ್ನ್‌ಮೆಂಟ್ ಮೋಷನ್ ಬಂದಿದೆ, ಅದನ್ನೇ ಚರ್ಚೆ ಮಾಡಬೇಕು ಎಂದು ಒಂದು ನಿರ್ಣಯಕ್ಕೆ ಬಂದಿದ್ದೆವು. ತಮ್ಮ ಮುಂದೆ ಬಂದು ಹೇಳಿದಾಗ ತಾವು ಹೇಳಿದಿರಿ, ಅಜರ್ನ್‌ಮೆಂಟ್ ಮೋಷನ್ ಆವತ್ತೇ ಮುಗಿಯಬೇಕಾಗುತ್ತದೆ, ಅದನ್ನು ನಾಳೆಗೆ ಹಾಕುವುದಕ್ಕೆ ಆಗುವುದಿಲ್ಲ; ಎಂದು. ಒಂದು ವೇಳೆ ನಾವೆಲ್ಲರೂ ಒಪ್ಪಿದರೆ 279 ನೇ ರೂಲ್ ಪ್ರಕಾರ ಮತ್ತೊಂದು ಮೋಷನ್ ಮೂವ್ ಮಾಡಬಹುದು ಎಂದು ಸಲಹೆ ಮಾಡಿದ್ದೀರಿ. ಆವಾಗ ನಮಗೆ ಅದು ಒಳ್ಳೆಯ ಸಲಹೆ ಎಂದು ಕಾಣಿಸಿತು. ಏಕೆಂದರೆ ಅಜರ್ನ್‌ಮೆಂಟ್ ಮೋಷನ್ ತೆಗೆದುಕೊಂಡರೆ, ಅದು ಆವತ್ತೇ ಮುಗಿಯಬೇಕಾಗುತ್ತದೆ. ಆದರೆ 279 ರ ಪ್ರಕಾರ ಮೋಷನ್ ಮೂವ್ ಮಾಡಿದರೆ, ಅದು ಮರುದಿನಕ್ಕೆ ಮುಂದುವರಿಸುವುದಕ್ಕೂ ಆಗುತ್ತದೆ. ಈ ರೀತಿ ಒಂದು ಹಾದಿ ಹಿಡಿಯುವುದಕ್ಕೆ ತಾವು ಎಲ್ಲರನ್ನೂ ಕರೆದು ವಿಚಾರ ಮಾಡಿದ್ದೀರಿ. ಆವಾಗ ವಿರೋಧ ಪಕ್ಷದ ನಾಯಕರೂ ಒಳಗಡೆ ಬಂದಿದ್ದರು. ಅಷ್ಟರಲ್ಲಿ ಶ್ರೀಮಾನ್ ಶಿವಪ್ಪನವರು ಮತ್ತು ಗೋಪಾಲಗೌಡರು ಒಂದು ರಿಸೊಲ್ಯೂಶನ್ ಡ್ರಾಫ್ಟ್ ಮಾಡಿ ಟೈಪ್ ಮಾಡಿಸಿ ತೆಗೆದುಕೊಂಡು ಬಂದಿದ್ದರು. ಆವಾಗ್ಯೆ ಒಂದು ಅಂಡರ್‌ಸ್ಟ್ಯಾಂಡಿಂಗ್ ಇತ್ತು. ಸಿದ್ಧವೀರಪ್ಪನವರು ಯಾವಾಗಲೂ ಏನು ಹೇಳುತ್ತಿದ್ದಾರೆಂದರೆ, ಅವರಿಗೆ ಲಿಖಿತ ಮೂಲಕ ರಿಸೊಲ್ಯೂಶನ್ ಕೈಯಲ್ಲಿ ಕೊಡಬೇಕು, ನಂತರ ಅವರು ಅವರ ಸದಸ್ಯರ ಜೊತೆಯಲ್ಲಿ ಮಾತನಾಡಿ ಅವರ ಅಭಿಪ್ರಾಯವನ್ನು ಹೇಳುತ್ತಾರೆ, ಎಂದು. ರಿಸೊಲ್ಯೂಶನ್ 5 ಗಂಟೆಯೊಳಗೆ ಕೊಡುತ್ತೇವೆಂದು ಹೇಳಿದ್ದೆವು. ಆ ಪ್ರಕಾರ ಟೈಪ್ ಮಾಡಿಸಿ ಒಂದು ಕಾಪಿ ಸಿದ್ಧವೀರಪ್ಪನವರಿಗೆ ಕೊಟ್ಟರು. ಅವರು ಕಾಪಿ ತೆಗೆದುಕೊಂಡು ಹೋಗಿದ್ದಾರೆ. ಅಷ್ಟೇ ನಿಮ್ಮ ರೂಮಿನಲ್ಲಿ ಆದುದು. ಬೇರೆ ಏನೂ ಇಲ್ಲ. ಇದಾದ ಮೇಲೆ ನಾನು ತಿಳಿದುಕೊಂಡಿದ್ದೆ, ಆ ಒಂದು ರಿಸೊಲ್ಯೂಶನ್ ಡ್ರಾಫ್ಟ್

ಆಗಿ ಕೊಡಬೇಕೆಂದು ನಿರ್ಣಯವಾಗಿತ್ತೋ, ಅದನ್ನು ಕೊಟ್ಟು ಮರುದಿವಸ 11 ಗಂಟೆಗೆ ಆ ರಿಸೊಲ್ಯೂಶನ್ ಇದ್ದ ರೀತಿಯಲ್ಲೇ ಇರಬೇಕೋ ಅಥವಾ ಸ್ವಲ್ಪ ಹೆಚ್ಚು ಕಡಿಮೆಮಾಡಬೇಕಾದರೆ ಮಾಡಬಹುದು, ಎಂದು. ನಾನು ನಾಲ್ಕುವರೆ ಗಂಟೆಯಾದಮೇಲೆ ಹೊರಟು ಹೋಗಿದ್ದೆ. ಬರುವಾಗ ರಾತ್ರಿ ಒಂಬತ್ತೂವರೆ ಗಂಟೆಯ ಮೇಲಾಗಿತ್ತು. ಮಾರುದಿನ ಪಾರ್ಟಿ ಮೀಟಿಂಗ್ ಇತ್ತು. ಪಾರ್ಟಿ ಮೀಟಿಂಗ್‌ನಲ್ಲೂ ಗಡಿ ಬಗ್ಗೆ ಚರ್ಚೆಯು ಪ್ರಾರಂಭವಾಯಿತು. ನಾನು ಆಗ ಹೇಳಿದೆ, ಇದನ್ನು ದೀರ್ಘವಾಗಿ ಚರ್ಚೆ ಮಾಡಬೇಕಾಗಿಲ್ಲ, 11 ಗಂಟೆಗೆ ವಿರೋಧ ಪಕ್ಷದ ನಾಯಕರು ಬರುತ್ತಾರೆ, ಆವಾಗ ಎಲ್ಲರೂ ಸೇರಿ ಚರ್ಚೆ ಮಾಡಿ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎಂದು. 10—ಹತ್ತೂ ಮುಕ್ಕಾಲಿಗೆ ಕೆಲಸ ಮುಗಿಸಿಕೊಂಡು ಬಂದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಮಾನ್ಯ ಸಿದ್ಧವೀರಪ್ಪನವರು ಒಂದು ಚಾರ್ಜ್ ಮಾಡಿದ್ದಾರೇನೆಂದರೆ, ನೀವು ನಮ್ಮನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಲು ತಯಾರಾಗಿಲ್ಲ, ಮರುದಿನ ತನಕ ವೇಟ್ ಮಾಡಬಹುದಿತ್ತು, ಈ ಮಧ್ಯ ಗೋಪಾಲಗೌಡರ ಕೈಯಲ್ಲಿ ರಿಸೊಲ್ಯೂಶನ್ ಕಳಿಸಿದ್ದೀರಿ. ಆದರಿಂದ ನಮ್ಮ ಸಹಕಾರ ನಿಮಗೆ ಬೇಕಿಲ್ಲ, ನೀವು ನೀವಾಗಿ ಮಾಡಿಕೊಂಡಿದ್ದೀರಿ. ನಮ್ಮ ಸಹಕಾರ ನಿಮಗೆ ಬೇಕಿಲ್ಲ, ಎಂದು. ಆ ರೀತಿ ಮಾಡಿಲ್ಲ ಎಂದು ಸಬ್‌ಸ್ಟ್ಯಾನ್ಸಿಯೇಟ್ ಮಾಡುವುಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆ. ನಿನ್ನೆಯ ದಿವಸ ಇದನ್ನು ಹೇಳಿದ್ದೇನೆಂದು ಕಾಣುತ್ತದೆ. ಮಾನ್ಯ ಗೋಪಾಲಗೌಡರು ಸಬ್‌ಸ್ಟಾಂಟಿವ್ ಮೋಷನ್ ಹೇಗೆ ಕಳಿಸಿದ್ದಾರೆ, ಏಕೆ ಕಳಿಸಿದ್ದಾರೆಂದು ನನಗೆ ಗೊತ್ತಿಲ್ಲ. ಬಹುಶಃ ಅವರ ಭಾಷಣದಲ್ಲಿ ಅದನ್ನು ಹೇಳಿರಬಹುದು. ನಾನು ಆಗ ಇರಲಿಲ್ಲ. ಒಂದು ವೇಳೆ ಅವರು ಏನಾದರೂ ರಿಸೊಲ್ಯೂಶನ್ ಕಳಿಸಿದ್ದರೆ ಅದಕ್ಕೆ ನಾನು ಭಾಗಿಯಲ್ಲ, ಹೊಣೆಯಲ್ಲ. ಮಾನ್ಯ ಸಿದ್ಧವೀರಪ್ಪನವರು ನನಗೆ ಕಂಟ್ರಾಕ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿದರಂತೆ, ಮತ್ತು ನಾನು ಸಿಗಲಿಲ್ಲವೆಂದು ಹೇಳಿದರು. ಯಾರು ಸಬ್‌ಸ್ಟಾಂಟಿವ್ ಮೋಷನ್ ಮೂವ್ ಮಾಡಿದರೋ, ಅವರನ್ನು ಇವರು ಕಂಟಾಕ್ಟ್ ಮಾಡಬಹುದಾಗಿತ್ತು; ಮತ್ತು ಅದನ್ನು ತಿಳಿದುಕೊಳ್ಳಬಹುದಾಗಿತ್ತು.

ಶ್ರೀ ಎಚ್. ಸಿದ್ಧವೀರಪ್ಪ.—ಅವರಿಗೆ ಫೋನ್ ಇಲ್ಲ, ಕಂಟಾಕ್ಟ್ ಮಾಡುವುದಕ್ಕೆ.

ಶ್ರೀ ವೀರೇಂದ್ರ ಪಾಟೀಲ್.—ಇವತ್ತು ಯಾರೋ ಮಾನ್ಯಸದಸ್ಯರು ಏನಾದರೂ ಮಾಡಿದರೆ, ಅದಕ್ಕೆ ವಿವರಣೆ ಕೊಡುವ ಜವಾಬ್ದಾರಿ ನನಗಿದೆಯೇ ? ಅದು ನನ್ನ ತಪ್ಪೇನು ? ಇದು ಏಕೆ ಹೇಳುತ್ತಿದ್ದೇನೆಂದರೆ, ಈ ಒಂದು ಔಟ್‌ಲುಕ್‌ನಲ್ಲಿ ಅಂತರ ಎಷ್ಟು ಕಂಡು ಬರುತ್ತದೆ ಎಂದು ತಿಳಿಯುವುದಕ್ಕೋಸ್ಕರ. ಈ ರೀತಿ ಗೋಪಾಲಗೌಡರು ರಿಸೊಲ್ಯೂಶನ್ ಸರ್ಕುಲೇಟ್ ಮಾಡಿದ್ದಾರೆಂಬುದನ್ನು ತಿಳಿದುಕೊಂಡು ಮಾನ್ಯ ಎಂ. ಎಸ್. ಕೃಷ್ಣನ್‌ರವರೂ ಸಹ ಸ್ವಲ್ಪಮಟ್ಟಿಗೆ ಅಪ್‌ಸೆಟ್ ಆಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅವರು ಈ ಮೀಟಿಂಗಿಗೆ ಬರಲು ತಪ್ಪಲಿಲ್ಲ. ಮೀಟಿಂಗಿಗೆ ಬಂದಿದ್ದಾರೆ. ಅವರು ಮೀಟಿಂಗ್ ಪ್ರಾರಂಭವಾಗುವ ಮೊದಲೇ ಒಂದು ವಿಚಾರವನ್ನೂ ಕೇಳಿದರು. ನಿನ್ನೆಯ ನಿರ್ಣಯ ಏಕೆ ಮಾಡಿದ್ದೀರಿ, ಈ ಮಧ್ಯದಲ್ಲಿ ಗೋಪಾಲಗೌಡರು ಒಂದು ನಿರ್ಣಯವನ್ನು ಮೂವ್ ಮಾಡಿದ್ದಾರೆಂದು ಹೇಳಿದರು. ನಾನು ಆವಾಗಿನ ಅಜೆಂಡಾ ನೋಡಿರಲಿಲ್ಲ, ಮತ್ತು ಏನು ಬಂದಿದೆ ಎಂದು ನನಗೆ ಗೊತ್ತಿರಲಿಲ್ಲ. ನಾನು ಹೇಳಿದೆ, ಆ ರೀತಿ ಆಗಲಿಲ್ಲ, ನಾವು ನಿರ್ಣಯ ಮಾಡಿದ ರಿಸಲ್ಯೂಶನ್ ಅಪ್ರೂವ್ ಆಗಬೇಕಾಗುತ್ತದೆ. ಅದು ಏಕೆ ಹಾಗೆ ಆಗಿದೆ ? ಬಹುಶಃ ಗೋಪಾಲಗೌಡರು ಅದಕ್ಕೆ ಸ್ಪಷ್ಟೀಕರಣ ಕೊಡಬಹುದು, ಎಂದು. ಹಾಗೆಯೇ ಶ್ರೀಮಾನ್ ಕೃಷ್ಣನ್‌ರವರು ಗೋಪಾಲಗೌಡರನ್ನು ಕೇಳಿದರು, ಅವರು ತಕ್ಕ ಸಮಂಜಸವಾದ ಉತ್ತರವನ್ನು ಕೊಟ್ಟರು, ಆದ್ದರಿಂದ ಅವರಿಗೆ ಸಮಾಧಾನವಾಯಿತು. ಸಿದ್ಧವೀರಪ್ಪನವರು ಮೀಟಿಂಗಿಗೆ ಬಂದು ಏಕೆ ಹಾಗೆ ಮಾಡಿದ್ದೀರೆಂಬುದನ್ನು ಕೇಳಬಹುದಾಗಿತ್ತು. ಆ ರೀತಿ ಮಾಡಿದ್ದರೆ ಹೇಳಬಹುದಾಗಿತ್ತು, ಅದರ ಬದಲು ಯಾವುದೂ ನನಗೆ ಗೊತ್ತಿಲ್ಲ, ಏಕೆ ಹಾಗೆ ಆಗಿದೆ ಎಂಬುದು ನನಗೆ ಗೊತ್ತಿಲ್ಲ ಎಂದು ಹೇಳಿದರೆ ಹೇಗೆ ?

ಶ್ರೀ ಎಚ್. ಸಿದ್ಧವೀರಪ್ಪ.—ಅವರ ಪ್ರೈವೇಟ್ ಸೆಕ್ರೆಟರಿಯವರಿಗೆ ಹೇಳಿದ್ದೇನೆ.

Sri R. DAYANANDA SAGAR.—You can ask your Private Secretary. Has he not informed you ?

ಶ್ರೀ ಎಚ್. ಸಿದ್ಧವೀರಪ್ಪ.—ನಾವು ಕುಳಿತುಕೊಂಡು ಕೇಳುವುದು ನಿಮಗೆ ಸಮಾಧಾನವಿಲ್ಲವೆಂದರೆ ತಾವು ಹೇಳಿಬಿಡಿ, ನಾವು ಇರುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನನಗೆ 10-45ಕ್ಕೆ ಆಫೀಸಿಗೆ ಬಂದಾಗ ನಮ್ಮ ಪ್ರೈವೇಟ್ ಸೆಕ್ರೆಟರಿಯವರು ಹೇಳಿದರು ಈ ರೀತಿ ಟೆಲಿಫೋನ್ ಬಂದರೆ ಸಿದ್ಧವೀರಪ್ಪನವರು ಆ ಮೀಟಿಂಗಿನಲ್ಲಿ

(ಶ್ರೀ ವೀರೇಂದ್ರ ಪಾಟೀಲ್)

ಅಟೆಂಡ್ ಮಾಡುವುದಿಲ್ಲವೆಂದು ಹೇಳಿದ್ದಾರೆಂದು ಹೇಳಿದರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದು ಗಹನವಾದಂತಹ ಪ್ರಶ್ನೆಯಾಗಿದೆ. ಇದು ವೀರೇಂದ್ರ ಪಾಟೀಲರ ಪ್ರಶ್ನೆಯಲ್ಲ. ಅಥವಾ ಯಾವ ಪಕ್ಷ ಅಧಿಕಾರ ಮಾಡುತ್ತಿದೆ, ಆ ಪಕ್ಷದ ಪ್ರಶ್ನೆಯಲ್ಲ.

(*Interruptions*)

Mr. SPEAKER.—The Hon. Members should not intervene. Unless the Hon. Minister yields, nobody should intervene. That is the procedure to be followed. The other day when the Hon. Minister for Parliamentary Affairs wanted to intervene the Hon. Member did not yield.

ಶ್ರೀ ಎಸ್. ಚನ್ನಯ್ಯ.—ಏನು, ನಾವು ಅವರು ಮಾತನಾಡುವಾಗ ಏನಾದರೂ ಕೇಳಿದರೆ ಅದು ತಪ್ಪೇ ?

10-30 A. M.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಮಾತನಾಡುವ ಧೋರಣೆ ನೋಡಿದರೆ ಅವರು ಅಸಹಕಾರ ತೋರಿಸುತ್ತಿದ್ದಾರೆಂದು ನಮ್ಮ ಮನಸ್ಸಿಗೆ ಭಾಸವಾಗುತ್ತಿದೆ. ನಮಗೂ ಪಾರ್ಲಿಮೆಂಟರಿ ಅಫೇರ್ ಬಗ್ಗೆ ಅನುಭವ ಇದೆ. ಇಷ್ಟು ದಿವಸಗಳಮೇಲೆ ಇವರು ಮಾಡಿದ ಪಾಪವನ್ನು ನಮ್ಮ ತಲೆಯ ಮೇಲೆ ಹೊರಿಸುವುದಕ್ಕೆ ಹೋಗುತ್ತಿದ್ದಾರೆಂದು ನನಗೆ ಭಾಸವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕಡೆಗೆ ಕ್ಲಾರಿಫಿಕೇಷನ್ ಕೇಳಬಹುದು. ಮಾನ್ಯ ಮುಖ್ಯ ಮಂತ್ರಿಗಳು ಈಲ್ಡ್ ಆದರೆ ಆಗ ಮಧ್ಯ ತಾವು ಇಂಟರ್‌ವೀನ್ ಮಾಡಬಹುದು.

Sri H. SIDDAVEERAPPA.—If we have not co-operated, he can stop at that by saying one sentence.

Sri VEERENDRA PATIL.—I cannot understand what is going on. Have I no right to have my say ?

ಮೂರು ದಿವಸಗಳ ಚರ್ಚೆಗೆ ಯಾವ ರೀತಿ ಉತ್ತರ ಕೊಡಬೇಕೆಂಬುದು ನನಗೆ ಸಂಬಂಧ ಪಟ್ಟಂಥ ಪ್ರಶ್ನೆ. ಉತ್ತರವನ್ನು ಒಂದು ವಾಕ್ಯದಲ್ಲಿ ಮುಗಿಸಬೇಕೋ, ಅಥವಾ ಅದಕ್ಕೆ ಶಾಬಾಸ್ ಗಿರಿ ಕೊಟ್ಟು ಸಬ್‌ಸ್ಟಾನ್ಸಿಯೇಟ್ ಮಾಡಬೇಕೋ ಅಥವಾ ಉತ್ತರವನ್ನು ಹೇಗೆ ಕೊಡಬೇಕೆಂಬುದು ನನಗೆ ಸೇರಿದ ಜವಾಬ್ದಾರಿ. ಆದ್ದರಿಂದ ನನ್ನ ಅಧಿಕಾರವನ್ನು ಯಾರೂ ಮೊಟಕು ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ನನ್ನ ಮೇಲೆ ಚಾರ್ಜ್ ಮಾಡದೇ ಇದ್ದರೆ ಈ ರೀತಿ ನಾನು ಹೇಳುತ್ತಿರಲಿಲ್ಲ. ನಾನು ಅವರ ಸಹಕಾರವನ್ನು ತೆಗೆದುಕೊಳ್ಳುವುದರಲ್ಲಿ ಯಾವರೀತಿ ನಿರಾಕರಿಸಿದ್ದೇನೆಂಬ ಬಗ್ಗೆ ಹೇಳದೇ ಹೋದರೆ ಜನತೆಯ ಮನಸ್ಸಿನಲ್ಲಿ ಸಂಶಯವುಂಟಾಗುತ್ತದೆ. ಅವರು ಸಹಕಾರ ನೀಡುತ್ತೇವೆಂದು ಹೇಳಿದರೂ ನಾವು ಸಹಕಾರ ತೆಗೆದುಕೊಳ್ಳಲಿಲ್ಲವೆಂದು ಬರುತ್ತದೆ. ಅದರ ಬಗ್ಗೆ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಟ್ಟಿಲ್ಲವೆಂಬ ಪ್ರಶ್ನೆ ಬರುತ್ತದೆ. ಅವರು ಚಾರ್ಜ್ ಮಾಡದೇ ಇದ್ದರೆ ಈ ಪ್ರಶ್ನೆಯೇ ಇರುತ್ತಿರಲಿಲ್ಲ. ಇಷ್ಟೇ ಅಲ್ಲ. ನಾನು ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಯಾವಾಗಲೂ ಚರ್ಚೆಮಾಡಿ ಬಿಚ್ಚು ಮನಸ್ಸಿನಿಂದ ಹೇಳಿರುವುದನ್ನು ಪ್ರತಿಯೊಬ್ಬರೂ ಒಪ್ಪಿದ್ದಾರೆ. ಇವತ್ತು ನಮ್ಮ ಪಕ್ಷ ಅಧಿಕಾರದಲ್ಲಿ ಇದೆ. ನಾಳೆ ನಿಮ್ಮ ಪಕ್ಷವೂ ಅಧಿಕಾರಕ್ಕೆ ಬರಬಹುದು, ಆದರೆ ಕರ್ಣಾಟಕದ ಹಿತದೃಷ್ಟಿಯಿಂದ ಕರ್ಣಾಟಕದ ಹಿತಕ್ಕೆ ಧಕ್ಕೆ ಬಂದರೆ ನಾವು ಸುಮ್ಮನೆ ಕೂಡುವುದಿಲ್ಲವೆಂಬುದಾಗಿ ನಾನು ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಚರ್ಚೆಮಾಡು ವಾಗಲೆಲ್ಲಾ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಆರ್. ದಯಾನಂದ ಸಾಗರ್.—ನಾವು ಹೇಳುತ್ತಾ ಇರುವುದು ಅದನ್ನೇ. We are not lagging behind. Let him not carry the impression outside that he is alone doing it.

Mr. SPEAKER.—It is too much of an interference.

ಶ್ರೀ ಆರ್. ದಯಾನಂದ ಸಾಗರ್.— ಇವರಿಂದ ದೇಶ ಹಾಳಾಗಿ ಹೋಯಿತಲ್ಲಾ ಎಂದು ನಾನು ಹೇಳುತ್ತಿದ್ದೇನೆ. I charge the Chief Minister.

Mr. SPEAKER.—The Hon. Member is exceeding his limits.

ಶ್ರೀ ವೀರೇಂದ್ರ ಪಾಟೀಲ್.—ನಾನು ಬಹಳ ಸಂಯಮದಿಂದ ಅನೇಕ ವಿಚಾರಗಳನ್ನು ಕೇಳಿದ್ದೇನೆ. ಬೆಟ್ಟು ಮಾಡಿ ತೋರಿಸಿ ಇವರು ಈ ದೇಶವನ್ನು ಹಾಳುಮಾಡುತ್ತಿದ್ದಾರೆ, ಬೆಂಕಿ ಹಚ್ಚುತ್ತಿದ್ದಾರೆ, ಕೊಳ್ಳೆ ಹೊಡೆಯುತ್ತಿದ್ದಾರೆ, ಲೂಟಿ ಮಾಡುತ್ತಿದ್ದಾರೆಂದು ಹೇಳಿದರೂ ನಾನು ಕಲ್ಲು ಇದ್ದಹಾಗೆ ಕೂತಿದ್ದೇನೆ. ಈ ಪಾಠವನ್ನು ಎಲ್ಲರೂ ಕಲಿಯಬೇಕೆಂದು ಹೇಳುತ್ತೇನೆ. ಎಲ್ಲರಿಗೆ ಅಧಿಕಾರವಿದ್ದಷ್ಟು ನನಗೂ ಅಧಿಕಾರವಿದೆ. ಬೈಸಿಕೊಳ್ಳುವುದಕ್ಕೆ ನಾವು ಇಲ್ಲಿ ಕೂತಿದ್ದೇವೆ, ಅವರು ಬೈದಿದ್ದಕ್ಕೆ ನನಗೆ ಏನೂ ಹೇಳುವ ಅಧಿಕಾರವಿಲ್ಲವೆಂದು ಸದಸ್ಯರು ತಿಳಿದು ಇದ್ದರೆ, ಅದು ಈ ಸದನದ ದುರ್ದೈವವೆಂದು ನನಗನ್ನಿಸುತ್ತದೆ. ಯಾವಾಗ ಅವರು ನನಗೆ ಬೈಯ್ಯುತ್ತಾರೋ ಅದಕ್ಕೆ ಸ್ಪಷ್ಟೀಕರಣ ಕೊಡುವುದಕ್ಕೆ ನನಗೆ ಅಧಿಕಾರವಿಲ್ಲವೆಂದು ಹೇಳಿದರೆ ಹೇಗೆ? ಅವರಿಗೆ ಈ ದೇಶವನ್ನು ಹಾಳುಮಾಡಿದ್ದೇವೆಂದು ಹೇಳುವ ಅಧಿಕಾರವಿಲ್ಲ. ಈಗ ಮಾನ್ಯ ಸದಸ್ಯರು I charge you ಎಂದು ನನಗೆ ಹೇಳಿದ್ದಾರೆ. I accept that charge. But should I not give an explanation to the charge ?

Sri R. DAYANANDA SAGAR.—You are welcome to explain.

ಶ್ರೀ ವೀರೇಂದ್ರ ಪಾಟೀಲ್.—ಹಾಗಿಲ್ಲವಿದ್ದರೆ ಇದು ಪ್ರಜಾರಾಜ್ಯವೆಂದು ನನಗೆ ಅನ್ನಿಸುವುದಿಲ್ಲ. ನನಗೂ ಅಧಿಕಾರವಿದೆ. ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಪದೇ ಪದೇ ಹೇಳಿದ್ದೇನೆ. ಇದು ನನ್ನ ಪ್ರಶ್ನೆಯಲ್ಲ, ಇದು ಎಲ್ಲರ ಪ್ರಶ್ನೆ ಇದೆ, ಈ ಒಂದು ಸಮಸ್ಯೆ ಈಗ ನಮ್ಮ ಮುಂದೆ ಬಂದಿದೆ. ಪರಿಸ್ಥಿತಿ ಬಹಳ ಗಂಭೀರವಾಗಿದೆ, ಪ್ರೊಪೋಸಲ್ಸ್ ಓರಲ್ ಆಗಿ ಬಂದಿರುವುದನ್ನು ನೋಡಿದರೆ ಬಹುಶಃ ನಮ್ಮ ಪರಿಸ್ಥಿತಿ ಎಷ್ಟು ವಿಕೋಪಕ್ಕೆ ಹೋಗುತ್ತದೆಯೋ ಎಂಬುದು ನಮಗೆ ಗೊತ್ತಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಯಾವ ರೀತಿಯಿಂದ ಹಿತರಕ್ಷಣೆಯನ್ನು ಕರ್ನಾಟಕಕ್ಕೆ ಮಾಡಬೇಕೆಂಬ ಪ್ರಶ್ನೆ ತಮ್ಮೆಲ್ಲರ ಮುಂದೆ ಇದೆಯೆಂಬ ಮಾತನ್ನು ಯಾವಾಗಲೂ ಹೇಳಿದ್ದೇನೆ. ಈ ವಿಚಾರವಾಗಿ ಒಂದೆರಡು ಸಾರಿ ಮಾನ್ಯ ಶ್ರೀ ಸಿದ್ಧವೀರಪ್ಪನವರಿಗೂ ಹೇಳಿದ್ದೇನೆ. ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಹೇಳಿದ್ದೇನೆ, ಇದು ನನ್ನ ಪ್ರಶ್ನೆಯಲ್ಲ, ಎರಡೂವರೆ ಕೋಟಿ ಜನತೆಯ ಪ್ರಶ್ನೆ, ಈ ಪ್ರಶ್ನೆಯನ್ನು ಬಗೆಹರಿಸುವ ಜವಾಬ್ದಾರಿ ಕೇವಲ ಮುಖ್ಯ ಮಂತ್ರಿಗಳದು ಅಲ್ಲ, ಇದು ಎಲ್ಲರ ಜವಾಬ್ದಾರಿ ಎಂಬ ಮಾತನ್ನು ನಾನು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇನೆ. ಅಷ್ಟೇ ಅಲ್ಲ. ಈ ಸಮಸ್ಯೆಯ ಬಗ್ಗೆ ಇತ್ತೀಚಿನ ಚಟುವಟಿಕೆಗಳಲ್ಲಿ ಎಲ್ಲ ವಿರೋಧಪಕ್ಷಗಳ ನಾಯಕರಿಗೆ ಏನೇನಾಗಿದೆಯೆಂಬುದನ್ನು ಹಂತಹಂತವಾಗಿ ತಿಳಿಸಬೇಕೆಂದು ನಾನು ಬಂದಿದ್ದೇನೆ. ಯಾವುದನ್ನೂ ಮುಚ್ಚಿಟ್ಟಿಲ್ಲ. ನಾನು ಒಳಗೊಂದು, ಹೊರಗೊಂದು ಎಂದೂ ಮಾತನಾಡಿಲ್ಲ. ಈ ಪ್ರಶ್ನೆ ಎಲ್ಲರಿಗೂ ಗೊತ್ತಾಗಬೇಕು. ಏಕೆಂದರೆ, ನಾಳೆ ಯಾರೂ ನನ್ನ ಮೇಲೆ ಚಾರ್ಜ್ ಮಾಡಬಾರದು. ನಮಗೂ ಏಕೆ ಗೊತ್ತುಮಾಡಲಿಲ್ಲವೆಂದು ಯಾರಾದರೂ ಒಂದು ವಾದ ಹೂಡಲಿಕ್ಕೆ ಅವಕಾಶವಿರಬಾರದು. ಅದಕ್ಕಾಗಿ ಮತ್ತೊಮ್ಮೆ ಕಳಕಳಿಯಿಂದ ಹೇಳಬೇಕಾದರೆ ವಿರೋಧ ಪಕ್ಷದ ನಾಯಕರನ್ನು ಯಾವ ತರಹ ಭೇಧಭಾವವಿಲ್ಲದೆ, ಎಲ್ಲರನ್ನೂ ಸಮಾನವಾಗಿ ವಿಶ್ವಾಸದಲ್ಲಿ ತೆಗೆದುಕೊಂಡಿದ್ದೇನೆ. ಆದರೆ ಮಾನ್ಯ ಶ್ರೀ ಸಿದ್ಧವೀರಪ್ಪನವರು ಅವರ ಪಕ್ಷದಿಂದ ಇನ್ನೊಂದು ಸಬ್‌ಸ್ಟಿಟ್ಯೂಟ್ ಮೋಷನ್ ಇಟ್ಟಿರತಕ್ಕಂಥಾದ್ದು ಈ ಮಾನ್ಯ ಸಭೆಗೆ ಈಗ ಬಂದಿದೆ. ಅದರ ಬಗ್ಗೆ ಕಾರಣವೇನೆಂಬುದನ್ನು ಅವರು ಹೇಳಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ಹೇಳಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಅವರು ಕಾರಣ ಹೇಳಿದ್ದರೆ, ಅದನ್ನು ಬಿಟ್ಟು ಮುಂದೆ ಹೋಗೋಣ.

Sri H. SIDDAVEERAPPA.—As a matter of personal explanation if the Hon. Chief Minister were to yield......

Sri VEERENDRA PATIL.—I am not yielding.

ಶ್ರೀ ಪಿ. ಅಂಜನಪ್ಪ.—ಮಾನ್ಯ ಸದಸ್ಯರು ಈ ರೀತಿಯಾಗಿ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಪದೇ ಪದೇ ಏಳುವುದು, ಕೂತುಕೊಳ್ಳುವುದಕ್ಕೆ ಇದೇನು ದುಶ್ಯಾಸನ ಕಾಳಗವಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಈ ಮಾನ್ಯ ಸಭೆಯಲ್ಲಿ ಸಬ್‌ಸ್ಟಿಟ್ಯೂಟು ಮೋಷನ್ ಎಂದು ಒಂದಕ್ಕಿಂತ ಹೆಚ್ಚು ಬಂದಿವೆ ಎನ್ನುವುದು ತಮಗೂ ಗೊತ್ತಿದೆ ಮತ್ತು ಎಲ್ಲರಿಗೂ ಗೊತ್ತಿದೆ. ಮತ್ತೆ ಗಡಿ ವಿವಾದದ ಬಗ್ಗೆ ಇಲ್ಲಿ ಚರ್ಚೆಯಾಗುವ ಕಾಲದಲ್ಲಿ ಕೆಲವು ಮಾನ್ಯ ಸದಸ್ಯರುಗಳು ಕೆಲ ಕೆಲವು ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಕೆಲವರು ಹೇಳಿದ್ದಾರೆ ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿಕೊಳ್ಳಬಾರದು ಎಂದು. ಕೆಲವರು ಎಸ್. ಆರ್. ಸಿ. ರಿಪೋರ್ಟಿನಲ್ಲಿ ಇರುವಂತೆ ಎಲ್ಲಾ ವಿಚಾರಗಳನ್ನೂ ತೀರ್ಮಾನ ಮಾಡಿ ಉಳಿಕೆ ವಿಷಯಗಳನ್ನು ಜೋನಲ್ ಕೌನ್ಸಿಲಿಗೆ ಬಿಡಬೇಕು ಎಂದು ಹೇಳಿದ್ದಾರೆ. ಇನ್ನು ಕೆಲವರು ಹೇಳುತ್ತಾರೆ ಇವು ಯಾವುದೂ ಬೇಡ, ಇದಕ್ಕಾಗಿ ಮೂರು ಜನರಿರುವ ಒಂದು ಟ್ರಿಬ್ಯೂನಲ್‌ನ್ನು ನೇಮಕ ಮಾಡಿ ಅವರೇನು ತೀರ್ಪುಕೊಡುತ್ತಾರೋ ಅದರಂತೆ ನಾವು ನಿರ್ಣಯ ಮಾಡೋಣ ಎಂದು. ಹೀಗೆ ಇದರ ಬಗ್ಗೆ ಇಲ್ಲೂ ನಾನಾ ರೀತಿಯಾದ ನಿರ್ಣಯಗಳೂ ಬಂದಿವೆ. ಟ್ರಿಬ್ಯೂನಲ್ ಮಾಡಬೇಕೆಂದು ಇಲ್ಲಿನ ಸದಸ್ಯರು ಹೇಳಿದರೋ ಇಲ್ಲಿ ಮೇಲ್ಮನೆ ಸದಸ್ಯರು ಹೇಳಿದರೋ ನನಗೆ ಗೊತ್ತಿಲ್ಲ ಅಂತೂ ಅಂತಹ ಒಂದು ಸಲಹೆ ಕೊಟ್ಟಿದ್ದಾರೆ. ನಾನು ಏಕೆ ಇವನ್ನು ಹೇಳುತ್ತೇನೆ ಎಂದರೆ ಮಹಾರಾಷ್ಟ್ರ ಅಸೆಂಬ್ಲಿಯಲ್ಲಿ ಮಹಾರಾಷ್ಟ್ರದ ನಾಯಕರು ಎರಡು ಗಡಿ ವಿಚಾರದಲ್ಲಿ ಚರ್ಚೆ ಪ್ರಶ್ನೆ ಬಂದಾಗ ಅವರು ಅಲ್ಲಿ ಯಾವ ರೀತಿ ವಿಚಾರ ಮಾಡುತ್ತಾರೆ ಇಲ್ಲಿ ನಾವು ಯಾವ ರೀತ ವಿಚಾರ ಮಾಡುತ್ತಿದ್ದೇವೆ ಎನ್ನುವುದನ್ನು ಸ್ವಲ್ಪ ಹೋಲಿಕೆ ಮಾಡಿ ನೋಡಿದರೆ ನಮಗೇ ಗೊತ್ತಾಗುತ್ತದೆ. ಬಹುಶಃ ಅನೇಕ ಮಾನ್ಯ ಸದಸ್ಯರೂ, ಜನ ಸಾಮಾನ್ಯರೂ ಇಂದು ಪತ್ರಿಕೆಗಳಲ್ಲಿ ಓದಿ ನೋಡುತ್ತಿದ್ದಾರೆ. ಇದನ್ನು ನೋಡಿದರೆ ಒಂದು ರೀತಿಯಲ್ಲಿ ಇಲ್ಲಿ ಮಾತನಾಡುವವರ ಅಪಸ್ವರ ಗಡಿ ವಿವಾದದಲ್ಲಿ ಕಾಣುತ್ತಿದೆ, ಆದರೆ ಅವೇ ಮಹಾರಾಷ್ಟ್ರದ ನಾಯಕರು ಮಾತನಾಡುವಾಗ ಒಂದೇ ಒಂದು ಸ್ವರ ಕೇಳುತ್ತಾ ಇದೆ. ಅಲ್ಲಿ ಎರಡನೇ ಸ್ವರ ಬರಲು ಅವಕಾಶವೇ ಇಲ್ಲ. ನಮ್ಮಲ್ಲಿ ಇದರ ಬಗ್ಗೆ ಎಷ್ಟೋ ರೀತಿಯಾದ ಸ್ವರಗಳು ಬರುತ್ತಿವೆ. ಈ ಧಾಟಿಯಲ್ಲಿ ಇಲ್ಲಿನ ಜನರು ಮಾತನಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ.

ಶ್ರೀ ಆರ್. ದಯಾನಂದ ಸಾಗರ್.—ಇದನ್ನು ಮಾಡಲು ಕಾರಣರು ನೀವೇ. ನಾವೇನೂ ಅಪಸ್ವರ ಹೇಳುತ್ತಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಮಾಡುತ್ತಿರುವ ಟೀಕೆಗಳನ್ನು ನೋಡಿದರೆ ಇದರ ಅಪಸ್ವರ ಏನು ಎನ್ನುವುದು ಗೊತ್ತಾಗುತ್ತದೆ.

ಶ್ರೀ ವಿ. ಎಲ್. ಶಿವಪ್ಪ.—ಶ್ರೀ ನಿಜಲಿಂಗಪ್ಪನವರ ಮೇಲಿನ ಕೋಪಕ್ಕೆ ಮಾನ್ಯ ಸದಸ್ಯರಾದ ಶ್ರೀ ಸಾಗರ್‌ರವರು ಇಲ್ಲಿ ಮೇಲಿಂದ ಮೇಲೆ ಎದ್ದು ರೇಗುತ್ತಲಿದ್ದಾರೆ. ಅಷ್ಟೇ.

ಶ್ರೀ ವೀರೇಂದ್ರ ಪಾಟೀಲ್.—ಇದು ಬಹಳ ಕಠಿಣವಾದ ಸಮಸ್ಯೆ. ಇಂತಹ ಒಂದು ಸಮಸ್ಯೆ ನಮ್ಮ ಮುಂದೆ ಬಂದಿದೆ ಮತ್ತು ನಮ್ಮ ಜನರೆಲ್ಲರ ಅಂತಃಕರಣವೂ ಕೆರಳಿದೆ. ಈಗ ಏನಾಗುತ್ತಿದೆ ಎನ್ನುವುದನ್ನು ಮಾನ್ಯ ಸದಸ್ಯರೇ ಪತ್ರಿಕೆಗಳಲ್ಲಿ ಓದಿ ತಿಳಿದುಕೊಳ್ಳಬಹುದು ಮತ್ತು ಅವರೆಲ್ಲರೂ ಓದುತ್ತಿರಬಹುದು. ಇಂದು ಎಲ್ಲ ಜನರ ಮನಸ್ಸಿನಲ್ಲಿಯೂ ಒಂದು ರೀತಿಯಾದ ಕೋಲಾಹಲ ಎದ್ದಿದೆ. ಇಂತಹ ಒಂದು ಸಮಯದಲ್ಲಿ ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ಗಹನವಾಗಿ ವಿಚಾರ ಮಾಡಬೇಕಾದ ಪ್ರಶ್ನೆ ಇದು. ಇಂತಹ ಒಂದು ದೊಡ್ಡ ಸಮಸ್ಯೆ ನಮ್ಮ ಮುಂದೆ ಬಂದಿದೆ. ನಮ್ಮ ಕನ್ನಡತನ, ನಮ್ಮ ಕರ್ನಾಟಕದ ಅಭಿಮಾನ, ನಮ್ಮ ಶಕ್ತಿ, ಕರ್ನಾಟಕದ ಹಿತರಕ್ಷಣೆ ಮಾಡಶಕ್ಕ ಶಕ್ತಿ ಎಂಬ ಒರೆಗಲ್ಲಿಗೆ ಹಚ್ಚುವಂತಹ ಸ್ಥಿತಿ ಇಂದು ಬಂದಿದೆ. ಇಂತಹ ಗಹನವಾದ ಹಾಗೂ ಗಂಭೀರವಾದ ಪ್ರಶ್ನೆಯನ್ನು ವಿಚಾರ ಮಾಡಬೇಕಾಗಿ ಬಂದಿದೆ. ಇನ್ನೂ ಒಂದು ಚಾರ್ಜು ನನ್ನಮೇಲೆ ಬಂದಿದೆ. ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಪ್ರಧಾನ ಮಂತ್ರಿಗಳು ಕರೆದಾಗ ದೆಹಲಿಗೆ ಏತಕ್ಕಾಗಿ ಹೋಗಲಿಲ್ಲ ಎಂದು ಕೇಳಿದರು. ಇದನ್ನು ನಾನು ವಿರೋಧ ಪಕ್ಷದ ನಾಯಕರಿಗೆ ಆಗಲೇ ಹೇಳಿದ್ದೇನೆ. ಆದರೆ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಸಾಗರ್‌ರವರು ಇವರಿಗೆ ಬೇಕಾದಾಗ ಕಾಯಿಲೆ ಬರುತ್ತದೆ, ಬೇಡವಾದಾಗ ಬರುವುದಿಲ್ಲ ಎಂದು ಹೇಳಿದರು. ಆದರೆ ಕಾಯಿಲೆ ಎನ್ನುವುದು ನನ್ನ ಕಂಟ್ರೋಲ್‌ನಲ್ಲಿ ಇದ್ದಿದ್ದರೆ ನಾನು ಮಾನ್ಯ ಸದಸ್ಯರಾದ ಶ್ರೀಮಾನ್ ಸಾಗರ್‌ರವರಿಗಿಂತಲೂ ದಪ್ಪವಾಗಿ ಹಾಗೂ ಎತ್ತರವಾಗಿ ಬೆಳೆಯುತ್ತಿದ್ದೆ. ಆದರೆ ನನ್ನ ಹತ್ತಿರ ಅಂತಹ ಕಂಟ್ರೋಲು ಇಲ್ಲ. ಕಾಯಿಲೆ ಏಕೆ ಬಂತು ಎಂದು ಕೇಳಿದರೆ ಅವರು ಹೇಳುವ ಮಾತನ್ನು ಯಾರೂ ಬಹುಶಃ ಅಷ್ಟು ಸಮಂಜಸ ಎಂದು ಹೇಳಲಾಗುವುದಿಲ್ಲ. ಆಪ್ರೊತ್ತು ನಾನು ಹೋಗುವ ಪರಿಸ್ಥಿತಿಯಲ್ಲಿರಲಿಲ್ಲ. ಇದನ್ನು ನಾನು ಪ್ರಧಾನ ಮಂತ್ರಿಗಳವರಿಗೆ ಟೆಲಿಫೋನಿನಲ್ಲಿ ಮಾತನಾಡುವಾಗಲೂ ತಿಳಿಸಿದ್ದೇನೆ. ಅವಕ್ಕೆ ಪ್ರಧಾನ ಮಂತ್ರಿಗಳು ನಾಳೆ ಬರುವುದಕ್ಕೆ

ಆಗುತ್ತದೆಯೇ ಎಂದೂ ಕೇಳಿದರು. ಅದಕ್ಕೆ ನಾಳೆ ಬರುವುದಕ್ಕೆ ಆಗುವುದಿಲ್ಲ. ಇನ್ನು 3-4 ದಿನಗಳು ಕಳೆಯುವವರೆಗೂ ಬರುವ ಹಾಗಿಲ್ಲ ಎಂದು ಅವರಿಗೆ ನಾನೇ ತಿಳಿಸಿದ್ದೇನೆ. ಅವರು ಆಮೇಲೆ ನನಗೇ ಹೇಳಿದರು ಕಾಯಿಲೆಯಲ್ಲಿದ್ದರೆ ನೀವು ಯಾವ ರೀತಿ ಬರಲಾಗುತ್ತೆ? ಇದಕ್ಕಾಗಿ ನಾನು ನನ್ನ ಸಹೋದ್ಯೋಗಿಗಳೊಡನೆ ಚರ್ಚೆ ಮಾಡಿ ಇನ್ನೊಂದು ಡೇಟು ಕೊಡುತ್ತೇನೆ. ಆಗಲಾದರೂ ಬನ್ನಿ ಎಂದೂ ಸೂಚನೆ ಕೊಟ್ಟರು. ಪ್ರಧಾನ ಮಂತ್ರಿಗಳಾಗಿರುವವರಿಗೆ ಬೇಕಾದಷ್ಟು ಕೆಲಸ ಕಾರ್ಯಗಳಿರುತ್ತವೆ. ಅದರ ಮಧ್ಯದಲ್ಲಿ ಸ್ವಲ್ಪ ಟೈಂ ಮಾಡಿಕೊಂಡು ಬರಬೇಕೆಂದು ಹೇಳಿದ್ದಾರೆ. ಅದರಂತೆ ಅವರ ಪತ್ರಕ್ಕಾಗಿ ನಿರೀಕ್ಷಿಸುತ್ತಿದ್ದೆ. ಇದಾದ ಎರಡು ದಿನಗಳಮೇಲೆ ಅವರೇ ಇಬ್ಬರು ಅಧಿಕಾರಿಗಳ ಮೂಲಕ ತಮ್ಮ ಪ್ರಪೋಸಲ್‌ಗಳೇನು ಎನ್ನು ವುದನ್ನು ನನಗೆ ತಿಳಿಸಲು ಕಳುಹಿಸಿದ್ದರು. ಆದರೆ ಅವರು ಬರೀ ಬಾಯಿಲ್ಲ ಇಂತಹ ಪ್ರಪೋಸಲ್‌ಗಳ ಬಗ್ಗೆ ಹೇಳಿದರು. ನಾನು ಇದರ ಬಗ್ಗೆ ಅವರಿಗೇ ಸೂಚನೆ ಕೊಟ್ಟು ಯಾವ ಪ್ರಪೋಸಲ್‌ಗಳೇ ಆಗಲಿ ಅದು ಲಿಖಿತ ಮೂಲಕ ಬರಬೇಕು ಎಂದು ಹೇಳಿದೆ. ಅದು ಬಾರದೆ ಹೋದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಅದು ಬಂದನಂತರ ಇವೆರಡು ವಿಚಾರಗಳನ್ನೂ ಪರಿಶೀಲಿಸಿ ಆ ನಂತರ ಇದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಎಂದು. ನಾನು ಮತ್ತೆ ದೆಹಲಿಗೆ ಹೋಗಲಿಲ್ಲ. ಇನ್ನೂ ಅವರ ಪತ್ರಕ್ಕಾಗಿ ನಿರೀಕ್ಷಿಸುತ್ತಿದ್ದೇನೆ. ಇವಿಷ್ಟು ವಿಚಾರಗಳನ್ನು ಸಭೆಯ ಗಮನಕ್ಕೆ ತರಬೇಕು ಎಂದು ಇಲ್ಲಿ ಹೇಳುತ್ತಿದ್ದೇನೆ. 1956ನೇ ಇಸವಿಯಿಂದ ಇಲ್ಲಿಯವರೆಗೆ ಮಹಾರಾಷ್ಟ್ರ ಹಾಗೂ ಮೈಸೂರು ಗಡಿಯ ವಿವಾದಗಳ ಬಗ್ಗೆ ಅನೇಕ ಸಲ ಇಲ್ಲಿ ಚರ್ಚೆಯಾಗಿದೆ, ಇದರಲ್ಲಿ ಸರಕಾರದ ನಿಲುವೇನಿದೆ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅನೇಕ ಸದಸ್ಯರೂ ಇದರ ಬಗ್ಗೆ ಕಾರ್ಯತಃ ಏನು ಮಾಡಬೇಕು ಎಂದೂ ಸೂಚನೆ ಗಳನ್ನು ಕೊಟ್ಟಿದ್ದಾರೆ. ಅನೇಕ ಸದಸ್ಯರು ಮಹಜನ್ ರಿಪೋರ್ಟನ್ನು ಕಾರ್ಯಗತ ಮಾಡಬೇಕು ಎಂದು ಹೇಳಿದ್ದಾರೆ. ಇದರಲ್ಲಿ ಮೊದಲಿನಿಂದ ಇದರ ಬಗ್ಗೆ ಏನು ಧೋರಣೆ ತಾಳಿದ್ದೇವೆ ಎನ್ನುವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಆಡಳಿತ ನಡೆಸುವುದಕ್ಕೆ ಅನುಕೂಲವಾಗಿ ರಾಜ್ಯದ ಗಡಿಗಳನ್ನು ನಿರ್ಮಾಣ ಮಾಡಬೇಕು ಮತ್ತು ಆರೀತಿ ಮಾಡುವಾಗ ಅಲ್ಲೊಂದು ಎರಡು ಹಳ್ಳಿಗಳು ಇರಬಹುದು ಇಲ್ಲೊಂದು ಎರಡು ಹಳ್ಳಿಗಳು ಇರಬಹುದು ಆದರೂ ಇವೆಲ್ಲವೂ ಕೂಡ ಹಿಂದೂಸ್ಥಾನದ ಒಳಗಡೆ ಇರುತ್ತವೆಯೇ ವಿನಾ ಬೇರೆ ಹೋಗುವುದಿಲ್ಲ ಎನ್ನುವ ಅಂಶ ಎಲ್ಲರೂ ತಿಳಿದುಕೊಳ್ಳಬೇಕು ಮೊದಲಿಂದ ನೀವು ಯಾವ ನೀತಿ ಅನುಸರಿಸಬೇಕು ಎಂದು ಹೇಳುತ್ತ ಬರುತ್ತಿದ್ದಿರೋ ಅದನ್ನೇ ಈಗಲೂ ಗಡಿ ವಿವಾದದಲ್ಲೂ ಅನುಸರಿಸಬೇಕು. ನಮ್ಮ ಮುಂದೆ ಇದನ್ನು ಜೋನಲ್ ಕೌನ್ಸಿಲ್‌ಗೆ ಕಳುಹಿಸಬೇಕು ಎನ್ನುವ ಪ್ರಶ್ನೆ ಇಲ್ಲ ಮತ್ತು ಇದು ಪುನಃ ಜೋನಲ್ ಕೌನ್ಸಿಲ್‌ಗೆ ಹೋಗುವ ಪರಿಸ್ಥಿತಿಯಲ್ಲಿಯೂ ಇರಲಿಲ್ಲ. ಶ್ರೀ ನಿಜಲಿಂಗಪ್ಪನವರು ಜೋನಲ್ ಕೌನ್ಸಿಲ್‌ಗೆ ಈ ಪ್ರಶ್ನೆಯನ್ನು ತೆಗೆದುಕೊಂಡು ಹೋಗುವುದು ಸರಿಯಲ್ಲ ಎಂದು ಹೇಳಿದರೂ ಮಹರಾಷ್ಟ್ರದವರು ಜೋನಲ್ ಕೌನ್ಸಿಲ್‌ಗೆ ರೆಫರು ಮಾಡಬೇಕೆಂದು ಹೇಳುತ್ತಿದ್ದರು ಮತ್ತು ಇದನ್ನು ಪ್ರತಿ ಸಾರಿಯೂ ಜೋನಲ್ ಕೌನ್ಸಿಲ್ ಮುಂದೆ ತರುತ್ತಲೇ ಇದ್ದರು. ಆದರೆ ನಾವು ಇದರ ಬಗ್ಗೆ ಹಿಂದೆ ಯಾವ ಒಂದು ನಿಲುವು ಇಟ್ಟಿದ್ದೆವೋ ಅದರಿಂದ ಒಂದು ಹೆಜ್ಜೆ ಕೂಡ ಹಿಂದಕ್ಕೆ ಸರಿದಿಲ್ಲ. On that day when we agreed to constitute Four-man Committee we recognised there was a dispute between Mysore and Maharashtra. Till then, we did not think there was a dispute. ಇದರಿಂದ ಒಂದು ಹೆಜ್ಜೆ ಕೂಡ ಹಿಂದಕ್ಕೆ ಹೋಗಿಲ್ಲ. ಇಂತಹ ಕಮಿಟಿ ಮಾಡಲು ಯಾರು ಕಾರಣರು ಅವನ್ನೆಲ್ಲಾ ಇಲ್ಲಿ ಹೇಳಲು ಹೋಗುವುದಿಲ್ಲ. ಇದರ ರಿಪೋರ್ಟು ಏನು ಬಂದಿದೆ ಅವನ್ನೆಲ್ಲಾ ನೋಡಿದ್ದಾರೆ ಮತ್ತು ಮುಂದೆ ಅದರಿಂದೇನಾಯಿತು ಎನ್ನುವುದೂ ಎಲ್ಲರಿಗೂ ತಿಳಿದಿದೆ.

ಅಲ್ಲಿಂದ ಮಹಾಜನ್ ಕಮಿಷನ್ ನೇಮಕ ಆಯಿತು. ಬೊಂಬಾಯಿನಲ್ಲಿ ಅಧಿವೇಶನ ಆದಮೇಲೆ ಮಾಡಿದರು. ರಾತ್ರಿ 12, ಹನ್ನೆರಡೂವರೆ ಗಂಟೆಯಲ್ಲಿ ಇದು ನಿರ್ಣಯವಾಯಿತು. ಇದಕ್ಕೆ ನಾವೆಲ್ಲರೂ ಒಪ್ಪಿದ್ದೇವೆ. ಬಹುಶಃ ಅನೇಕ ಮಾನ್ಯ ಸದಸ್ಯರು ಈ ಕಡೆ ಆ ಕಡೆ ಈ ಕಮಿಷನ್‌ಗೆ ಒಪ್ಪಿಕೊಂಡು ಬಂದಮೇಲೆ ಬಹಳಮಟ್ಟಿಗೆ ಪ್ರತಿಭಟನೆ ಮಾಡಿದರು. ಅನೇಕರು ಇಲ್ಲೂ ಮಾಡಿದ್ದಾರೆ ಅಲ್ಲೂ ಮಾಡಿದ್ದಾರೆ, ಹೊರಗಡೆಯೂ ಮಾಡಿದ್ದಾರೆ, ಅನೇಕ ಕಡೆ ಚಳುವಳಿ ಆಗಿ, ಗೋಲಿಬಾರು ಆಗಿ ಜನರು ಸತ್ತು ಹೋಗಿದ್ದಾರೆ. ಈ ಕಮಿಷನ್ ಬೇಡ ಮೊದಲಿನಿಂದಲೂ ಏನಿತ್ತೊ ಅದೇ ಪರಿಸ್ಥಿತಿ ಇರಲಿ ಎಂಬುದು ನಮ್ಮ ನೀತಿ ಆಗಿತ್ತು. ಆದರೆ ಕೇಂದ್ರ ಸರ್ಕಾರದವರು ಮಹಾರಾಷ್ಟ್ರ ಸರ್ಕಾರದವರ ಇಚ್ಛೆಯ ಮೇರೆಗೆ ಕಮಿಷನ್ ನೇಮಕ ಮಾಡಿ ನಮ್ಮ ಮೇಲೆ ಹೇರಿದರು. ಇದರಲ್ಲಿ ಬಹುಶಃ ಏನೂ ವಿವಾದಾಸ್ಪದ ಇಲ್ಲ ಎಂದು ಅನಿಸುತ್ತದೆ. ಅಲ್ಲಿಂದ ಕಮಿಷನ್ ಆದಮೇಲೆ ಮುಂದೆ ಏನು ಅಂಡರ್‌ಟೇಕಿಂಗ್ ಕೊಟ್ಟು ಅವರ ನಿರ್ಣಯ ಮಾಡಿ

(ಶ್ರೀ ವೀರೇಂದ್ರ ಪಾಟೀಲ್)

ಕೊಂಡಿದ್ದರು ಅಂತ ಹೇಳುವಂತಹ ಶಕ್ತಿ ನನಗೆ ಇಲ್ಲ. ಏಕೆಂದರೆ ಆಗ ನಾನು ಮುಖ್ಯಮಂತ್ರಿಯಾಗಿರಲಿಲ್ಲ, ವರ್ಕಿಂಗ್ ಕಮಿಟಿಗೆ ಹೋಗಿರಲಿಲ್ಲ. ಆದರೆ ಇವತ್ತು ಹೇಳುವಂತಹ ಪ್ರಶ್ನೆ 4 ಹಳ್ಳಿ ಆ ಕಡೆ ಹೋಗಬೇಕು, 4 ಹಳ್ಳಿ ಈ ಕಡೆ ಬರಬೇಕು, ಬೆಳಗಾಂ ಎರಡು ಭಾಗ ಮಾಡಬೇಕೇ, ಬಿಡಬೇಕೇ ಎಂಬ ಪ್ರಶ್ನೆ ನಮ್ಮ ಮುಂದೆ ಇಲ್ಲ. ಇವತ್ತು ನಮ್ಮ ಮುಂದೆ ಇರುವಂತಹ ಮೂಲಭೂತವಾದ ಪ್ರಶ್ನೆ ಮನಸ್ಸಿಲ್ಲದ್ದಂತಹ ಒಂದು ಕಮಿಷನ್‌ನನ್ನು ನಮ್ಮ ಮೇಲೆ ಹೇರಿ, ಅದರ ನಿರ್ಣಯವನ್ನು ನಾವು ಒಪ್ಪಿಕೊಳ್ಳುತ್ತೇವೆ ಎಂಬ ಒಂದು ಆಶ್ವಾಸನೆಯನ್ನು ಕೊಟ್ಟು ಇವತ್ತು ಏಕೆ ಹಿಂದಕ್ಕೆ ಹೋಗುತ್ತಾ ಇದ್ದೀರಿ? ರೀ ಓಪನ್ ಮಾಡುತ್ತಾ ಇದ್ದೀರಿ ಎಂದು ಪ್ರಶ್ನೆ ಮಾಡುತ್ತಾ ಇದ್ದೇವೆ. ಇನ್ನು ಈ ಪ್ರಪೋಸಲ್ಸ್ ಬಗ್ಗೆ ವಿಚಾರ ಮಾಡಬೇಕಾದ ಪ್ರಶ್ನೆ ಇದೆ. ಇದರ ಬಗ್ಗೆ ಹೇಳಬೇಕಾಗಿದ್ದರೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಒಂದು ವಿಚಾರ ಹೇಳಿದ್ದಾರೆ, ಅವರು ಹೇಳುವಂತಹದು ಏನೆಂದರೆ :—

> "In his meeting with Mrs. Gandhi, the PCC Chief, Sri Vasantha Rao Patil was present. The Chief Minister said he reiterated the principles enunciated in the year 1957 Memorandum, namely :
>
> 1. relative majority
> 2. Village as a unit
> 3. Geographical contiguity
> 4. Wishes of the people"

1957ರಿಂದ ಈ ಪ್ರಿನ್ಸಿಪಲ್‌ಮೇಲೆ ಇತ್ಯರ್ಥ ಮಾಡಬೇಕೆಂದು ಹೇಳುತ್ತಾ ಇದ್ದೇವೆ ಅಂತ ಅನ್ನುವಂತಹ ಮಾತನ್ನು ಹೇಳಿದ್ದಾರೆ. ಈ ಕಮಿಷನ್ ನಮಗೆ ಬೇಕಾಗಿರಲಿಲ್ಲ, ರಾತ್ರಿ ಹನ್ನೆರಡೂವರೆ ಗಂಟೆಗೆ ನಮ್ಮ ತಲೆಮೇಲೆ ಈ ಕಮಿಷನ್ ಹೇರಿದರು, ಒತ್ತಾಯ ಮಾಡಿದರು. ನನಗೆ ಇಷ್ಟುಮಟ್ಟಿಗೆ ಗೊತ್ತಿದೆ, ಕಮಿಷನ್ ನಿರ್ಣಯ ಆಗುವ ಮುಂದೆ ಆಗ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಸ್ಪಷ್ಟವಾಗಿ ಹೇಳಿದರು, ಈ 4 ಪ್ರಿನ್ಸಿಪಲ್ಸ್‌ಮೇಲೆ ಏನಾದರೂ ನಿರ್ಣಯ ಮಾಡುವುದಕ್ಕೆ ಕಮಿಷನ್ ಬಿಟ್ಟರೆ ನಾನು ಭಾಗಿಯುಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಬಹುಶಃ ಇದರ ಬಗ್ಗೆ ಚರ್ಚೆಯಾಯಿತೋ ಇಲ್ಲವೋ ಗೊತ್ತಿಲ್ಲ. ಆದರೆ ಕಮಿಷನ್ ಮಾಡಿದ ನಂತರ ಏನು ನಿರ್ಣಯ ತೆಗೆದುಕೊಂಡರು; ಕಮಿಷನ್ ಮಾಡುವ ಮುಂದೆ ವರ್ಕಿಂಗ್ ಕಮಿಟಿಯಲ್ಲಿ ಏನು ನಿರ್ಣಯ ತೆಗೆದುಕೊಂಡರು ಎಂದರೆ :

> "Taking into consideration of the fundamental basis of the re-organisation of the States in India and with a view to solving the existing dispute between Maharashtra and Mysore and the States of Mysore and Kerala, the Working Committee request the Government to set up a Commission which shall hear concerned parties and give its final decision."
>
> "Taking into consideration the fundamental basis of re-organisation of States..."

ನಾನು ಈ ಶಬ್ದದ ಮೇಲೆ ಎಂಫೆಸಿಸ್ ಕೊಡುತ್ತಾ ಇದ್ದೇನೆ. The Maharashtra Chief Minister is a party to this. The Government of India is a party to this Resolution. This is the resolution which has been thrust upon Mysore and Mysore people. 57ರ 4 ಪ್ರಿನ್ಸಿಪಲ್ಸ್ ಮೇಲೆ ಕಮಿಷನ್ ಮಾಡುತ್ತಾ ಇಲ್ಲ, ಕಮಿಷನ್ ಮಾಡುವಂತಹದು ಏನೆಂದರೆ Fundamental basis of the Reorganisation

of the States ಈಗ Reorganisation of the States ನಲ್ಲಿ fundamental basis ಏನು ಎಂಬುದನ್ನು ವಿಚಾರ ಮಾಡಬೇಕಾಗಿದೆ. ಅದರಲ್ಲಿ ಈ ರೀತಿ ಹೇಳಿದ್ದಾರೆ :

> "States Reorganisation Commission formulated four principles on the basis of which they intended to investigate the problem :
>
> 1 preservation and strengthening of the Unity and security of India.
> 2 Linguistic and cultural homogeneity.
> 3 Financial and administrative considerations.
> 4 Successful working of national plan.

ಈ ಪ್ರಿನ್ಸಿಪಲ್ ಮೇಲೆ ಮಹಾಜನ್ ಕಮಿಷನ್‌ದವರು ನಿರ್ಣಯ ಮಾಡಲಿ ಅನ್ನುವಂತಹ ಮಾತು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ರೆಸಲ್ಯೂಷನ್‌ನಲ್ಲಿ ಒಪ್ಪಿಕೊಂಡಿದ್ದಾರೆ. ಕೇಂದ್ರದವರು ರೆಸಲ್ಯೂಷನ್‌ನಲ್ಲಿ ಹೇಳಿದಂತಹ 4 ಸೂತ್ರದ ಪ್ರಕಾರ ಕಮಿಷನ್ ಮಾಡಬೇಕೆಂದು ಹೇಳಿದ್ದನ್ನು ಒಪ್ಪಿ ಇವತ್ತಿನ ದಿವಸ ಈ 4 ಪ್ರಿನ್ಸಿಪಲ್ಸ್‌ಗೂ ಮಹಾರಾಷ್ಟ್ರದ ಚೀಫ್ ಮಿನಿಸ್ಟರು ತಿಲಾಂಜಲಿಯನ್ನು ಕೊಟ್ಟಿದ್ದಾರೆ, ಅದನ್ನು ಬಿಟ್ಟು ಗಡಿ ಪ್ರಶ್ನೆಯನ್ನು ಬಗೆಹರಿಸಬೇಕೆಂದು ಅಂದು ಹೇಳಿದ್ದಾರೆ ಆ ರೆಸಲ್ಯೂಷನ್ ಮಾಡುವುದಕ್ಕೆ ಅವಕಾಶವೇ ಕೊಡುತ್ತಾ ಇರಲಿಲ್ಲ, ಅಂತಹ ರೆಸಲ್ಯೂಷನ್‌ಗೆ ಭಾಗಿಯಾಗುತ್ತಾ ಇರಲಿಲ್ಲ. ಈ ರೆಸಲ್ಯೂಷನ್‌ನ್ನು ಅವರೇ ಮಾಡಿ ನಮ್ಮ ತಲೆ ಮೇಲೆ ಹೇರಿರುವುದು ಅಷ್ಟೇ ಅಲ್ಲದೆ ಅವರು ಇನ್ನೂ ಏನು ಮಾಡಿದ್ದಾರೆ ಎಂದರೆ ಅದನ್ನು ಇನ್ನೂ ಪುಷ್ಟೀಕರಣ ಮಾಡಿದ್ದಾರೆ.

Sri V. P. Naik told newsmen in Delhi that the decision would satisfy to a large extent the Maharashtra Congressmen.

He further said that the working Committee's decision should be welcomed by all as it marked the final and decisive step towards settling the dispute agitating the minds of people of Maharashtra and Mysore and Kerala for a decade.

ಇಷ್ಟೇ ಅಲ್ಲ ಕೇಂದ್ರಸರ್ಕಾರದ ನಾಯಕರು ಹೇಳಿದ್ದಾರೆ, ಇದಕ್ಕೆ ಭಾಗಿಗಳಾಗಿದ್ದಾರೆ,

Sri G. L. Nanda then Home Minister said :

"the problem has been solved completely."

ಇದು ಅಲ್ಲದೆ ಉಳಿಕಿಯದು ಏನೇನು ಆಗಿತ್ತು ಅಂತ ನನಗೆ ಗೊತ್ತಿಲ್ಲ. ಹೊರಗಡೆ ಬಂದಮೇಲೆ ರೆಸಲ್ಯೂಷನ್ ಬಗ್ಗೆ ಮಾತನಾಡುವ ಮುಂದೆ ಎಲ್ಲರೂ ಹೇಳಿದ್ದಾರೆ ಇದನ್ನು ಸ್ವಾಗತ ಮಾಡುತ್ತೇವೆ ಎಂದು. ಇದರ ಬಗ್ಗೆ ಚಳುವಳಿಯಾದ ಮೇಲೆ ನಮ್ಮಲ್ಲಿ ಗೋಳಿಬಾರು ಆಯಿತು, ನಮ್ಮಲ್ಲಿ ಜನ ಒಪ್ಪಿಕೊಂಡಿಲ್ಲ ಅನ್ನುವಂತಹ ಪರಿಸ್ಥಿತಿ ಬಂದಾಗ ಶ್ರೀಮಾನ್ ನಾಯಕರವರಿಗೆ ಮತ್ತು ಅನೇಕ ನಾಯಕರಿಗೆ ಥ್ರೆಟ್ ಮಾಡಿದ್ದಾರೆ ಒಂದುವೇಳೆ ಇದರ ಹಿಂದುಗಡೆ ಹೋದರೆ ಬಹುಶಃ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗುತ್ತದೆ, ಮಹಾಜನ್ ಕಮಿಷನ್ ಏನು ಅಪಾಯಿಂಟ್‌ಮೆಂಟ್ ಆಗಿದೆಯೋ ಅದರ ಹಿಂದುಗಡೆ ಹೋಗುವುದಕ್ಕೆ ಆಗುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಮಹಾಜನ್ ಕಮಿಷನ್ ಆಯಿತು. ಶ್ರೀಮಾನ್ ಮಹಾಜನ್‌ರವರು ಯಾರಿದ್ದಾರೋ ನಮಗೆ ಗೊತ್ತಿಲ್ಲ, ನಮಗೆ ಕೇಳಿ ಶ್ರೀಮಾನ್ ಮಹಾಜನ್‌ರವರ ಒನ್ ಮ್ಯಾನ್ ಕಮಿಷನ್ ಮಾಡಲಿಲ್ಲ. ಕೇಂದ್ರದಲ್ಲಿ ಯಶವಂತ ರಾವ್ ಚವಾಣ್‌ರವರು ಹೋಂ ಮಿನಿಸ್ಟರ್ ಆಗಿದ್ದರು, ಆಗ ಈ ಕಮಿಷನ್ ಮಾಡಿದ್ದು ಸರಿಯೋ ತಪ್ಪೋ ಗೊತ್ತಿಲ್ಲ. ಬಹುಶಃ ಇವತ್ತು ಈ ಸಭೆಗೆ ಹೇಳಬೇಕಾಗುತ್ತದೆ, ಮಹಾಜನ್‌ರವರು ಎಷ್ಟು ದೊಡ್ಡ ವ್ಯಕ್ತಿ ಅನ್ನುವಂತಹದು ಉತ್ತರ ಹಿಂದೂಸ್ಥಾನದಲ್ಲಿ ಹೋದರೆ ಗೊತ್ತಾಗುತ್ತದೆ. ಮಹಾಜನ್‌ರವರು ನಮ್ಮ ವಕೀಲರಾಗಿರಲಿಲ್ಲ ಅಥವಾ ನಮ್ಮ ಪರವಾಗಿ ವಾದ ಮಾಡಿ ರಿಪೋರ್ಟು ಕೊಡುತ್ತಾರೆ ಎಂದು ಯಾರಿಗೂ ಅನಿಸಿರಲಿಲ್ಲ. ಅವರ ರಿಪೋರ್ಟ್ ಹೊರಗಡೆ ಬಂದಾಗ, ಪೇಪರ್‌ನಲ್ಲಿ ರಿಪೋರ್ಟ್ಸ್ ಬಂದಾಗ ಶ್ರೀಮಾನ್ ನಿಜಲಿಂಗಪ್ಪನವರಿಗೆ ಯಾರೋ ಪ್ರೆಸ್‌ನವರು ಏನು ಮಾಡುತ್ತೀರಿ ಎಂದು ಕೇಳಿದರು, ಅದಕ್ಕೆ ಅವರು ನಾವು ಕಮಿಷನ್‌ಗೆ ಒಪ್ಪಿಕೊಂಡಿದ್ದೇವೆ, ಅವರ

(ಶ್ರೀ ವಿರೇಂದ್ರ ಪಾಟೀಲ್)

ರಿಪೋರ್ಟ್ ಏನೇ ಬಂದರೂ ಒಪ್ಪಬೇಕಾಗುತ್ತದೆ ಅಂತ ಅನ್ನುವ ಮಾತನ್ನು ಹೇಳಿದರು. ಅಲ್ಲಿಂದ ಬೊಂಬಾಯಿಲ್ಲಿ ಶ್ರೀಮಾನ್ ವಿ. ಪಿ. ನಾಯಕ್‌ರವರಿಗೆ ಪ್ರೆಸ್‌ನವರು ಕೇಳಿದರು ಶ್ರೀಮಾನ್ ನಿಜಲಿಂಗಪ್ಪನವರು ರಿಪೋರ್ಟ್ ಒಪ್ಪಿಕೊಳ್ಳುತ್ತೇವೆ ಎಂದು ಹೇಳುತ್ತಾರೆ ನೀವೇನು ಮಾಡುತ್ತೀರಿ ಎಂದು ಕೇಳಿದಾಗ ಅವರು ಹೇಳುತ್ತಾರೆ :

On September 14, 1967, Sri Naik while speaking to newsmen, at Bombay said :

"Sri Nijalingappa's statement that he wished to accept the Mahajan Commission recommendation is not new. When the question came up in the Congress Working Committee, the two Chief Ministers had agreed between themselves to accept the recommendations, rather keeping the whole issue pending from generation to generation. This point was not officially made public at the time of the appointment of the Commission for the simple reason that constitutionally, it is the Parliament which takes the final decision on this issue. Copies of the reports have not reached us so far. However, whatever the recommendations, they are binding on us."

He is further reported to have said :

"Sri Y. B. Chavan, Union Home Minister, while expressing his opinion on the resolution of the Congress Working Committee had also stated that both the Parties have to accept the recommendations, the Home Minister said, there was nothing new so far as the statement of Sri Nijalingappa is concerned."

11-00 A.M.

ನಿಜಲಿಂಗಪ್ಪನವರೇನೂ ಹೊಸ ವಿಚಾರ ಹೇಳಲಿಲ್ಲ, ಒಪ್ಪಿಕೊಳ್ಳಬೇಕು ಎಂದು ತಿಳಿಸಿದೆವು. ಅಕ್ಟೋಬರ್ 1966ರಲ್ಲಿ ಮುಂದೆ ಹೋಗಿ ಹೇಳಿದ್ದಾರೆ :

"Answering a question whether it was not the first time a Commission was being appointed without terms of reference, Mr. Naik said that it was already indicated that the proposed Commission would take' 'into consideration' the fundamental basis of the reorganisation of States."

ಅವರು ರಿಪೀಟ್ ಮಾಡಿದ್ದಾರೆ.

"He was satisfied with the appointment of the Commission. Mr. Naik further said that the verdict of the Commission would be binding not only on both the States but on the Union Government as well."

ಕೇವಲ ಮಹಾರಾಷ್ಟ್ರ ಮತ್ತು ಮೈಸೂರಿಗೆ ಮಾತ್ರ ಬೈಂಡಿಗ್ ಅಲ್ಲ, ಯೂನಿಯನ್ ಗವರ್ನಮೆಂಟಿಗೆ ಕೂಡ ಬೈಂಡಿಗ್ ಇದೆ ಎಂದು ಹೇಳಿದ್ದಾರೆ. ಹಾಗೆ ಹೇಳಿದರೂ ವರದಿ ಹೊರಗೆ ಬಂದಮೇಲೆ ಬಣ್ಣ ತಿರುಗಿ ಹೋಗುತ್ತದೆ. ಮಹಾರಾಷ್ಟ್ರದ ನಾಯಕರು ಮತ್ತು ಕೇಂದ್ರ ಸರಕಾರದ ಒಬ್ಬಿಬ್ಬರು ಬಹಳ ಅನ್ಯಾಯವಾಗಿದೆ, ಮಹಾಜನ್ ವರದಿಯನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ವರದಿ ಬಂದ ಮೇಲೆ ಹೇಳಿದರು. ನಮ್ಮವರು ಕೆಲವರು, ಪಾರ್ಲಿಮೆಂಟ್ ಸದಸ್ಯರು ಹೀಗಾದರೆ ಯಾವುದೂ

ಫೈನಲ್ ಆಗುವುದಿಲ್ಲ, ಇದರಲ್ಲಿ ಮಾರಲ್ ಪ್ರಶ್ನೆ ಇದೆ ಎಂದು ಸಂಬಂಧಪಟ್ಟವರನ್ನು ಭೇಟಿಯಾಗಿ ತಿಳಿಸಿದರು. ನಮ್ಮ ದೇಶದಲ್ಲಿ ಫೆಡರಲ್ ಸ್ಟ್ರಕ್ಚರ್‌ನಲ್ಲಿ ಯಾವಾಗಲೂ ಜಗಳವಿದ್ದೇ ಇರುತ್ತದೆ, ಇರುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ನಿರ್ಣಯ ಮಾಡಬೇಕಾದರೆ ಮೂರನೆಯವರಿಗೆ ವಹಿಸಬೇಕು ಎಂದು ಮಹಾಜನ್ ಕಮಿಷನ್ನಿಗೆ ವಹಿಸಲಾಯಿತು. ಎರಡೂ ಮುಖ್ಯ ಮಂತ್ರಿಗಳು ಮತ್ತು ಕೇಂದ್ರ ಸರಕಾರದವರು ಕೂಡಿ ಮಹಾಜನ್ ಕಮಿಷನ್ ನೇಮಕ ಮಾಡಿದೆವು. ನೆಗೋಷಿಯೇಷನ್ ಮಾಡಿ ಕೆಲವು ಕೊಟ್ಟು ತೆಗೆದುಕೊಳ್ಳುವುದಕ್ಕೆ ಅವಕಾಶವಿದ್ದಿದ್ದರೆ ಕಮಿಷನ್ ನೇಮಕ ಮಾಡಬೇಕಾಗಿರಲಿಲ್ಲ. ಕಮಿಷನ್ ನೇಮಿಸದಿದ್ದರೆ ಈ ಪ್ರಶ್ನೆ ಬಗೆಹರಿಯುವುದಿಲ್ಲ, ಸುಮಾರು ಹತ್ತು ವರ್ಷಗಳಿಂದಲೂ ನೆಗೋಷಿಯೇಷನ್ ನಡೆದಿವೆ, ಚರ್ಚೆ ನಡೆದಿದೆ ಅದರಿಂದ ಬಗೆಹರಿಯಲು ಸಾಧ್ಯವಿಲ್ಲ, ಇದಕ್ಕೆ ಮೂರನೆಯವರಿರಬೇಕು, ಅವರು ತೀರ್ಮಾನ ಮಾಡುವುದನ್ನು ಒಪ್ಪೋಣ ಎಂದು ಒಂದು ನಿರ್ಧಾರಕ್ಕೆ ಬರಲಾಯಿತು. ಆಗ ನಾನು ಪಬ್ಲಿಕ್‌ವರ್ಕ್ ಇಲಾಖೆ ಮಂತ್ರಿಯಾಗಿದ್ದೆ. ಆಗ ಕಮಿಷನ್ ನೇಮಿಸಿದೆ, ಇನ್ನು ಮುಂದೆ ಈ ವಿಷಯದಲ್ಲಿ ಕೈಹಾಕುವುದಿಲ್ಲ ಎಂದು ಬಹಳ ಉನ್ನತ ಸ್ಥಾನದಲ್ಲಿ ಇರುವ ಮಹಾರಾಷ್ಟ್ರದ ನಾಯಕರು ಹೇಳಿದರು. ಆದರೆ ವರದಿ ಬಂದನಂತರ ವಾತಾವರಣ ಬದಲಾವಣೆಯಾಗುತ್ತಿದೆ. ಕೇಂದ್ರ ಸರಕಾರ ಯಾವ ಕಮಿಷನ್ನನ್ನು ನಮ್ಮ ಮೇಲೆ ಹೇರಿದಮೇಲೆ ಈಗ ಅದರ ತೀರ್ಪು ಬಂದಮೇಲೆ ಬದಲಾಯಿಸುವುದು ಸರಿಯೇ ಎಂದು ನಾನು ಕೇಳುತ್ತೇನೆ. ನಾಯಕರಿಗೆ, ಕೇಂದ್ರ ಸರಕಾರಕ್ಕೆ ನಾವು ಗೌರವ ಕೊಡಬೇಕು. ಆದುದರಿಂದ ಅವರು ಹೇಳಿದಂತೆ ಕೇಳಬೇಕು. ಹಾಗೆ ಮಾಡಿದಮೇಲೆ ಕೇಂದ್ರ ಸರಕಾರದವರಿಗೆ ಮಾರಲ್ ರೆಸ್‌ಪಾನ್ಸಿಬಿಲಿಟಿ ಇಲ್ಲವೇ? ಕೇಂದ್ರದವರೇ ತಾವಾಗಿಯೇ ನಮ್ಮ ಮೇಲೆ ಕಮಿಷನ್ ಹೇರಿರುವಾಗ ಅದರ ಶಿಫಾರಸ್ಸನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಕೇಂದ್ರದವರಮೇಲಿಲ್ಲವೆ? ಈ ರೀತಿ ತಾವೇ ನೇಮಿಸಿದ ಕಮಿಷನ್ ವರದಿಗೆ ತಾವೇ ಮನ್ನಣೆ ಕೊಡದಿದ್ದರೆ ಇನ್ನು ಮುಂದೆ ಕಮಿಷನ್ನುಗಳ ವಿಚಾರದಲ್ಲಿ ಜನರಿಗಿರುವ ವಿಶ್ವಾಸ ಹೊರಟುಹೋಗುತ್ತದೆ. ಇನ್ನಾದರೂ ಯೋಚನೆಮಾಡಬೇಕಾಗಿದೆ. ಇದು ಈ ಕಡೆ ನಾಲ್ಕು ಹಳ್ಳಿ ಹೋದುವು, ಆ ಕಡೆ ನಾಲ್ಕು ಬಂದುವು ಎಂದು ಲೆಕ್ಕ ಹಾಕುವ ಪ್ರಶ್ನೆಯಲ್ಲ. ಆದ್ದರಿಂದ ಹೇಗಾದರೂ ಇರುವ ಪ್ರಶ್ನೆಯನ್ನು ತೀರ್ಮಾನಮಾಡಿ ಮುಗಿಸಿ ಎಂದು ನಾವು ಮೊದಲೇ ಹೇಳಿದ್ದೇವೆ. ಹಾಗಿರುವಾಗ ಮಹಾಜನ್ ಕಮಿಷನನ್ನು ನಮ್ಮಮೇಲೆ ಹೇರಿದಾಗ ಅವರ ಜವಾಬ್ದಾರಿ ಇದೆ, ನಮ್ಮ ಜವಾಬ್ದಾರಿ ಇಲ್ಲ. ಆ ಜವಾಬ್ದಾರಿಯನ್ನು ಸಂಬಂಧಪಟ್ಟವರು ನಿರ್ವಹಿಸದಿದ್ದರೆ ಜನರಿಗೆ ಪ್ರಜಾರಾಜ್ಯದಲ್ಲಿ, ಕಮಿಷನ್ನಿನಲ್ಲಿ ವಿಶ್ವಾಸ ಹೋಗಬಹುದು. ಆದುದರಿಂದ ಮಹಾರಾಷ್ಟ್ರದವರೂ ಮತ್ತು ಕೇಂದ್ರದವರೂ ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿಕೊಳ್ಳಬೇಕು.

ಇನ್ನೊಂದು ನಿರ್ಣಯ ಬಂದಿದೆ, ಸ್ಟೇಟ್ ರೀ ಆರ್ಗನೈಜೇಷನ್‌ನಂತೆ ಸ್ಟೇಟಸ್ಕೋ ಇಟ್ಟುಕೊಳ್ಳಬೇಕು, ನಂತರ ಹೆಚ್ಚುಕಡಿಮೆ ಮಾಡಿಕೊಳ್ಳಲು ಅವಕಾಶ ಇಟ್ಟುಕೊಳ್ಳೋಣ ಎಂದು ಹೇಳುತ್ತಾರೆ. ಇಂದು ಮಹಾಜನ್ ಕಮಿಷನ್ ಆಗಲು ಬೇಡಿದವರೂ ಮಹಾರಾಷ್ಟ್ರದವರೇ, ನಾವು ಅದನ್ನು ಮಾಡಲು ಬೇಡಲಿಲ್ಲ. ಈಗ ಏನಾದರೂ ಮಾಡಿ ಮಹಾಜನ್ ಕಮಿಷನ್ ವರದಿಯನ್ನು ಗಾಳಿಗೆ ತಳ್ಳಬೇಕು, ಹೇಗಾದರೂ ಮಾಡಿ ಕಾಲ ತಳ್ಳಿದರೆ ಮುಂದೆ ಬೇರೆ ಏನಾದರೂ ಮಾಡಬಹುದು ಎಂದು ಯೋಚನೆಮಾಡಿದ್ದಾರೆ. ಕಮಿಷನ್ ಒಂದೇ ಅಲ್ಲ, ಇದುವರೆಗೆ ಅನೇಕ ಆಗಿವೆ, ಇದು ಪ್ರಾಯಶಃ ನಾಲ್ಕನೆಯದಿರಬಹುದು. ಯಾವ ಕಮಿಷನ್ ಮಾಡಿದರೂ ಅದು ವರದಿಯನ್ನು ಒಪ್ಪಬೇಕಾಗಿಲ್ಲ, ಜಗಳವಾಡಿದರೆ ಬೇಕಾದ ಅನುಕೂಲ ಪಡೆಯಬಹುದು ಎಂಬ ಭಾವನೆ ಇದೆ. ಹಿಂದೆ 1924ರಲ್ಲಿ ಕಾವೇರಿ ನದಿಗೆ ಸಂಬಂಧಪಟ್ಟಂತೆ ಒಪ್ಪಂದವಾಗುವಾಗಲೂ ಇದೇ ಪರಿಸ್ಥಿತಿ ಇತ್ತು, ಮದ್ರಾಸು ಮತ್ತು ಮೈಸೂರು ದೇಶಗಳಿಗೆ ಒಪ್ಪಂದವಾಗುವಾಗ ಏನಾಯಿತೆಂಬುದು ಗೊತ್ತಿರಬಹುದು. 1892ರಲ್ಲಿ ಈ ವಿಚಾರ ಬಗೆಹರಿಯದೆ ಕೇಂದ್ರ ಸರಕಾರ ಈ ವಿಷಯವನ್ನು ಟ್ರಿಬ್ಯೂನಲ್ಲಿಗೆ ಹಾಕಬೇಕಾಯಿತು, ಟ್ರಿಬ್ಯೂನಲ್ಲಿನವರು ಅವಾರ್ಡ್ ಕೊಟ್ಟರು. ಮದ್ರಾಸಿನವರು ಆ ಅವಾರ್ಡನ್ನು ಮಾನ್ಯ ಮಾಡುವುದಿಲ್ಲವೆಂದು ಹೇಳಿದರು. ಅವರಿಗೆ ಅಧಿಕಾರವಿತ್ತು, ಕ್ರೌನ್ ಅವರ ಕಡೆ ಇತ್ತು, ತಮಗೆ ಬೇಕಾದ ಅನುಕೂಲ ಪಡೆಯಲು ಒತ್ತಾಯಮಾಡಿದರು. ಅದರಹಾಗೆ ಈ ದಿವಸ ಒತ್ತಾಯಮಾಡಿದರೆ ತಮಗೆ ಬೇಕಾದ ಅನುಕೂಲ ದೊರೆಯುತ್ತದೆ ಎಂದು ಅದಕ್ಕೆ ತಕ್ಕ ವಾತಾವರಣ ಹುಟ್ಟಿಸುತ್ತಿದ್ದಾರೆ. ಇಂದು ನ್ಯಾಯ ನೀತಿ ಇರಬೇಕು, ಇಲ್ಲದಿದ್ದರೆ ಮನುಷ್ಯತ್ವ ಉಳಿಯುವುದಿಲ್ಲ. ಚಳವಳಿ ಆಗಲಿ, ಯಾವುದೇ ಆಗಲಿ ಅದಕ್ಕೆ ಬುನಾದಿ ನ್ಯಾಯ. ನ್ಯಾಯ ಎಲ್ಲಿ ದೊರೆಯುವುದಿಲ್ಲ ಅಲ್ಲಿ ಜನರ ವಿಶ್ವಾಸ ಸಿಕ್ಕುವುದಿಲ್ಲ, ಜನರು ವಿಶ್ವಾಸಮಾಡುವ ಪರಿಸ್ಥಿತಿ ಇರುವುದಿಲ್ಲ. ಯಾವ ಆಧಾರದಮೇಲೆ ಕೇಂದ್ರ, ಸರಕಾರದವರು ಇಂದು ಮಹಾಜನ್ ವರದಿಯನ್ನು ಬದಲಾಯಿಸುತ್ತಿದ್ದಾರೆ ಎಂದು ನಾನು ಪ್ರಶ್ನಿಸುತ್ತೇನೆ. ಕಮಿಷನ್ ರೆಕಮೆಂಡೇಷನ್ನಿಗೇಕೆ ತಿಲಾಂಜಲಿಯನ್ನು ಕೊಡುತ್ತಿದ್ದಾರೆ ಎಂಬುದಕ್ಕೆ ಎಕ್ಸ್‌ಪ್ಲನೇಷನ್ ಬೇಕು. ಏಕೆ ಮಹಾಜನ್

(ಶ್ರೀ ವೀರೇಂದ್ರ ಪಾಟೀಲ್)

ವರದಿಯನ್ನೊಪ್ಪುವುದಿಲ್ಲ ? ಈ ಪ್ರಶ್ನೆ ನಮ್ಮ ಮುಂದಿವೆ ಇದರ ಬಗ್ಗೆ ಹೆಚ್ಚು ಚರ್ಚೆಮಾಡಿ ವಿವಾದಗಳಿಗೆ ಅವಕಾಶ ಕೊಡಬೇಕಾಗಿಲ್ಲ.

ಇನೊಂದು ಮೊದಲಿದ್ದಹಾಗೇ ಇರಲಿ ಎಂಬುದು, ಸಿದ್ದವೀರಪ್ಪನವರ ನಿರ್ಣಯವಿದೆ, ನಿನ್ನೆ ಅವರು ತಿದ್ದುಪಡಿ ಬೇರೆ ಮಂಡಿಸಿದ್ದಾರೆ. ಅದು ಮೊದಲೇ ತೆಗೆದುಕೊಂಡ ಸ್ಟ್ಯಾಂಡ್, ಸಿದ್ದವೀರಪ್ಪನವರಿಗೆ ಗೊತ್ತಾಗಲಿ ಎಂದು ಹೇಳುವುದು. ನಾನು ಬಂದಿರುವ ಪ್ರದೇಶದ ವಿಚಾರ ನನಗೆ ಚೆನ್ನಾಗಿ ಗೊತ್ತಿದೆ, ಅಕ್ಕಲಕೋಟೆ ಮತ್ತು ಸೋಲಾಪುರದ ಜನರು ತಾವು ಅಚ್ಚ ಕನ್ನಡಿಗರು, ತಮ್ಮ ಭಾಗಗಳನ್ನೂ ಕನ್ನಡ ರಾಜ್ಯಕ್ಕೆ ಸೇರಿಸಿಕೊಳ್ಳಬೇಕು ಎಂದು ಬೆಳಗಾಂ ಪ್ರಶ್ನೆ ಬಂದಾಗ ಡೆಲಿಗೇಷನ್ ಬಂದರು. ಅವು ಗುಲ್ಬರ್ಗ ಮತ್ತು ಬಿಜಾಪುರಕ್ಕೆ ಹತ್ತಿರದಲ್ಲಿವೆ. ನಾವು ಅದಕ್ಕೆ ಒಪ್ಪಿದೆವು, ಅದಕ್ಕಾಗಿ ಚಳುವಳಿ ಮಾಡಬೇಕಾಗಿಲ್ಲ ಎಂದು ಹೇಳಿ ಶಾಂತಿಯಿಂದಿರುವಂತೆ ಅಲ್ಲಿನವರಿಗೆ ತಿಳಿಸಿದೆವು. ಅವರು ನಮ್ಮಲ್ಲಿ ವಿಶ್ವಾಸವಿಟ್ಟು ಚಳುವಳಿ ಮಾಡುವುದನ್ನು ಕೈಬಿಟ್ಟರು. ಆವಾಗ ಅವರಿಗೆ ಹೇಳಿದೆ, ಎಲ್ಲಿದ್ದರೂ ಸುಖವಾಗಿದ್ದೀರಿ, ಯಾವ ಜನರ ಜೊತೆಯಲ್ಲಿ ಇದ್ದೀರೋ ಅವರ ಜೊತೆಯಲ್ಲಿ ಹೊಂದಿಕೊಂಡಿದ್ದೀರಿ. ನಿಮ್ಮ ಸಲುವಾಗಿ ನಾವು ಹೊಡೆದಾಡುವಂಥ ಪರಿಸ್ಥಿತಿಯಿಲ್ಲ, ಸ್ಟೇಟಸ್‌ಕೋ ಸಲುವಾಗಿ ಹೊಡೆದಾಡುತ್ತಿದ್ದೇವೆಂದು ಹೇಳಿದೆ. ಆವಾಗ ನಮ್ಮನ್ನು ನಂಬಿಕೊಂಡು ಅವರು ಅಷ್ಟೊಂದು ದೊಡ್ಡ ಚಳುವಳಿ ಮಾಡಲಿಲ್ಲ, ಸ್ವಲ್ಪಮಟ್ಟಿಗೆ ಮಾತ್ರಮಾಡಿದರು. ಆದರೆ ಮಹಾಜನ್ ಕಮಿಷನ್ ನೇಮಕವಾದ ಮೇಲೆ, ಇನ್ನು ಹೇಗಾದರೂ ಈ ಪ್ರಶ್ನೆ ರೀ ಓಪನ್ ಆಗಿದೆ ನಾವು ಏನಾದರೂ ಕೊಡಬೇಕಾಗುತ್ತದೆ, ಏನಾದರೂ ತೆಗೆದುಕೊಳ್ಳಬೇಕಾಗುತ್ತದೆ ಎಂದು ಅಲ್ಲಿನ ಜನರಿಗೆ ಎಚ್ಚರಿಸಿದೆವು, ಹುರಿದುಂಬಿಸಿದೆವು, ಪಂಚಾಯಿತಿಗಳಿಂದ ರೆಸಲ್ಯೂಷನ್‌ಗಳನ್ನು ಮಾಡಿ, ಡೆಲಿಗೇಷನ್ ಮಾಡಿ ಮಹಾಜನ್ ಕಮಿಷನ್ ಮುಂದೆ ಮನವಿಗಳನ್ನು ಕೊಡಲು ಹುರಿದುಂಬಿಸಿದೆವು ಮೇಲ್ಮನೆಯ ಸದಸ್ಯರಾದ ಶ್ರೀ ಜಿ. ವಿ. ಹಳ್ಳಿಕೇರಿ ಅವರು ಕನ್ನಡ ಬಾಂಧವರ ಹತ್ತಿರ ಹೋಗಿ ರೆಪ್ರೆಸೆಂಟೇಷನ್ ಮಾಡಬೇಕೆಂದು ಹೇಳುವುದಕ್ಕೆ ಹೋದರೆ ಒಂದು ದಿವಸ ಅರ್ಧ ದಿವಸ ಅವರನ್ನು ಪೋಲೀಸ್ ಸ್ಟೇಷನ್‌ನಲ್ಲಿ ಕೂಡಿಸಿದರು. ಪ್ರಚಾರಕ್ಕೆ ಬಂದಿದ್ದೀರಿ ಬರುವ ಅವಶ್ಯಕತೆ ಇಲ್ಲ ಎಂದು ಸ್ಟೇಷನ್‌ನಲ್ಲಿ ಕೂಡಿಸಿದರು. ನನ್ನ ಜಿಲ್ಲೆಯಿಂದ ಬರುವಂಥ ಪ್ರತಿನಿಧಿಗಳಿಗೆ ಗೊತ್ತಿದೆ. ಅಲ್ಲಿನ ಜನರು ನಮ್ಮನ್ನು ನಂಬಿಕೊಂಡು ಎವಿಡೆನ್ಸ್ ಕೊಟ್ಟರು, ಪಂಚಾಯಿತಿ ರೆಸಲ್ಯೂಷನ್ ಮಾಡಿದ್ದಾರೆ ಮಹಾಜನ್ ಕಮಿಷನ್ ಮನ ಒಲಿಸುವ ಪ್ರಯತ್ನವನ್ನು ಮಾಡಿದ್ದಾರೆ. ಈಗ ಅದೇನೂ ಇಲ್ಲ ನೀವು ಆ ಕಡೆಯೇ ಇರಿ, ನಾವು ಈ ಕಡೆಯೇ ಇರುತ್ತೇವೆ ಎಂದು ಮಾನ್ಯ ಸಿದ್ದವೀರಪ್ಪನವರ ನಿರ್ಣಯನ್ನು ಒಪ್ಪಿಕೊಂಡರೆ ಅವರ ಗತಿ ಏನಾಗಬೇಕು ? ಅವರೂ ಕನ್ನಡಿಗರಲ್ಲವೇ ? ನಮ್ಮನ್ನು ನಂಬಿದವರ ಕೈ ಬಿಟ್ಟರೆ ನಮ್ಮ ಕಿಮ್ಮತ್ತೇನು ? ನಮ್ಮನ್ನು ಯಾರು ನಂಬುತ್ತಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಸ್ಟೇಟ್ ರೀ-ಆರ್ಗನೈಜೇಷನ್ ಆಕ್ಟ್......

ಶ್ರೀ ವೀರೇಂದ್ರ ಪಾಟೀಲ್.—ಜೋನಲ್ ಕೌನ್ಸಿಲ್‌ನಲ್ಲಿ ಬಡಿದಾಡಿದ್ದೇವೆ.....

Sri H. SIDDAVEERAPPA.—On a point of order, Sir. Are not interjections here and there allowed in a parliamentary system of debate ?

Mr. SPEAKER.—The hon. Leader of the Congress (R) party has raised a very interesting point. Interjections for a second or two can be permitted but continuous interjuctions cannot be permitted. If an hon. Member wants to interrupt an hon. Member speaking, that can be done only when the Member speaking yields and not otherwise. Even then the interruption should be through the Chair and not direct.

Sri H. SIDDAVEERAPPA.—Sir, whenever any hon. Member speaks, it appears to me that he always speaks through you. Anything we address will be only through you and we never make exchanges across the table.

The Hon. the Chief Minister is trying to make out to the outside world that we are opposed to the inclusion of other external areas. That is the tenor of his speech.

Mr. SPEAKER.—I shall give the hon. Member permission to make personal explanation at the end of the Chief Minister's speech.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ನಾನು ಹೇಳುತ್ತಿದ್ದೆ, ಅಕ್ಕಲಕೋಟೆ, ಷೋಲಾಪುರಗಳಲ್ಲಿ ಏನು ಪರಿಸ್ಥಿತಿ ಇದೆ ಎನ್ನುವಂಥದ್ದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ಮಹಾಜನ್ ಕಮಿಷನ್ ನಮಗೆ ಏನು ಅಕ್ಕಲಕೋಟೆ ಮತ್ತು ಷೋಲಾಪುರ ಕೊಡಬೇಕು ಎಂದು ಹೇಳಿದ್ದಾರೆ, ಅದು ಹೊಸದೇನೂ ಅಲ್ಲ. ಮಹಾರಾಷ್ಟ್ರದವರು 1957ರಂದೇ ನಿರ್ಧಾರ ಮಾಡಿದ್ದಾರೆ, ಇವೆಲ್ಲ ಹೊರಟುಹೋಗುತ್ತವೆ, ಇರುವುದಿಲ್ಲ ಎಂದು. ನಾನು ಬಹಳ ದುಃಖದಿಂದ ಹೇಳಬೇಕಾಗುತ್ತದೆ, ಅಲ್ಲಿನ ಪರಿಸ್ಥಿತಿ ಚಿಂತಾಜನಕವಾಗಿದೆ. ಏಕೆಂದರೆ ಆ ಹಳ್ಳಿಗಳಿಗೆ ಏಕೆ ಶೃಂಗಾರ ಮಾಡಬೇಕು, ಏಕೆ ಅವುಗಳಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು ಎಂದು ಹಾಗೆಯೇ ಬಿಟ್ಟಿದ್ದಾರೆ. ಇದನ್ನು ನಾನು ಹೇಳುವುದಲ್ಲ, ಲಿಂಗ್ವಿಸ್ಟಿಕ್ ಮೈನಾರಿಟಿ ಕಮಿಷನ್‌ನವರು ಕೊಟ್ಟಿರುವ ವರದಿಯನ್ನು ಓದಿದರೆ ಅರ್ಥವಾಗುತ್ತದೆ. ಮೊದಲಿನಿಂದಲೂ ಕನ್ನಡಿಗರು ಅಲ್ಲಿಂದ ಇಲ್ಲಿಗೆ ಬರುತ್ತೇವೆಂದು ಕೇಳಿಕೊಂಡ ಮೇಲೆ, ಬರುತ್ತೇವೆಂದು ಅವರು ಹೇಳಿದ ಮೇಲೆ, ಕಮಿಷನ್‌ನವರು ನಿರ್ಣಯ ಕೊಟ್ಟ ಮೇಲೆ ಅವರನ್ನು ಆಲಿಂಗನ ಮಾಡಿ ಕರೆದುಕೊಳ್ಳಬೇಕಾದ ಕರ್ತವ್ಯವಿದೆಯೋ ಇಲ್ಲವೋ ? ಅದೇ ರೀತಿ ಕಾಸರಗೋಡಿನ ಅಸೆಂಬ್ಲಿ ಸದಸ್ಯರು ನನ್ನ ಜೊತೆಯಲ್ಲಿ ಕಾಸರಗೋಡಿನ ಬಗ್ಗೆ ಚರ್ಚೆ ಮಾಡಿ ಹೋಗಿದ್ದಾರೆ. ನಮ್ಮನ್ನು ಕೈ ಬಿಟ್ಟಿರಾ ಎಂದು ಅವರು ಕೇಳುತ್ತಿದ್ದರು. ಮಹಾರಾಷ್ಟ್ರ ಮೈಸೂರು ರಾಜ್ಯಗಳಿಗೆ ಸಂಬಂಧಪಟ್ಟಂತೆ ಮಾತ್ರ ವಿವಾದವಿದೆ ಮತ್ತು ಭಾಷಾವಾರು ಜಗಳವಿದೆ, ನಮ್ಮಲ್ಲಿ ಏನೂ ಇಲ್ಲವೇ ಎಂದು ಕೇಳಿದರು. ಶಿವಸೇನೆ ಮತ್ತೊಂದು ನಮ್ಮಲ್ಲಿಲ್ಲ ನಮ್ಮನ್ನು ಏಕೆ ವಿಚಾರ ಮಾಡುತ್ತಾರೆ ನಮ್ಮನ್ನು ನೀವು ಕೈ ಬಿಡುತ್ತೀರಾ ಎಂದು ಕೇಳಿದಾಗ ಅವರ ಪ್ರಶ್ನೆಯನ್ನೂ ನಾವು ವಿಚಾರ ಮಾಡಬೇಕಾಗುತ್ತದೆ. ಈ ಹೊತ್ತು ಕಮಿಷನ್ ಮುಖಾಂತರ ನಿರ್ಣಯವಾದ ಪ್ರಶ್ನೆಗಳನ್ನು ಮತ್ತೆ ಜೋನಲ್ ಕೌನ್ಸಿಲ್‌ನಲ್ಲಿ ತೆಗೆದುಕೊಂಡು ಹೋಗುವುದೋ, ಟ್ರಿಬ್ಯುನಲ್ಲಿಗೆ ತೆಗೆದುಕೊಂಡು ಹೋಗುವುದೋ ಅಥವಾ ಕಮಿಷನ್ ನಿರ್ಣಯದ ಪ್ರಕಾರ ಬರುವಂಥ ಪ್ರದೇಶಗಳನ್ನು ಪಡೆಯಬೇಕು ಎನ್ನುವ ನಿರ್ಣಯಕ್ಕೆ ಕಟ್ಟು ಬೀಳುವುದೋ ಎನ್ನುವಂಥ ಪ್ರಶ್ನೆ ನಮ್ಮ ಮುಂದೆ ಇದೆ.

ಶ್ರೀಮಾನ್ ಸಿದ್ದವೀರಪ್ಪನವರು ಒಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅದರಲ್ಲಿ ಅವರು ಹೀಗೆ ಹೇಳಿದ್ದಾರೆ:

"for adjustment of Kannada areas like Kasargode in Kerala, Talewadi in Tamil Nadu, Madaksira in Andhra Pradesh as provided in the States Reorganisation Act, 1956."

Sri H. SIDDAVEERAPPA.—After 'Andhra Pradesh' the word 'etc.' is there.

Sri VEERENDRA PATIL.—This is not mine ; this is the paper given to me by your Secretary. I have said that a copy of whatever amendments are moved by the Hon. Member Sri Siddaveerappa must be given to me.

Mr. SPEAKER.—I do not find any word 'etc.' in the original amendment given notice of by Sri Siddaveerappa.

Sri H. SIDDAVEERAPPA.—At least now I suggest it. The Chair may include the word 'etc.' in my amendment.

ಶ್ರೀ ವೀರೇಂದ್ರ ಪಾಟೀಲ್.—ಅವರು ಹೇಳುವಂತೆ ಎಟಸೆಟ್ರಾ ಎನ್ನುವುದನ್ನೂ ಒಪ್ಪಿಕೊಳ್ಳುತ್ತೇನೆ. ಎಟ್‌ಸೆಟ್ರಾ ಎನ್ನುವುದು ಯಾವಾಗ ಬರುತ್ತದೆ ಎಂದರೆ ಸಣ್ಣ ಸಣ್ಣ ಚಿಲ್ಲರೆಗಳಿದ್ದರೆ ಎಟ್‌ಸೆಟ್ರಾ ಎನ್ನುವುದು ಬರುತ್ತದೆ. ಎರಡು ತಾಲ್ಲೂಕು, ಸೌತ್ ಷೋಲಾಪುರ ಮತ್ತು ಅಕ್ಕಲಕೋಟೆ, ಎಟ್‌ಸೆಟ್ರಾ ಆಯಿತು. ಯಾವುದಾದರೂ ಕೆಲವು ಹಳ್ಳಿಗಳಿದ್ದರೆ ಆಗ ಎಟ್‌ಸೆಟ್ರಾ ಎಂದು ಇರಬಹುದು. ಆದರೆ ಎರಡು ತಾಲ್ಲೂಕುಗಳ ವಿಚಾರದಲ್ಲಿ ನಾವು ಎಟ್‌ಸೆಟ್ರಾ ಎಂದು ಹೇಳಿದರೆ ಅಲ್ಲಿನ ಜನತೆಯಲ್ಲಿ ಯಾವರೀತಿಯ ಭಾವನೆ ಉಂಟಾಗುತ್ತದೆ ಎನ್ನುವುದನ್ನು ಹೇಳುತ್ತಿದ್ದೇನೆ. ಇವತ್ತು ನಾನು ನಿಪ್ಪಾಣಿ ಮತ್ತು ನಾಲ್ಕು ಹಳ್ಳಿಗಳು ಎಟ್‌ಸೆಟ್ರಾ ಎಂದು ಹೇಳುತ್ತೇನೆ. ಇದರಲ್ಲಿ ಬೆಳಗಾಂವಿ ಮತ್ತು ಕಾರವಾರ ಬಗ್ಗೆ ಎಟ್‌ಸೆಟ್ರಾ ಪದ ಉಪಯೋಗಿಸಿದರೆ ಏನು ಪರಿಸ್ಥಿತಿ

(ಶ್ರೀ ವೀರೇಂದ್ರ ಪಾಟೀಲ್)

ಉಂಟಾಗುತ್ತದೆ ? ಸ್ವಲ್ಪ ಲೆಕ್ಕ ಹಾಕಿ ನೋಡಿ, ಕಾಸರಗೋಡು ಪೂರ್ತಿ ತಾಲ್ಲೂಕು ಬರ ಬೇಕಾಗಿಲ್ಲವೆ ? ತಾಳವಾಡಿ ಪೂರ್ತಿ ತಾಲ್ಲೂಕು, ಹೊಸೂರು ಮತ್ತು ಮಡಕಶಿರಾ ಪೂರ್ತಿ ತಾಲ್ಲೂಕೂ ನಮಗೆ ಬಂದಿಲ್ಲ. ಬರೀ ಎಟ್‌ಸೆಟ್ರಾ ಅಂದರೆ ಅರ್ಥವಾಗುತ್ತದೆಯೇ ? ಇದು ಮುಖ್ಯ ಪ್ರಶ್ನೆಯಲ್ಲವೇ ? ಯಾವ ಕನ್ನಡ ಜನತೆಗೆ ನೀವು ಹೋರಾಟ ಮಾಡುವುದು ಬೇಡ, ನಿಮ್ಮ ಸಲುವಾಗಿ ನಾವು ಹೋರಾಟ ಮಾಡಿದ್ದೇವೆ, ನಿಮ್ಮ ಜೊತೆಗೆ ಇರುತ್ತೇವೆ ನಮ್ಮಲ್ಲಿ ವಿಶ್ವಾಸ ಇರಲಿ ಎಂದು ನಿರ್ಣಯ ಮಾಡಿದ್ದೇವೆಯೋ ಅಂಥ ನಿರ್ಣಯ ಇಂದು ಬಿಟ್ಟು ಬಿಡೋಣವೇ ? ಅಡ್ಜಸ್ಟ್‌ಮೆಂಟಿಗೆ ಅವಕಾಶ ಮಾಡಿಕೊಡೋಣ ಎಂದು ಅಂದರೆ ಅವರಿಗೆ ಏನು ಹೇಳಬೇಕು ಗೊತ್ತಾಗುವುದಿಲ್ಲ. ಇವರ ಹೇಳಿಕೆಯನ್ನು ಜನತೆಯೇ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ ಎಂದು ಇಷ್ಟು ಮಾತ್ರ ನಾನು ಹೇಳುತ್ತೇನೆ.

ಶ್ರೀಮಾನ್ ಸಿದ್ದವೀರಪ್ಪನವರಾಗಲಿ ಅನೇಕ ಮಾನ್ಯ ಸದಸ್ಯರುಗಳಾಗಲಿ ಅವರ ಭಾಷಣ ನಾನು ಎಲ್ಲಾ ಕೇಳಲಿಲ್ಲ. ಆದರೂ ಬಹುಮಟ್ಟಿಗೆ ಕೇಳಿದ್ದೇನೆ. ಈ ಪರಿಸ್ಥಿತಿ ಒದಗಿದೆ. ಇಂಥ ಪರಿಸ್ಥಿತಿಯಲ್ಲಿ ಇವರ ಲೆಕ್ಕಕ್ಕೆ ಯಾವುದೇ ಕೋಲು ಇರಲಿ ಇವರ ಸರಕಾರವನ್ನು ಹೊಡೆಯೋಣ ಎಂಬ ಭಾವನೆ ಇದೆ. ಶ್ರೀಮಾನ್ ಸಿದ್ದವೀರಪ್ಪನವರ ಪೂರ್ತಿ ಭಾಷಣದಲ್ಲಿ ಒಂದು ಶಬ್ದ ಸಹ ಮಹಾರಾಷ್ಟ್ರ ಸರಕಾರದ ವಿರೋಧವಾಗಿ ಇಲ್ಲ, ಕೇಂದ್ರ ಸರಕಾರದ ವಿರೋಧವಾಗಿ ಒಂದು ಶಬ್ದ ಸಹ ಇಲ್ಲ. ಅನ್ಯಾಯ ಮಾಡುತ್ತಿರುವಾಗ್ಗೆ ಇದು ಅನ್ಯಾಯ, ಇದು ಅನ್ಯಾಯವಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲವೇ ? ಎಲ್ಲ ಮುಖ್ಯ ಮಂತ್ರಿಗಳ ಮೇಲೆ ಆರೋಪ ಮಾಡಿದ್ದು ಆಯಿತು, ಶ್ರೀ ನಿಜಲಿಂಗಪ್ಪನವರಮೇಲೆ ಮಾಡಿದ್ದು ಆಯಿತು.

ಶ್ರೀ ಆರ್. ದಯಾನಂದ ಸಾಗರ.—ನನ್ನ ಭಾಷಣದಲ್ಲಿ ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಾನು ಶ್ರೀ ಸಿದ್ದವೀರಪ್ಪನವರ ಭಾಷಣದ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ಅವರು ಆ ಪಕ್ಷದ ನಾಯಕರು. ಇವತ್ತಿನ ದಿವಸ ಈ ಪಾರ್ಟಿಗೆ ಏನು ನಾಮಕರಣ ಮಾಡಿದ್ದಾರೆಯೋ ಅಂದರೆ ರೂಲಿಂಗ್ ಕಾಂಗ್ರೆಸ್ ಇನ್ ಅಪೋಜೀಷನ್ ಪಾರ್ಟಿ ಲೀಡರ್ ಆಗಿದ್ದಾರೆ. ಅವರು ಹೇಳುವುದನ್ನು ಕಿವಿ ತೆರೆದಿಟ್ಟುಕೊಂಡು ಕೇಳುತ್ತೇನೆ. ಹೀ ಈಜ್ ರೈಸಿಂಗ್ ದಿ ಫೀಲಿಂಗ್ಸ್ ಆಫ್ ದಿ ಎಂಟೈರ್ ಪಾರ್ಟಿ ಅಟ್ ಇಟ್ಸ್ ಲೀಡರ್; ನಾಟ್ ಇಜ್ ಇಂಡಿವಿಜ್ಯುಯಲ್ ಒಪೀನಿಯನ್, ಇದನ್ನು ಬಹಳ ದುಃಖದಿಂದ ಹೇಳುತ್ತೇನೆ. ಮಹಾಜನ್ ಕಮಿಶನ್ ವರದಿ ಬಿಟ್ಟು ಕೊಟ್ಟು ಹೊರಗೆ ಹೋಗಿ ಎಂದು ಹೇಳುವ ಹಾದಿ ಅದನ್ನು ಯಾರೇ ಸಲಹೆ ಮಾಡಲಿ ಅದು ಖಂಡನೀಯವಾಗಿದೆ. ಮಹಾರಾಷ್ಟ್ರದವರು ಬೇಡುವುದು ಸಮಂಜಸವಾಗಿದೆಯೇ ? ಬ್ರಹ್ಮನೇ ಬರಲಿ ಯಾರೇ ಬರಲಿ ಅನ್ಯಾಯವನ್ನು ಅನ್ಯಾಯ ಎಂದು ತೀರ್ಮಾನ ಮಾಡಲೇಬೇಕು. ಅನ್ಯಾಯವನ್ನು ಅನ್ಯಾಯ ಎಂದು ಹೇಳುವ ಧೈರ್ಯ ಬಾರದೇ ಹೋದರೆ ಏನು ಪ್ರಯೋಜನ ? ಮಹಾಜನ ಕಮಿಷನ್ ವರದಿ ಸಭೆಯ ಮುಂದೆ ಚರ್ಚೆಗೆ ಬಂದಾಗ್ಗೆ ಶ್ರೀಮಾನ್ ಸಿದ್ದವೀರಪ್ಪನವರ ಭಾಷಣ ಈ ಮನೆಯಲ್ಲಿ ಆಗಿದೆ. ಮಹಾಜನ್ ಕಮಿಷನ್ ರಿಪೋರ್ಟ್ ಒಪ್ಪಬೇಕು ಎಂಬ ನಿರ್ಣಯದ ಬಗ್ಗೆ ಅಂದು ಅವರ ಆಟಿಟ್ಯೂಡ್, ಧೋರಣೆ ಏನು ಇತ್ತು ಅದು ಈಗ ಎಷ್ಟರಮಟ್ಟಿಗೆ ಬದಲಾವಣೆಯಾಗಿದೆ ಎಂಬುದನ್ನು ಈ ಮಾನ್ಯ ಸಭೆ ತಿಳಿದುಕೊಳ್ಳುವುದು ಅವಶ್ಯಕ. 19ನೇ ಡಿಸೆಂಬರ್ 1967 ರಂದು ಈ ಸಭೆಯಲ್ಲಿ ಅವರು ಭಾಷಣ ಮಾಡುತ್ತಾ ಹೀಗೆ ಹೇಳಿದ್ದಾರೆ :

> "This problem is kept alive for a period of 10 years. What for ? I believe the Congress Party wants this struggle, strife and strain because they feel that they can thrive only under conflicts and struggles."

This is the charge he has made against the Congress and fortunately today he belongs to the Congress Party.

Continuing, Sri Siddaveerappa says :

> "Alas, what is it today ? Is it not the direct result of Boundary dispute that we see what it is today ? Is it not what we call anti-national or harmful in the interests of this country ?

Who is responsible? Why is your Central Government keeeping quiet? Why is the Congress Working Committee keeping mum? It has been said that the Chief Minister in the dead of night was made to get up and ultimarely was prevailed upon to agree to some resolution for setting up this commission."

He said :

"Why is your Central Government keeping quiet? Why is the Congress Working Committee keeping mum?"

(Sri H. M. Channabasappa rose)

Mr. SPEAKER.—Is the hon. Member Sri Channabasappa right in intervening this way?

Sri H. M. CHANNABASAPPA.—It is interjection.

Mr. SPEAKER.—It is not interjection.

Sri H. M. CHANNABASAPPA.—Please define interjection.

Mr. SPEAKER.—The Member knows what it is.

Sri H. M. CHANNABASAPPA.—That is why I interjected.

Sri VEERENDRA PATIL.—Let me quote again from hon. Member Sri Siddaveerappa's speech. He further says :

"What is the alternative we have? We have to support because it is one of paramount importance to the State. Whatever may be our differences with the Government, whatever may be our complaints against them, we must set them aside and go the whole hog with them in supporting it, though friends like Mr. Gopala Gowda think otherwise. I share his views, that if only those gentlemen were vigilant and minded their business irrespective of what their hierarchy at Delhi would speak of them, they could have done far better and argued their case much better and then perhaps the position of Karnatak would have much more improved than what it is today. That is what Mr. Mahajan himself says in a few words"

He further says :

ಇಲ್ಲ ಒಂದು ಮಾತು ಕೇಳುತ್ತೇನೆ. ಇವತ್ತು ಇವರಿಗೆ ಕೇಂದ್ರ ಸರ್ಕಾರವನ್ನು ಬೈಯುವುದಕ್ಕೆ ಇವರ ನಾಲಿಗೆಯಲ್ಲಿ ಶಕ್ತಿ ಇಲ್ಲ.

He further says :

"Therefore, as put by the Hon'ble Leader of the Opposition, whatever may be the gains or losses, whatever may be plus or minus, because every part of it remains with Mother India, we have to agree with the recommendations of Mahajan Commission. I am perfectly convinced there is no bias or prejudice. The only bias is impartially attending to the problem. He has done it. I therefore feel we must agree with his recommendations."

(SRI VEERENDRA PATIL)

We must agree with Mahajan Commission recommendations. ಎಂದು ಅವರು ಹೇಳಿರುವುದು ಡಿಸೆಂಬರಿನಲ್ಲಿ. ಇಂದು ರಿಕಮೆಂಡೇಷನ್ಸ್ ಬೇಡ ಬೇಡ ಎಂದು ಅನ್ನುತ್ತಿದ್ದಾರೆ. ಏತಕ್ಕೆ ಇದು ಹೀಗೆ ಎನ್ನುವುದು ಗೊತ್ತಿಲ್ಲ. ನಾನು ಇದನ್ನು ಕೇಳುವುದಿಲ್ಲ. ಆದರೆ ಜನತೆ ಇದನ್ನು ಕೇಳುತ್ತಾರೆ. ನೀವೇ ಹೇಳಿದ್ದನ್ನು ಏತಕ್ಕೆ ಬದಲಾವಣೆ ಮಾಡಿದಿರಿ ಎಂದು ಜನತೆ ಕೇಳುತ್ತಾರೆ. ಇವತ್ತು ಮಹಾಜನ್ ಕಮಿಷನ್ ವರದಿ ಒಪ್ಪಬೇಕು. ಯಾಕೆಂದರೆ ಕೇಂದ್ರ ಸರಕಾರದವರೇ ಈ ಕಮಿಷನ್ ನೇಮಕ ಮಾಡಿದವರು. ನಾವು ಇದನ್ನು ಕೇಳಿರಲಿಲ್ಲ. ಅವರೇ ನೇಮಕ ಮಾಡಿದ ಕಮಿಷನ್ ವರದಿ ಏತಕ್ಕೆ ಒಪ್ಪುತ್ತಿಲ್ಲ ಎಂಬುದಕ್ಕೆ ಕೇಂದ್ರ ಸರಕಾರದ ವಿರೋಧವಾಗಿ ಒಂದು ಬ್ರ ಶಬ್ದ ಚಕಾರ ಶಬ್ದ ತೆಗೆಯಲು ಇವರು ತಯಾರಿಲ್ಲ, ಮಹಾರಾಷ್ಟ್ರ ಸರಕಾರದ ವಿರೋಧವಾಗಿ ಮಾತನಾಡುವುದಕ್ಕೆ ಇವರು ತಯಾರಿಲ್ಲ. ಇವರಿಗೆ ಇದು ಸಂಬಂಧಪಟ್ಟದ್ದಲ್ಲ. ಇವರ ಪಾರ್ಟಿಗೆ ಸಂಬಂಧಪಟ್ಟದ್ದು, ಇವರ ಈ ಧೋರಣೆಯನ್ನು ಜನತೆ ತಿಳಿದುಕೊಳ್ಳುವುದಿಲ್ಲ ಎಂದು ಮಾತ್ರ ತಾವು ತಿಳಿದುಕೊಳ್ಳಬಾರದು ಎಂದು ಹೇಳುತ್ತೇನೆ. ನನಗೆ ಗೊತ್ತಿದೆ, ಜನತೆಗೂ ಗೊತ್ತಿದೆ.

ಇನ್ನೊಂದು ವಿಷಯ. ಶ್ರೀಮಾನ್ ಸಿದ್ಧವೀರಪ್ಪನವರು ಬಹುಶಃ ನನ್ನ ವಯಸ್ಸಿನವರಲ್ಲ. ಅವರಿಗೆ ಸಲಹೆ ಕೊಡುವ ಯೋಗ್ಯತೆ ನನಗೆ ಇಲ್ಲ. ಆದರೂ ಕೂಡ ಪ್ರೀತಿಯಿಂದ ಒಂದು ಸೂಚನೆ ಅವರ ಮುಂದೆ ಇಡುತ್ತೇನೆ. ನಾವು ತಿರುಪತಿಗೆ ಹೋಗುತ್ತೇವೆ. ತಿರುಪತಿ ಶ್ರೀವೆಂಕಟೇಶ ದೇವರ ದೇವಸ್ಥಾನದಲ್ಲಿ ಬೆಳಿಗ್ಗೆ ಎದ್ದರೆ ಪ್ರಾತಃಕಾಲದಲ್ಲಿ ಸುಪ್ರಭಾತ ಆಗುತ್ತದೆ. ಈ ಸುಪ್ರಭಾತದ ಪ್ರತಿಯೊಂದು ಪದ್ಯದ ಕೊನೆಗೆ ಶ್ರೀ ವೆಂಕಟೇಶಾಯ ನಮಃ ಎಂದು ಹೇಳುತ್ತಾರೆ. 1967 ನೇ ಸಾಲಿನಿಂದ ನಾನು ನೋಡುತ್ತಾ ಇದ್ದೇನೆ ಶ್ರೀಮಾನ್ ಸಿದ್ಧವೀರಪ್ಪನವರ ಪ್ರತಿಯೊಂದು ಭಾಷಣದಲ್ಲಿ ಶ್ರೀ ನಿಜಲಿಂಗಪ್ಪನವರ ಸ್ಮರಣೆ ಮಾಡದೇ ಇಲ್ಲ. ಶ್ರೀಮಾನ್ ನಿಜಲಿಂಗಪ್ಪನವರ ಸ್ಮರಣೆ ಮಾಡಿದಷ್ಟು ಸಲ ಇವರು ದೇವರ ಸ್ಮರಣೆ ಮಾಡಿದ್ದರೆ ಮುಕ್ತಿ ದೊರೆಯುತ್ತಿತ್ತು.

11-30 A.M.

ಆದ್ದರಿಂದ ಇನ್ನು ಮುಂದಕ್ಕಾದರೂ ಶ್ರೀ ನಿಜಲಿಂಗಪ್ಪನವರ ನಾಮಸ್ಮರಣೆಯನ್ನು ಕೈಬಿಟ್ಟು ದೇವರ ನಾಮಸ್ಮರಣೆ ಮಾಡಿ ಎಂದು ಅವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಈಗ ಆ ಪಕ್ಷದವರು ನನ್ನ ಮೇಲೆ ಒಂದು ಚಾರ್ಜನ್ನು ಮಾಡಿದ್ದಾರೆ. ಅದು ಏನೆಂದರೆ, "ನೀವು ಮಲಗಿದ್ದ ಮಹರಾಷ್ಟ್ರೀಯರನ್ನು ಬೆಳಗಾವಿಯಲ್ಲಿ ಮೊನ್ನೆ ಮಾತನಾಡಿ ಅವರನ್ನು ಹೊಡೆದೆಬ್ಬಿಸಿದಂತೆ ಮಾಡಿದ್ದೀರಿ" ಎಂಬುದು. You are whipping up the atmosphere aganist the Prime Minis'er. ಎಂದು ಅವರು ಹೇಳಿದ್ದಾರೆ. ಅಲ್ಲಿಂದ ಅವರು ಇನ್ನೂ ಏನು ಹೇಳಿದ್ದಾರೆ ಎಂದರೆ "ನೀವೂ ಆ ಪ್ರೈಮ್ ಮಿನಿಸ್ಟರ್ ಜೊತೆಗೆ ಬಂದು ಅವರ ಪಕ್ಷಕ್ಕೇ ಸೇರಿಕೊಳ್ಳಿ, ಹಾಗೆ ಸೇರಿಕೊಂಡು ಈ ಗಡೀ ಸಮಸ್ಯೆಗೆ ಏನಾದರೂ ಒಂದು ದಾರಿಯನ್ನು ಹುಡಕಬೇಕು" ಎಂದು ಹೇಳಿದ್ದಾರೆ. ಅವರಿನ್ನೂ ಹಾಗೇ ಮುಂದುವರಿದು "ನೀವೇತಕ್ಕೆ ಆ ಸಿಂಡಿಕೇಟಿನಲ್ಲಿದ್ದೀರಿ! ಇಂಡಿಕೇಟಿಗೇ ನೀವೂ ಬಂದು ಬಿಡಿ. ಆಗ ಈ ಪ್ರಾಬ್ಲಂಗಳೆಲ್ಲಾ ತಾವಾಗೇ ಮುಗಿಯುತ್ತದೆ" ಎಂಬುದಾಗಿ ಮೇಲ್ಮನೆಯ ಸದಸ್ಯರೊಬ್ಬರು ನನಗೆ ಹೇಳಿದರು. ಆದರೆ ಅದರಿಂದ ಏನೊಂದು ಮೂಲಭೂತ ಸಮಸ್ಯೆ ಉದ್ಭವಾಗುತ್ತಧೆ ಎಂದರೆ ನಾನು ಕೇಂದ್ರ ಸರ್ಕಾರ ಯಾವ ಪಕ್ಷಕ್ಕೆ ಸೇರಿದೆಯೋ ಅದಕ್ಕೇ ನಾನೂ ಸೇರದೆ ಅದನ್ನು ನಾನು ಮೈಮೇಲೆ ಹಾಕಿಕೊಂಡಿದ್ದೇನೆ, ಅದರಿಂದ ಈ ಕರ್ನಾಟಕಕ್ಕೆ ಈ ಹಣೇಬರಹ ಆಯಿತು ಅನ್ನುವ ಮಾತು ಹಾಗಿರಲಿ, ಆದರೆ ಆ ಮೂಲಭೂತ ಪ್ರಶ್ನೆಯ ಹಿಂದೆ ಈ ಒಂದು ರಾಜಕೀಯ ಬಿಟ್ಟರೆ ಅದರ ಹಿಂದೆ ಯಾವ ಒಂದು ತತ್ವವಾಗಲೀ, ಅಥವಾ ನೀತಿಯಾಗಲೀ, ಆ ಪ್ರಪೋಜಲ್‌ನಲ್ಲಿ ಇದ್ದಂತೆ ಕಂಡುಬರುವುದಿಲ್ಲ. ಅದರ ಒಟ್ಟು ಸಾರಾಂಶ ನೀವು ಪ್ರೈಂ ಮಿನಿಷ್ಟರನ್ನು ಬೈದಿದ್ದೀರಿ, ಅದಕ್ಕೆ ನಿಮಗೆ ಇದೇ ಶಿಕ್ಷೆ ಎಂಬುದಾಗಿ ಆ ಪಕ್ಷದಲ್ಲಿರತಕ್ಕ ಸದಸ್ಯರೆಲ್ಲರೂ ಬಹಳ ಅಧಿಕಾರವಾಣಿಯಿಂದ ಇದನ್ನು ನುಡಿದಿದ್ದಾರೆ. ಬಹುಶಃ ಅವರು ಆ ಅಧಿಕಾರ ಪಕ್ಷದಲ್ಲಿರುವುದರಿಂದ ಅವರಿಗೆ ಆ ಒಂದು ಹೆಚ್ಚಿನ ಮಾಹಿತಿ ಇರಬಹುದು, because they are very close to the Prime Minister and her party. ಈ ಮಾತುಗಳನೆಲ್ಲಾ ಹೇಳಿದ್ದು ಅವರೇ. ಇದರಿಂದ ಮುಂದೇನು ಒಂದು ಪ್ರಶ್ನೆ ಉದ್ಭವ ಆಗುತ್ತದೆಂದರೆ, ನಾನು ಈ ದಿವಸ ಆ ತತ್ವವನ್ನು ಒಪ್ಪಿಕೊಂಡರೆ ಮೊದಲು ಡೆಮಾಕ್ರಸಿಗೆ ತಿಲಾಂಜಲಿ ಕೊಡಬೇಕಾಗುತ್ತದೆ. ಅದಕ್ಕೆ ನಾನೀಗ ಒಂದು ಉದಹಾರಣೆಯನ್ನು ಕೊಡುತ್ತೇನೆ : ನಾನು ಈ

ದಿವಸ ಈ ಕರ್ನಾಟಕದ ರಕ್ಷಣೆಯನ್ನು ಮಾಡಬೇಕಾಗಿದ್ದರೆ ನಾನು ಪ್ರೈಂ ಮಿನಿಷ್ಟರನ್ನು ಮೇಲೆ ಹಾಕಿಕೊಳ್ಳಬಾರದು, ಅವರನ್ನು ಬೈಬಾರದು, ಅವರು ಏನು ಹೇಳಿದರೂ ಅದಕ್ಕೆ ನಾನು ಆಲ್‌ರೈಟ್ ಅನ್ನುತ್ತಿರಬೇಕು, ಅವರು ಹೇಳಿದ್ದಕ್ಕೆಲ್ಲಾ ಕೈ ಎತ್ತಬೇಕು ಅನ್ನುವುದಾದರೆ, ನಾಳೆ ದಿವಸ ಇಲ್ಲಿ ನಮ್ಮ ರಾಜ್ಯದಲ್ಲಿ ಶ್ರೀಮಾನ್ ಶಿವಪ್ಪನವರಾಗಲೀ, ಸಿದ್ದವೀರಪ್ಪನವರಾಗಲೀ ಅಥವಾ ಚನ್ನಬಸಪ್ಪನವರಾಗಲೀ ಅವರವರ ಕ್ಷೇತ್ರದಲ್ಲಿ ಏನಾದರೂ ಒಂದು ಸಾರ್ವಜನಿಕರ ಕೆಲಸ ಆಗಬೇಕಾಗಿದ್ದರೆ ಅವರು ಮುಖ್ಯಮಂತ್ರಿಯ ಪಕ್ಷದಲ್ಲಿ ಇಲ್ಲದಿರುವುದರಿಂದ, ಅವರು ಮುಖ್ಯಮಂತ್ರಿಗಳನ್ನು ಹೊಂದಿಕೊಂಡು ಇದ್ದರೇನೇ ಅವರ ಕೆಲಸಗಳಾಗುತ್ತವೆ, ಇಲ್ಲದಿದ್ದರಿಲ್ಲ ಎನುವಂತಾಯಿತು. ಆ ಪಕ್ಷದವರು ಹೇಳುತ್ತಿರುವ ತತ್ವ ಅಥವಾ ಆ ಒಂದು ನೀತಿಯೇನಿದೆ ಅದರಲ್ಲಿ ಈಗ ನಾನು ಹೇಳುತ್ತಿರುವ ವಿಷಯಗಳೂ ಅಡಕವಾಗುತ್ತವೆ ; ಇವೆಲ್ಲಕ್ಕೂ ಒಂದೇ ತತ್ವ ... ...

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಶ್ರೀಮಾನ್ ಸಿದ್ದವೀರಪ್ಪನವರು ಆ ಪಕ್ಷದವರ ಕೈಗೆ ಸಿಕ್ಕಿ ಕೆಟ್ಟರು ... ...

ಶ್ರೀ ಆರ್. ದಯಾನಂದಸಾಗರ್.—ನಾವು ಹಾಗೆ ಎಂದೂ ಹೇಳಲಿಲ್ಲ. ನಾವು ಹೇಳಿದ್ದು ಸ್ಟೇಟ್ಸ್‌ಮನ್ ರೀತಿ ನೀವು ವರ್ತಿಸಬೇಕಾಗಿತ್ತು ಎಂದು.

ಶ್ರೀ ವೀರೇಂದ್ರ ಪಾಟೀಲ್.—ಈ ತತ್ವವನ್ನು ನಾವು ಎಲ್ಲದಕ್ಕೂ ಅಪ್ಲೈಮಾಡುವುದಕ್ಕೆ ಹೊರಟರೆ, ವಿರೋಧ ಪಕ್ಷಗಳವರು ಯಾವತ್ತೂ ಆಳುವ ಪಕ್ಷದವರನ್ನು ಅನುಸರಿಸಿಕೊಂಡೇ ಹೋಗಬೇಕು, ಇಲ್ಲದಿದ್ದರೆ ಅವರ ಕ್ಷೇತ್ರಗಳಲ್ಲಿ ಯಾವ ಕೆಲಸಗಳೂ ಆಗುವಂತಿಲ್ಲ ಎನ್ನತಕ್ಕ ಅರ್ಥವನ್ನು ಅವರ ಭಾಷಣಗಳು ಕೊಡುತ್ತವೆ.

ಶ್ರೀ ಎಚ್. ಸಿದ್ದವೀರಪ್ಪ.—ಯಾರು ಹಾಗೆ ಹೇಳಿದ್ದಾರೆ! ತೆಗೆಯಿರಿ ಹಾಗೆ ಎಲ್ಲಿ ಹೇಳಿದ್ದೇವೆ ?

ಶ್ರೀ ವೀರೇಂದ್ರ ಪಾಟಿಲ್.—ತಾವುಗಳೆಲ್ಲರೂ ಮಾಡಿರತಕ್ಕ ಭಾಷಣಗಳೇನಿವೆ ಅವುಗಳು ಮತ್ತೆ ತಮಗೆ ತಮ್ಮ ಒಪ್ಪಿಗೆ ಹಾಗೂ ಕರೆಕ್ಷನ್ನಿಗೆ ಬರುತ್ತವೆ, ಆಗ ತಾವು ಅವುಗಳನ್ನು ಓದಿನೋಡಿ, ಆಗ ಗೊತ್ತಾಗುತ್ತದೆ.

ಶ್ರೀ ಅಜೀಜ್ ಸೇಟ್.—ತಾವು ಹೇಳುತ್ತಿರುವುದೆಲ್ಲಾ ತೀರಾ ಅಸತ್ಯ, ಅನ್ಯಾಯ... ...

ಶ್ರೀ ವೀರೇಂದ್ರ ಪಾಟೀಲ್.—ನಾವು ಈ ಒಂದು ಮೂಲಭೂತ ಪ್ರಶ್ನೆಯನ್ನು ಬಿಡಿಸಬೇಕು. ಈ ದಿವಸ ನಾವು ಆಡಳಿತವನ್ನು ನಡೆಸುತ್ತಿರುವುದು ಡೆಮಾಕ್ರಸಿ ತತ್ವಗಳ ಪ್ರಕಾರ. ನಮ್ಮದು ಒಂದು ಫೆಡರಲ್ ಸ್ಟ್ರಕ್ಚರಲ್ ಆಡಳಿತ. ಇದರಲ್ಲಿ ಯಾವ ಕಾಲಕ್ಕೆ ಆಡಳಿತ ಯಾವ ಪಕ್ಷದ ಕೈ ಸೇರುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಅಥವಾ ಎಲ್ಲಿಯತನಕ ಆಡಳಿತ ಇಂಥಾ ಪಕ್ಷದ ಕೈಲೇ ಇರುತ್ತದೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಹಾಗಿರುವಾಗ ಕೇಂದ್ರದಲ್ಲಿ ಯಾವ ಪಕ್ಷ ಆಡಳಿತವಲ್ಲಿರುತ್ತದೋ ಅದೇ ಪಕ್ಷಗಳು ಎಲ್ಲಾ ರಾಜ್ಯಗಳಲ್ಲೂ ಆಡಳಿತವನ್ನು ನಡೆಸಬೇಕು ಎನ್ನುವುದು ಸಾಧ್ಯವಾದುದಲ್ಲ. ಹಾಗೆ ಹೇಳುವುದಾದರೆ ಆಗ ಇಲ್ಲಿ ಡೆಮಾಕ್ರಸಿಗೆ ಜಾಗವಿಲ್ಲ ಅದು ಉಳಿಯುವುದಕ್ಕೂ ಸಾಧ್ಯವಿಲ್ಲ.

Sri H. SIDDAVEERAPPA.—Everybody is faring better, even the D.M.K.

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಎದ್ದಿರತಕ್ಕ ಮೂಲ ಪ್ರಶ್ನೆ ಏನೆಂದರೆ ನಾನು ಮಲಗಿದ್ದ ಮಹರಾಷ್ಟ್ರೀಯರನ್ನು ಬಡಿದೆಬ್ಬಿಸಿದ್ದೇನೆ ಅಂತ. ಆ ಮಹಾರಾಷ್ಟ್ರೀಯರು ಈ ವಿಚಾರದಲ್ಲಿ ಯಾವತ್ತೂ ಮಲಗಿರತಕ್ಕವರಲ್ಲ. ನಾನು ಬೆಳಗಾಮಿಯಲ್ಲಾದರೂ ಏನು ಹೇಳಿದ್ದೇನೆ ? ನಾನು ಬೆಳಗಾಮಿಯನ್ನು ವಿಭಜನೆಮಾಡುವುದಕ್ಕೆ ಎಂದೂ ಅವಕಾಶ ಕೊಡುವುದಿಲ್ಲ ಎಂಬುದಾಗಿ ಹೇಳಿದ್ದೇನೆ. ನಾನು ಒಂದು ವೇಳೆ ಹಾಗೆ ಹೇಳದೆ ಅದನ್ನು ವಿಭಜನೆಮಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಏನಾದರೂ ಹೇಳಿದ್ದಿದ್ದರೆ, ಆಗ ಇದೇ ಸಭೆಯಲ್ಲಿ ಇದೇ ಮಾನ್ಯ ಸದಸ್ಯರುಗಳು "ಅದೇನು ಬೆಳಗಾಮಿಯಲ್ಲಿ ಹಾಗೆ ಮಾತನಾಡಿದ್ದೀರಲ್ಲ ? ಅದೇನು ನಿಮ್ಮ ಸ್ವಂತ ಆಸ್ತಿಯೇ ? ಆ ಬೆಳಗಾಂ ಏರಿಯಾ ನಿಮ್ಮ ಪಿತ್ರಾರ್ಜಿತ ಆಸ್ತಿಯೇ ? ಎಂದು ಕೇಳುತ್ತಿದ್ದರು. ಅದರೆ ಅ ದಿವಸ ನಾನು ಅಲ್ಲಿ ಏನು ಮಾತನಾಡಿದ್ದೇನೆ ಅದು ಇದೇ ಮನೆಯಲ್ಲಿ ಮಹಾಜನ್ ವರದಿಯ ಬಗ್ಗೆ ಚರ್ಚೆ ನಡೆದಾಗ ಇಲ್ಲಿ ಏನೊಂದು ತೀರ್ಮಾನ ಆಗಿತ್ತೋ ಅದಕ್ಕೆ ಒಂದು ಚಾಚೂ ಹೆಚ್ಚುಕಡಮೆಯಾಗದಂತೆ ಮಾತನಾಡಿದ್ದೇನೆ. ಹಾಗೇನಾದರೂ ನಾನು ಅಲ್ಲಿ ಹೆಚ್ಚುಕಡಮೆ ಮಾತನಾಡಿದ್ದರೆ ತೋರಿಸಲಿ ? ಅದರೆ ನಾನು ಯಾರೊಬ್ಬರನ್ನೂ ಒಂದು ಎಂಬಾರಾಸಿಂಗ್ ಸಿಚುಯೇಷನ್ನಿನಲ್ಲಿಡುವುದಕ್ಕೆ ತಯಾರಾಗಿಲ್ಲ.

(ಶ್ರೀ ವೀರೇಂದ್ರ ಪಾಟೀಲ್)

ಈ ದಿವಸ ಅವರು ಅಲ್ಲಿ ಮಂತ್ರಿಗಳಾಗಿದ್ದಾರೆ. ಅವರು ನಾನು ಬೆಳಗಾಂನಲ್ಲಿದ್ದಾಗ ಅಲ್ಲಿ ಬಂದರು. ಅವರು ಯಾರು ಎನ್ನುವುದು ಮೊದಲು ನನಗೆ ಗೊತ್ತಿರಲಿಲ್ಲ. ಅವರು ನನ್ನ ರೂಮಿನೊಳಗೆ ಬಂದು ಕೈಮುಗಿದರು ಅದಕ್ಕೆ ನಾನೂ ಕೂಡ ಕೈ ಮುಗಿದು ಕುಳಿತುಕೊಳ್ಳಿ ಎಂದು ಹೇಳಿದೆ. ಆಗ ಅಲ್ಲಿಗೆ ಬಂದಿದ್ದ ಆ ವ್ಯಕ್ತಿಗಳು ನಾನು ಈ ಗಡೀ ವ್ಯವಹಾರದಲ್ಲಿ ಎಲ್ಲರಿಗೂ ಒಪ್ಪಿಗೆಯಾಗುವಂಥ ಒಂದು ರಾಜೀ ಸೂತ್ರವನ್ನು ಕಂಡುಹಿಡಿದಿದ್ದೇನೆ. ಅದಕ್ಕಾಗಿ ನಾನೀಗ ತಮನ್ನು ಕಾಣಲಿಕ್ಕಾಗಿ ಬಂದಿದ್ದೇನೆಂದು ಹೇಳಿದರು. ಅಷ್ಟೇ ಅಲ್ಲವೆ ಅವರು ಈ ಗಡೀ ವ್ಯವಹಾರ ಕಳೆದ 12 ವರ್ಷಗಳಿಂದಲೂ ನಡೆಯುತ್ತಿದೆ. ಆದರೆ ಮಹಾರಾಷ್ಟ್ರೀಯರಿಗೆ ಎಷ್ಟು ದಿನಗಳವರೆಗೂ ಇದನ್ನು ಹಿಡಿದಾಡಿದ್ದಕ್ಕೆ ಅವರು ಫೇಸ್ ಷೇವಿಂಗಿಗಾಗಿ ಬೆಳಗಾಂನ ಯಾವುದಾದರೊಂದು ತುಕುಡಿಯನ್ನು ಅವರಿಗೆ ಕೊಟ್ಟುಬಿಡಿ ಎಂಬುದಾಗಿ ಅವರು ಹೇಳಿದರು ಅದನ್ನು ಕೇಳಿದ ಕೂಡಲೆ ನನಗೂ ಕೂಡ ಬಹಳ ಸಿಟ್ಟುಬಂದಿತು. ಆ ಸಂದರ್ಭದಲ್ಲಿ ನಾನು ಅಲ್ಲಿ ಒಂದು ಇಂಚು ಸ್ಥಳ ಕೊಡುವುದಕ್ಕೆ ನಾನು ತಯಾರಿಲ್ಲ ಎಂದು ಹೇಳಿದ್ದುಂಟು; ಇಲ್ಲ ಎಂದು ಹೇಳುವುದಿಲ್ಲ. ಆದರೆ ಹಾಗೆ ಹೇಳುವುದಕ್ಕೆ ಬದಲಾಗಿ ನಾನು ಆಗಲಿ ನಿಮ್ಮ ಸಲಹೆಯನ್ನು ವಿಚಾರಮಾಡುತ್ತೇನೆಂದು ಅವರಿಗೆ ನಾನು ಹೇಳಬೇಕಾಗಿತ್ತೇನು? ಈ ವಿಚಾರವನ್ನು ಈ ಮಾನ್ಯ ಸಭೆ ವಿಚಾರಮಾಡಲಿ. ಆ ಸಂದರ್ಭದಲ್ಲಿ ನಾನು ಬೆಳಗಾಮನ್ನು ಇಲ್ಲಿ ಒಂದು ಬರ್ಲಿನ್ ಮಾಡಲು ತಯಾರಿಲ್ಲ ಎಂದು ಹೇಳಿದ್ದೇನೆ; ಈಗಲೂ ಹೇಳುತ್ತೇನೆ.

ಅವರು ಪಾರ್ಲಿಮೆಂಟ್ ಮೆಂಬರ್‌ಗೆ ಹೇಳುತ್ತೇನೆ ಎಂದರು. ನಾನು ಹೇಳಿದೆ ಅದು ಸಾಧ್ಯ ಇಲ್ಲ ಎಂದು. ಯಾರಿಗೆ ಬೇಕಾದರೂ ಹೇಳಿಕೊಳ್ಳಿ ಎಂದು ಅಲ್ಲಿಗೆ ಕಳುಹಿಸಿಕೊಟ್ಟೆ. ಇವಾದ ಮೇಲೆ ಕೇಂದ್ರದ ಮಂತ್ರಿಗಳು ನನಗೆ ಎರಡು ಸಲ ಹೇಳಿಕಳುಹಿಸಿದರು. ಈ ವಿಷಯ ನನ್ನ ಮುಂದೆ ಹೇಳಿದಿರಿ, ಇನ್ನು ಯಾರ ಮುಂದೆಯೂ ಹೇಳಬೇಡಿ ಎಂದು ಸ್ಪಷ್ಟವಾಗಿ ಹೇಳಿದೆ. ಇವಾಗಿ ಇನ್ನು ಎರಡು ತಿಂಗಳಾಗಿಲ್ಲ ಮಹಾರಾಷ್ಟ್ರದವರು ನಾಗಪೂರ್‌ನಲ್ಲಿ ರೆಸಲ್ಯೂಷನ್ ಮಾಡಿ ಅಲ್ಟಿಮೇಟಂ ಕೊಟ್ಟಿದ್ದಾರೆ. ಪ್ರಧಾನ ಮಂತ್ರಿಗಳಿಗೂ ಕಳುಹಿಸಿದ್ದಾರೆ. ದುರ್ದೈವದಿಂದ ಕೇಂದ್ರ ಸರ್ಕಾರಕ್ಕೆ ಎಲ್ಲರೂ ಅಲ್ಟಿಮೇಟಂ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ಒಂದು ಎಕ್ಸಿಕ್ಯೂಟೀವ್ ಕಮಿಟಿ ಮೀಟಿಂಗ್‌ನಲ್ಲಿ ಶ್ರೀಮಾನ್ ಚವಾಹ್ಣರು ಇದ್ದರು. ಬಡ್ಜೆಟ್ ಸೆಷನ್ ಪ್ರಾರಂಭದಲ್ಲಿ ಇರುವುದನ್ನು ಮಾಡಿಫೈ ಮಾಡಿ ಬಡ್ಜೆಟ್ ಮುಗಿಯುವುದರೊಳಗೆ ಇದನ್ನು ಇತ್ಯರ್ಥ ಮಾಡಬೇಕೆಂದು ಹೇಳುತ್ತಾರೆ. ನಾನು ತಕ್ಷಣ ಪ್ರೈಮ್‌ಮಿನಿಷ್ಟರ್‌ಗೆ ಕಾಗದ ಹಾಕಿದ್ದೇನೆ. ಯಾವ ಮಿನಿಷ್ಟರ್ ಇಲಾಖೆಯಲ್ಲಿ ಈ ಕೇಸ್ ಪ್ರೊಸೆಸಿಂಗ್ ನಡೆಯುತ್ತಾ ಇದೆಯೋ ಅವರ ಎದುರಿಗೆ ಈ ರೆಸಲ್ಯೂಷನ್‌ನ್ನು ಪಾಸು ಮಾಡಿದ್ದಾರೆ. ಅದನ್ನು ನೋಡಿ ದಿಗುಡು ಬಡಿದ ಹಾಗಾಗಿದೆ ಎಂದು ಹೇಳಿದೇನೆ. ಅದಕ್ಕೆ ಉತ್ತರ ಇಲ್ಲ. ಇನ್ನೊಂದು ವಿಚಾರ ನನಗೆ ಗೊತ್ತಿದ್ದ ಹಾಗೆ ಪ್ರಧಾನ ಮಂತ್ರಿಗಳನ್ನ ನಾನು ಎಂದೂ ಟೀಕೆ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ಒಂದುವೇಳೆ ಏನಾದರೂ ಮಾಡಿದ್ದರೆ ಪ್ರತಿಭಟನೆ ಮಾಡಿದ್ದೇನೆ. ಅದನ್ನು ಇಲ್ಲ ಎಂದು ಹೇಳುವುದಿಲ್ಲ. ಮುಖ್ಯ ಮಂತ್ರಿಯಾಗಿ ಕರ್ನಾಟಕ ಹಿತರಕ್ಷಣೆ ಮಾಡುವ ಜವಾಬ್ದಾರಿ ನಮಗೆ ಇದೆ. ಏನು ಹೇಳಿದರೂ ಬಾಯಿಬಿಟ್ಟುಕೊಂಡು ಕೂತುಕೊಳ್ಳಬೇಕು ಎನ್ನುವ ನೀತಿ ನನ್ನದಲ್ಲ. ಪ್ರಧಾನ ಮಂತ್ರಿಗಳ ವ್ಯಕ್ತಿತ್ವದ ಬಗ್ಗೆ ಪಬ್ಲಿಕ್ ಆಗಿ ಟೀಕೆ ಮಾಡುವುದಕ್ಕೆ ಹೋಗಿಲ್ಲ. ಏತಕ್ಕೆ ಜಗಳ ಉಂಟಾಯಿತು ಮತ್ತು ಏನು ಪರಿಸ್ಥಿತಿ ಉಂಟಾಗಿದೆ ಎನ್ನುವ ವಿಚಾರವಾಗಿ ಬೆಳಗಾಂನಲ್ಲಿ ಸುಮಾರು ಒಂದು ಗಂಟೆ ಮೇಲೆ ಹಿಸ್ಟರಿ ಟ್ರೇಸ್ ಔಟ್ ಮಾಡಿದೆ. ಪ್ರತಿಯೊಬ್ಬರಿಗೂ ಈವೊತ್ತಿನ ದಿವಸ ದೇಶದಲ್ಲಿ ಪ್ರಜಾರಾಜ್ಯದ ಭದ್ರತೆ ಮುಖ್ಯ. ಈಗ ಏನು ನಡೆಯುತ್ತಾ ಇದೆ ಅದು ದಿನಾಲೂ ಪೇಪರ್‌ನಲ್ಲಿ ನೋಡುತ್ತಾ ಇದ್ದೇವೆ. ಟ್ಯಾಕ್ಸನ್ನು ಕಡಮೆ ಮಾಡಿದರೆ ಓಟು ಮಾಡುತ್ತಾರೆ, ಇಲ್ಲದಿದ್ದರೆ ಓಟು ಮಾಡುವ ಹಾಗಿಲ್ಲ ಎನ್ನುವ ಪರಿಸ್ಥಿತಿ ಉದ್ಭವವಾಗಿದೆ. ಹಿಂದೆ ದೇಶ ಆಳಬೇಕಾಗಿದ್ದರೆ ಯುದ್ಧ ಮಾಡಬೇಕಾಗಿತ್ತು, ದಂಪತ್ತಿ ಬರಬೇಕಾಗಿತ್ತು. ಆದರೆ ಈವೊತ್ತು ಅದರ ಅವಶ್ಯಕತೆ ಇಲ್ಲ. ಈವೊತ್ತಿನ ದಿವಸ ಮನುಷ್ಯನ ಕೈಯ್ಯಲ್ಲಿ ವಿಜ್ಞಾನದ ಶಕ್ತಿ ಬಂದಿದೆ. ರಿಮೋಟ್ ಕಂಟ್ರೋಲ್ ಶಕ್ತಿಯ ಮೂಲಕ ಮನುಷ್ಯನನ್ನು ಚಂದ್ರಲೋಕಕ್ಕೂ ಕಳುಹಿಸಬಹುದು. ಎಲ್ಲಿ ಬೇಕಾದರೂ ಸುತ್ತಾಡಬಹುದು. ನಮ್ಮ ದೇಶದಲ್ಲಿ ಎಲ್ಲರೂ ಕಚ್ಚಾಡುತ್ತಿದ್ದಾರೆ. ಎರಡನೇ ರಾಷ್ಟ್ರದವರು ಚೇತರಿಸಿಕೊಂಡು ಹೋಗುತ್ತಾ ಇರುವಾಗ ನಮ್ಮ ರಾಷ್ಟ್ರ ಒಂದು ಗ್ರೇಸಿಂಗ್ ಗ್ರೌಂಡ್ ಆಗಿ ಇಲ್ಲಿ ಹುಲ್ಲು ಮೇಯುವುದಕ್ಕೆ ಬರುತ್ತಿದ್ದಾರೆ. ಎಂಬಾಸಿಸ್ ಆಕ್ಟೀವ್ ಆಗಿ ಇವೆ ಎಂದು ಹೇಳಿದೆನೇ ಹೊರತು ಪ್ರಧಾನ ಮಂತ್ರಿಗಳ ವಿಷಯ ಅಥವಾ ಕೇಂದ್ರ ಸರ್ಕಾರದ ವಿಷಯ ಹೇಳಲಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನೀವು ಏತಕ್ಕೆ ಕಾಂಟ್ರಡಿಕ್ಟ್ ಮಾಡಲಿಲ್ಲ? ಟೈಮ್ಸ್ ಆಫ್ ಇಂಡಿಯಾ, ಡೆಕ್ಕನ್ ಹೆರಾಲ್ಡ್ ಮತ್ತು ಹಿಂದೂ ಪೇಪರ್ ಎಲ್ಲದರಲ್ಲೂ ಬಂದಿದೆ.

Sri R. DAYANANDA SAGAR.—It is reported that the Prime Minister has gone to the foreign embassy for consultation. As Chief Minister he should have contradicted it. Why has he not done it when a serious allegation has been made ?

ಶ್ರೀ ವೀರೇಂದ್ರ ಪಾಟೀಲ್.—ನಾನು ಈ ಮನೆಯಲ್ಲಿ ಏನು ಹೇಳುತ್ತಾ ಇದ್ದೇನೆ ಪ್ರತಿಯೊಂದೂ ರಿಕಾರ್ಡ್ ಆಗುತ್ತಾ ಇದೆ. ಅಧಿಕಾರಕ್ಕೆ ಅಂಟಿಕೊಂಡಿದ್ದೇನೆ ಎಂದು ಏನೂ ಇಲ್ಲ. ಆ ಪ್ರಶ್ನೆ ಬಂದಾಗ ಯಾರಿಗೂ ಹೆದರುವ ಹಾಗಿಲ್ಲ. ನನ್ನದು, ನಾನು ಮಾಡಿಕೊಳ್ಳಬೇಕು ಎನ್ನುವ ಪ್ರಶ್ನೆ ಇಲ್ಲ. ಅದಕ್ಕೆ ಹೇಳಿದೆ. ಪ್ರಧಾನ ಮಂತ್ರಿಗಳು ಯಾರೇ ಆಗಲಿ ಕರ್ನಾಟಕದ ಹಿತದೃಷ್ಟಿಯಿಂದ ಕೆಡುಕು ಉಂಟುಮಾಡಿದ್ದರೆ ಅನ್ಯಾಯಮಾಡುವುದಕ್ಕೆ ಪ್ರಯತ್ನ ಮಾಡಿದ್ದರೆ ಪ್ರತಿಭಟನೆ ಮಾಡುವುದಕ್ಕೆ ನಾನು ಮೊದಲನೆಯವನಾಗಿ ಇರುತ್ತೇನೆ. ಮುಖ್ಯ ಮಂತ್ರಿಯ ಜವಾಬ್ದಾರಿ ಏನು ಎಂದು ಅರಿತುಕೊಂಡಿದ್ದೇನೆ. ಮುಖ್ಯ ಮಂತ್ರಿಯು ಹೇಗೆ ಮಾತನಾಡಬೇಕು ಎಂದು ಸಾಕಷ್ಟು ಪ್ರಮಾಣದಲ್ಲಿ ತಿಳಿದುಕೊಂಡಿದ್ದೇನೆ.

Sri R. DAYANANDA SAGAR.—Sir, as Chief Minister, he is bound to contradict. I am asking him because he is the Chief Minister. I have nothing to do with Sri Veerendra Patil.

Mr. SPEAKER.—I have asked the hon. member not to intervene in this way. If the Hon. Chief Minister were to yield, I can allow him.

Sri VEERENDRA PATIL.—Sir, I am not yielding.

Sri H. SIDDAVEERAPPA.—Sir I rise to a Point of Order.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ವಾಮಿ, ಪಾಯಿಂಟ್ ಆಫ್ ಆರ್ಡರನ್ನು ಸುಮ್ಮಸುಮ್ಮನೆ ಎತ್ತಿ ಮಾತನಾಡಬಹುದೇ ?

Mr. SPEAKER.—Whenever a Point of Order is raised, under the rules, I am bound to hear the hon. Member and after hearing him give my Ruling. I request Siddaveerappa to state his point very briefly.

Sri H. SIDDAVEERAPPA.—Sir, the situation is such that it may not be possible for me to speek very briefly. We are prepared to sit till 5-00 P.M., but let it be discussed fully.

Now I have a point of order. I want to know whether the Chief Minister of State is in order in hurling criticisms or abuses against the Prime Minister especially, when she is not here to answer to the allegations ?

Mr. SPEAKER.—It is very clear that nobody in the House is entitled to abuse anybody who is not present in this House. I have heard the Hon. Chief Minister very patiently. He is trying to comment upon the reported proposals of the Prime Minister. The proposal before this House is about the integrity of the State of Mysore. When certain proposals are before this House, not only the Chief Minister but also any member of this House is entitled to comment upon it. The Hon. Chief Minister is not hurling any abuses but only commenting upon the proposals.

ಶ್ರೀ ವೀರೇಂದ್ರ ಪಾಟೀಲ್.—ನಾನು ಬಹಳ ದುಃಖದಿಂದ ಇಲ್ಲಿ ಹೇಳಬೇಕಾಗಿದೆ. ನಾನು ಯಾವ ದಾಟಿಯಲ್ಲಿ ಹೇಳುತ್ತಿದ್ದೇನೆ ಅದನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ತಪ್ಪಾಗಿ ಅರ್ಥಮಾಡಿಕೊಳ್ಳುತ್ತಿದ್ದಾರೆ. ನಾನು ಇಲ್ಲಿ ಪ್ರಧಾನ ಮಂತ್ರಿಗಳ ಬಗ್ಗೆ ಟೀಕೆಮಾಡಲು ಹೋಗುತ್ತಿಲ್ಲ. ಅವರಿಗೆ ಮಾನ್ಯ ಸದಸ್ಯರು ಎಷ್ಟು ಗೌರವವನ್ನು ಕೊಡಬೇಕೆಂದು ಇದ್ದಾರೋ

(ಶ್ರೀ ವೀರೇಂದ್ರ ಪಾಟೀಲ್)

ಅದೇ ಗೌರವವನ್ನು ಪ್ರಧಾನ ಮಂತ್ರಿಗಳಿಗೆ ನಾನೂ ಕೊಡುತ್ತಿದ್ದೇನೆ. ನನಗೂ ಅವರ ಹಾಗೆ ಅಷ್ಟೇ ಗೌರವ ಅವರ ಬಗ್ಗೆ ಇದೆ. ಅವರ ವಿಚಾರಗಳ ಬಗ್ಗೆ ನಾನು ಎಲ್ಲೂ ಟೀಕೆ ಮಾಡಿಲ್ಲ. ನಾನು ಈಚೆಗೆ ಒಂದು ಸ್ಟೇಟುಮೆಂಟು ಪತ್ರಿಕೆಗಳಿಗೆ ಕೂಡ ಕೊಟ್ಟಿದ್ದೇನೆ. ಅದನ್ನು ಪತ್ರಿಕೆಗಳಲ್ಲಿ ಓದಿದರೆ ಎಲ್ಲರಿಗೂ ಚೆನ್ನಾಗಿ ಗೊತ್ತಾಗುತ್ತದೆ. ಒಬ್ಬರ ಹಿತಕ್ಕಾಗಿ ರಾಜ್ಯವನ್ನು ಬಲಿಕೊಡಲು ನಾನು ಸಿದ್ಧನಿಲ್ಲ. ಪರಸ್ಪರ ಕೂಡಿ ಕರ್ಣಾಟಕದ ರಾಜ್ಯದ ಜನರ ಹಿತವನ್ನು ರಕ್ಷಣೆ ಮಾಡುವ ಜವಾಬುದಾರಿ ನಮ್ಮೆಲ್ಲರ ಮೇಲೆ ಇರುವುದರಿಂದ ಇದನ್ನು ಕಾಪಾಡಲು ಹೋರಾಡಲೇಬೇಕಾಗುತ್ತದೆ. ಇದಕ್ಕಾಗಿಯೇ ಅವರ ಪ್ರಪೋಸಲ್ ರೈಟಿಂಗ್‌ನಲ್ಲಿ ಬರಲಿ ಎಂದು ಹೇಳಿವೆ ಮತ್ತು ಅದಕ್ಕಾಗಿ ಪ್ರಧಾನ ಮಂತ್ರಿಗಳಿಗೂ ಪತ್ರ ಬರೆದು ಕಳಿಸಿದ್ದೆ. ಆದರೆ ಇನ್ನೂ ಅವರಿಂದ ಅದು ಬರಲಿಲ್ಲ. ಇದರಲ್ಲಿ ಯಾವ ಕಾಂಟ್ರವರ್ಸಿಯನ್ನೂ ನಾನು ಇಲ್ಲಿ ತರಲು ಇಷ್ಟಪಡುವುದಿಲ್ಲ ಎಂದು ಮತ್ತೊಮ್ಮೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾನು ಯಾವ ಧೋರಣೆಯನ್ನು ತಾಳಿದ್ದೇನೆ ಎನ್ನುವುದನ್ನು ಮೊದಲಿಂದಲೂ ಇಲ್ಲಿ ಹೇಳುತ್ತ ಬಂದಿದ್ದೇನೆ ಮತ್ತು ನಾನು ದಹಲಿಗೆ ಹೋದಾಗ ಪ್ರಧಾನ ಮಂತ್ರಿಗಳವರಿಗೂ ಹೇಳಿ ಬಂದಿದ್ದೇನೆ ಮತ್ತು ಅವರ ಜೊತೆಯಲ್ಲಿರುವ ನಾಯಕರಿಗೂ ತಿಳಿಸಿದ್ದೇನೆ ಮತ್ತು ಪ್ರಧಾನಿಯವರ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ಗೌರವ ಇದೆಯೋ ಅದಕ್ಕಿಂತಲೂ ಹೆಚ್ಚಿನ ಗೌರವ ನನಗೆ ಇದೆ ಎನ್ನುವುದು ದೆಹಲಿಯಲ್ಲಿರುವ ಎಲ್ಲ ನಾಯಕರಿಗೂ ಗೊತ್ತಿದೆ. ಬೇಕಾದರ ಇದನ್ನು ಅವರು ಕೇಳಿ ತಿಳಿದುಕೊಳ್ಳಬಹುದು. ಇದನ್ನೆಲ್ಲಾ ನಾನು ಇಲ್ಲ ಹೇಳದಿದ್ದರೆ ಮುಂದೆ ನನ್ನನ್ನು ತಪ್ಪಾಗಿ ಜನ ತಿಳಿದುಕೊಳ್ಳುತ್ತಾರೆ, ಅದರಿಂದಾಗಿ ಇವೆಲ್ಲವನ್ನೂ ಹೇಳುತ್ತಿದ್ದೇನೆ. ಬೆಳಗಾಂನಲ್ಲಿ ನಾನು ಏನು ಹೇಳಿದ್ದೇನೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಲ್ಲೂ ಕೂಡ ನಾನು ಮುಖ್ಯ ಮಂತ್ರಿಯಾಗಿ ನನ್ನ ಕರ್ತವ್ಯ ನಿರ್ವಹಣೆ ಮಾಡಿದ್ದೇನೆ. ಮತ್ತು ಇಂದು ದೇಶದ ಪರಿಸ್ಥಿತಿ ಏನಾಗಿದೆ ಮತ್ತೆ ಮುಂದೆ ಏನು ಪರಿಸ್ಥಿತಿ ಉಂಟಾಗುತ್ತದೆ ಎನ್ನುವುದನ್ನು ನಾನು ಜನಸಾಮಾನ್ಯರಿಗೆ ಹೇಳುವುದು ನನ್ನ ಕರ್ತವ್ಯ. ನಮ್ಮ ದೇಶದಲ್ಲಿ ಹಿಂದೆ ಯಾವ ರೀತಿ ಜನ ನಮ್ಮ ನಮ್ಮಲ್ಲಿ ಕಾದಾಡಿ, ಹೊಡೆದಾಡಿಕೊಂಡು ಸ್ವಾತಂತ್ರ್ಯವನ್ನು ಯಾವ ರೀತಿ ಕಳೆದುಕೊಂಡರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಹಿಂದೆ ನಮ್ಮ ದೇಶದಲ್ಲಿ ಜನರು ಒಳಜಗಳಗಳನ್ನು ಮಾಡಿಕೊಂಡು ಇತರರು ನಮ್ಮ ಮೇಲೆ ದಂಡೆತ್ತಿ ಬಂದಾಗ ನಾವು ಗುಲಾಮರಂತೆ ವರ್ತಿಸಬೇಕಾಯಿತು. ಆದ್ದರಿಂದ ನಮ್ಮ ಒಳ ಜಗಳಗಳನ್ನು ಈಗ ಆದಷ್ಟೂ ಕಡಿಮೆ ಮಾಡಬೇಕಾಗಿದೆ. ಈಗ ದೇಶದಲ್ಲಿ ಎರಡು ಮೂರು ಕಡೆಗಳಲ್ಲಿ ಸುಬದ್ರವಾದ ಸರಕಾರ ಇದೆ ಮತ್ತು ಕೆಲವು ಕಡೆಗಳಲ್ಲಿ ಕೆಲವು ಪಕ್ಷಗಳು ಸೇರಿಕೊಂಡಿರುವ ಸರಕಾರಗಳು ಇವೆ. ಎಲ್ಲ ಸರಕಾರಗಳೂ ಕೂಡಿಕೊಂಡು ಹೋಗಬೇಕಾದ ಪರಿಸ್ಥಿತಿ ಈಗ ಬಂದಿದೆ. ಇಷ್ಟೊಂದು ಕಠಿಣ ಪರಿಸ್ಥಿತಿ ಇರುವಾಗ ನಾನು ಯಾವ ಸರಕಾರದ ಮೇಲೂ ಹೇಳುವುದಕ್ಕೆ ಹೋಗುವುದಿಲ್ಲ ಮತ್ತು ಹಾಗೆ ಏನೂ ಹೇಳಲಿಲ್ಲ ಕೇಂದ್ರದ ನಾಯಕರ ಮೇಲೆ ಅಥವಾ ಪ್ರಧಾನ ಮಂತ್ರಿಗಳ ಮೇಲೆ ನಾನು ಯಾವ ಟೀಕೆ ಮಾಡುವುದಕ್ಕೂ ಹೋಗಲಿಲ್ಲ ಎನ್ನುವುದನ್ನು ಇಲ್ಲಿ ಸಾರಿ ಸಾರಿ ಹೇಳುತ್ತೇನೆ ಮತ್ತು ಹಿಂದೆಯೂ ಹೇಳಿದ್ದೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ದಯಾನಂದ ಸಾಗರ್ ರವರು ಪ್ರತಿಯೊಂದು ಸಾರಿಯೂ ತಮ್ಮ ಭಾಷಣದಲ್ಲಿ ನಿಜಲಿಂಗಪ್ಪನವರು ನಿಜಲಿಂಗಪ್ಪನವರು ಎಂದು ಅವರ ಮೇಲ ಬಹಳವಾಗಿ ಹೇಳಿದರು. ಅವರಿಗೆ ಶ್ರೀ ನಿಜಲಿಂಗಪ್ಪನವರಮೇಲೆ ಬಹಳವಾದ ಕೋಪ ಇದೆ. ನನಗೂ ಗೊತ್ತು.

ಶ್ರೀ ಎಂ. ನಾಗಪ್ಪ.—ಅವರ ಮೇಲೆ ಇರುವ ಪ್ರೀತಿಯಿಂದ ಹಾಗೆ ಹೇಳಿದರು !

ಶ್ರೀ ವೀರೇಂದ್ರ ಪಾಟೀಲ್.—ಹೌದು, ಒಂದು ಕಾಲದಲ್ಲಿ ಅವರೇ ಶ್ರೀ ನಿಜಲಿಂಗಪ್ಪನವರ ಕಂಚಿನ ಮೂರ್ತಿಯನ್ನು ಮಾಡಿಸಿ ಇಡಬೇಕೆಂದು ಪ್ರಯತ್ನ ಸಹ ಮಾಡಿದ್ದರು ಮತ್ತು ಅದಕ್ಕೆ ಅವರಿಗೆ ಅವಕಾಶ ಸಿಗಲಿಲ್ಲ ಎನ್ನುವುದು ಎಲ್ಲರಿಗೂ ಗೊತ್ತು.

ಶ್ರೀ ಆರ್. ದಯಾನಂದ ಸಾಗರ್.—ಹೌದು, ಆವೊತ್ತು ಹೇಳಿದಂತೆ ನಾನು ಕಂಚಿನ ಪ್ರತಿಮೆ ಮಾಡಿಸಿಟ್ಟಿದ್ದರೆ ಇಂದು ಆ ಪ್ರತಿಮೆಯನ್ನು ನಾನೇ ಚೂರು ಚೂರು ಮಾಡಿ ಕೆಡವುತ್ತಿದ್ದೆ.

ಶ್ರೀ ವೀರೇಂದ್ರ ಪಾಟೀಲ್.—ಅವರ ಮೇಲೆ ಬಹಳ ಕೋಪ ಇದೆ.

ಶ್ರೀ ವಿ. ಎಲ್. ಶಿವಪ್ಪ.—ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಕಾರಣ ಇದೆ. ಅವರು ಕೇಳಿದರೆ ಹೇಳುತ್ತೇನೆ, ಅಧ್ಯಕ್ಷರೂ ಅಪ್ಪಣೆಕೊಟ್ಟರೆ.

ಶ್ರೀ ಆರ್. ದಯಾನಂದಸಾಗರ್.—ಕಾರಣ ಹೇಳಿ ಅದನ್ನು ಕೇಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಶರಣಗೌಡ ಇನಾಂದಾರ್.— ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಹಿಂದಿನ ಶಾಸನ ಎಂದರೆ ನಮ್ಮ ಕಡೆ "ಹಳೇ ತಿಪ್ಪಿ" ಎಂದು ಹೇಳುತ್ತಾರೆ. ಹಾಗೆ ಇಲ್ಲಿ ಒಬ್ಬರಿಗೊಬ್ಬರಿಗೆ ಹಿಂದೆ ಏನು ಆಗಿದೆಯೋ ಅದನ್ನು ಕೇಳಲು ನಾವು ಇಲ್ಲಿ ಕುಳಿತಿಲ್ಲ. ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರು ತಂದಿರುವ ರೆಸಲ್ಯೂಷನ್ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಇಲ್ಲಿ ಕುಳಿತಿರುವುದು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್‌ರವರು ಇಲ್ಲಿ ಮಾತನಾಡುವುದು ಅಷ್ಟುಮಟ್ಟಿಗೆ ಸರಿ ಎಂದು ನನಗೆ ಕಾಣಿಸುವುದಿಲ್ಲ. ಮತ್ತು ಇದು ಬುದ್ಧಿವಂತಿಕೆಯೂ ಆಗುವುದಿಲ್ಲ. ಇಲ್ಲಿ ನಿಜಲಿಂಗಪ್ಪನವರಿಗೂ ಹಾಗೂ ಶ್ರೀ ಸಾಗರರವರಿಗೂ ಆಗಿರುವ ರಾಮಾಯಣ ನಮಗೆ ಬೇಕಾಗಿಲ್ಲ. ನಮಗೆ ಇಲ್ಲಿ ಬೇಕಾಗಿರುವುದು ಮಹಾಭಾರತ. ಇದರ ಬಗ್ಗೆ ಬಂದಿರುವ ರೆಸಲ್ಯೂಷನ್ ಬಗ್ಗೆ ಎಲ್ಲರೂ ಅವರ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಮಾನ್ಯ ಸದಸ್ಯರು ಕಳುಹಿಸಿರುವ ರೆಸಲ್ಯೂಷನ್ ಬಗ್ಗೆ ಮಾತ್ರ ಇಲ್ಲಿ ಮುಖ್ಯಮಂತ್ರಿಗಳು ಮಾತನಾಡುವುದು ಸರಿ ಎಂದು ತಮ್ಮ ಮೂಲಕ ಅವರಲ್ಲಿ ನಾನು ವಿನಂತಿ ಮಾಡುತ್ತೇನೆ. ಇದರಲ್ಲಿ ಒಬ್ಬರನ್ನೊಬ್ಬರು ಕ್ರಿಟಿಸೈಸು ಮಾಡುತ್ತಾ ಹೋದರೆ ಅದಕ್ಕೆ ಕೊನೆಮೊದಲೇ ಇರುವುದಿಲ್ಲ ಮತ್ತು ಇದಕ್ಕೆ ಮಧ್ಯ ಮಧ್ಯದಲ್ಲಿ ಅಡಚಣೆಗಳು ಬರಲು ಅವಕಾಶವಾಗುತ್ತದೆ. ಅದಕ್ಕಾಗಿ ಇಲ್ಲಿ ರೆಸಲ್ಯೂಷನ್ ಬಗ್ಗೆ ತಮ್ಮ ಅಭಿಪ್ರಾಯ ಕೊಟ್ಟು ಮುಂದೆ ಇದರ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ಹೇಳಬೇಕು ಮತ್ತು ಈ ಪ್ರಸಂಗವನ್ನು ಹೇಗೆ ಎದುರಿಸಬೇಕು ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು ಎಂದು ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಶ್ರೀ ಸಾಗರ್ ಅವರ ಕೋಪದ ಬಗ್ಗೆ ಕಾರಣಗಳನ್ನು ಹೇಳುವುದಕ್ಕೆ ತಯಾರಾಗಿದ್ದಾರೆ ಮತ್ತು ಶ್ರೀ ದಯಾನಂದ ಸಾಗರ್‌ರವರೂ ತಮ್ಮನ್ನು ಡಿಫೆಂಡು ಮಾಡಿಕೊಳ್ಳಲು ತಯಾರಿದ್ದಾರೆ. ಇದು ಒಂದು ಅವರ ಚಾಲೆಂಜೂ ಕೂಡ ಆಗಿದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇದರ ಫೈಲು ಇತ್ಯಾದಿಗಳನ್ನು ಇಟ್ಟುಕೊಂಡು ಉತ್ತರ ಕೊಡಲು ಸಿದ್ಧರಿದ್ದಾರೆ. ಇದರಲ್ಲಿ ಏನೋ ಅನುಮಾನ ಇದೆ ಎನ್ನುವ ಶಂಕೆ ನಮಗೆಲ್ಲಾ ಬರುತ್ತಿದೆ. ಇವೆಲ್ಲಾ ಪರಿಹಾರವಾಗಬೇಕಾದರೆ ಇದರ ಪೂರ್ಣ ವಿವರಗಳನ್ನು ಕೇಳುವುದು ಸರ್ವರಿಗೂ ಸಮ್ಮತವಾಗಿ ಕಾಣುತ್ತದೆ. ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮುಖ್ಯ ಮಂತ್ರಿಗಳು ಇದರ ವಿವರಗಳನ್ನು ಕೊಡಲು ಬೇರೆ ಸಂದರ್ಭ ಉಪಯೋಗ ಮಾಡಿಕೊಳ್ಳಬಹುದು. ಈಗ ಇದರ ವಿವರಗಳನ್ನು ಹೇಳುವುದು ಬೇಡ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಅಪಾದನೆಗಳು ಬಂದಿರುವುದು ಒಂದು ಅಂಶ. ಇದಕ್ಕೆ ಒಂದು ಚಾಲೆಂಜೂ ಬಂದಿದೆ. ಇದು ಸರಿಯೇ ಅಲ್ಲವೇ ಎನ್ನುವುದನ್ನು ತಿಳಿಯಬೇಕಾದರೆ ಇಬ್ಬರೂ ಹೇಳುವ ವಾದವನ್ನು ಕೇಳಿದಮೇಲೆ ತಾನೇ ತಿಳಿಯುವುದು? ಇದಕ್ಕೋಸ್ಕರ ಇದರ ವಿವರಗಳನ್ನು ಪೂರ್ತಿ ತಿಳಿಯೋಣ, ಅವರೂ ಚಾಲೆಂಜು ಮಾಡುತ್ತಿರುವುದರಿಂದ ಅವರಿಂದ ವಿವರಗಳನ್ನು ಕೇಳೋಣ.

ಶ್ರೀ ಎಂ. ನಾಗಪ್ಪ.—ನಮಗೆ ಇಲ್ಲಿ ರಾಮಾಯಣ ಬೇಡ. ಮಹಾಭಾರತ ಬೇಕು. ನಿರ್ಣಯದ ಮೇಲೆ ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

MR. SPEAKER.—I have heard the hon. Members. When a particular motion is before the House, all the hon. Members including the Hon. Chief Minister are bound to speak only with reference to the subject matter that is before the House with a sense of relevance. Therefore, I request all the hon. Members to see that they speak only on the subject matter before the House.

ಶ್ರೀ ಎಸ್. ಶಿವಪ್ಪ.—ಸ್ವಾಮೀ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಉತ್ತರ ಕೊಡುವಾಗ ಕೆಲವು ಮಾನ್ಯ ಸದಸ್ಯರು ಆರೋಪಣೆಗಳನ್ನು ಮಾಡಿದ್ದಾರೋ ಅದಕ್ಕೆ ಅವರು ಉತ್ತರ ಕೊಡಬೇಕಾದುದು ಅವರ ಕರ್ತವ್ಯ. ಇದನ್ನು ಮಾಡುವ ಕಾಲದಲ್ಲಿ ಈಗ ಶ್ರೀ ದಯಾನಂದ ಸಾಗರ್‌ರವರು ಚರ್ಚೆ ಮಾಡುವಾಗ ಕೆಲವು ವಿಚಾರಗಳನ್ನು ಹೇಳಿ, ಇದರ ಬಗ್ಗೆ ಸರಕಾರದವರು ಕಾರಣಗಳನ್ನು ಕೊಡಬೇಕೆಂದು ಅವರು ಕೇಳಿದ್ದಾರೆ. ಇದನ್ನು ಅವರು ಕೊಡಬೇಕು. ಅವರೆ ಇದರಲ್ಲಿ ಯಾವುದೋ ಹಳೆಯ ಹಿಂದಿನ ವಿಚಾರಗಳ ಬಗ್ಗೆ ಏನೋ ಹೇಳಿದರು ಎಂದು ಅದನ್ನೇ ದೊಡ್ಡದು ಮಾಡಿಕೊಂಡು

(ಶ್ರೀ ಎಸ್. ಶಿವಪ್ಪ)

ಹೋಗುವುದು ಅಷ್ಟು ಒಳ್ಳೆಯದಲ್ಲ. ಇವೊತ್ತು ದೇಶದ ಜನತೆ, ಕನ್ನಡದ ಜನತೆ ನಮ್ಮ ಸರಕಾರ ಗಡಿ ಬಗ್ಗೆ ಏನು ಮಾಡುತ್ತಿದೆ ಮತ್ತು ಇದರ ನಿರ್ಣಯ ಯಾವ ರೀತಿ ಆಯಿತು ಮತ್ತು ಅಸೆಂಬ್ಲಿಯಲ್ಲಿ ಇದರ ಬಗ್ಗೆ ಏನು ತೀರ್ಮಾನವಾಯಿತು ಎನ್ನುವುದನ್ನು ಕಾದು ನೋಡುತ್ತಿದೆ. ಇಂತಹ ಒಂದು ವಿಷಯದಲ್ಲಿ ಇತರ ವಿಚಾರಗಳ ಬಗ್ಗೆ ಇಲ್ಲಿ ಕಾಲಹರಣಮಾಡುವುದು ಬೇಡ. ಮುಖ್ಯ ಮಂತ್ರಿಗಳು ಇದನ್ನೆಲ್ಲಾ ಬೇರೆ ಅವಕಾಶ ತೆಗೆದುಕೊಂಡು ಹೇಳಬಹುದು ಎಂದು ನಾನು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

12-00 NOON.

ಶ್ರೀ ಹೆಚ್. ಸಿದ್ದವೀರಪ್ಪ.—ಸ್ವಾಮಿ, ನಾನು ಒಂದು ಮಾತನ್ನು ಹೇಳುತ್ತೇನೆ. ಇವೊತ್ತು ಮಾನ್ಯ ಮುಖ್ಯ ಮಂತ್ರಿಗಳ ಉತ್ತರದಿಂದ ಈ ಸಭೆಯಲ್ಲಿ ಯಾವ ರೀತಿ ಈ ನಿರ್ಣಯದಮೇಲೆ ಒಂದು ಅಭಿಪ್ರಾಯ ಮೂಡುತ್ತದೆ ಎನ್ನತಕ್ಕಂಥಾದ್ದನ್ನು ನೋಡಬೇಕು ಎಂದು ನಾನು ಬಹಳ ಕಾತುರನಾಗಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯವರೆಗೂ ಮಾಡಿರತಕ್ಕ ಭಾಷಣದಲ್ಲಿ ಎರಡು ವಿಷಯಗಳು ಎದ್ದು ಕಾಣುತ್ತವೆ. ನಮ್ಮ ಪಕ್ಷವನ್ನು ತಪ್ಪಿನಲ್ಲಿಡಬೇಕು ಎನ್ನುವುದು ಒಂದು. ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳನ್ನು ತೆಗಳಬೇಕು ಎಂಬುದು ಇನ್ನೊಂದು. ಇವರು ಮಾಡತಕ್ಕ ರೀತಿ ನೀತಿಯಿಂದ ಆ ರೀತಿ ನಮಗೆ ಅನಿಸುತ್ತದೆ. ನಾವು ಯಾವುದೇ ರೀತಿಯ ಸಹಕಾರ ನೀಡುತ್ತಿಲ್ಲವೆಂಬ ಪ್ರಚಾರ ಮಾಡಬೇಕೆಂದು ಅವರು ಹೇಳಿದ್ದಾರೆ. ಎಲ್ಲರ ಸಹಕಾರ ಬೇಕು, ದೇಶದ ಸಹಕಾರ ಬೇಕು, ಈ ಸಭೆಯ ಸಹಕಾರ ಬೇಕು, ಜನತೆಯ ಸಹಕಾರ ಬೇಕು, ಎಂದು ಹೇಳುವುದರಲ್ಲಿ ನಮ್ಮ ಪಾರ್ಟಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಇವರು ಹೇಳುತ್ತಿದ್ದಾರೆಂದು ನಮಗೆ ಮನದಟ್ಟಾಗುತ್ತದೆ. ಇವರು ಈ ವಿಷಯದಲ್ಲಿ ಎಲ್ಲವನ್ನೂ ಜೊತೆಯಲ್ಲಿ ಕರೆದುಕೊಂಡು ಎಲ್ಲರ ಅಭಿಪ್ರಾಯವನ್ನೂ ಕ್ರೋಢೀಕರಿಸುತ್ತೇವೆಂದು ಹೇಳುತ್ತಾ ಇರುವುದನ್ನು ನೋಡಿದರೆ ಕೊನೆಯವರೆವಿಗೂ ನಮಗೆ ಅವಕಾಶವನ್ನೇ ಕೊಡದೇ ಇರುವ ಹಾಗೆ ಮಾಡಿದ್ದಾರೆ. ಈ ಈ ನಾಲ್ಕಾರು ದಿವಸಗಳಲ್ಲಿ ಇವರು ತಳೆದಿರತಕ್ಕ ಧಾಟಿಯನ್ನು ನೋಡಿದರೆ ಇವರಿಗೆ ದೇಶವನ್ನು ರಕ್ಷಣೆ ಮಾಡಬೇಕು ಎನ್ನುವ ಅಭಿಪ್ರಾಯವಿಲ್ಲ ಎನ್ನುವ ತಪ್ಪು ಅಭಿಪ್ರಾಯವನ್ನು ನಮ್ಮ ಮೇಲೆ ಹೊರಿಸಿ ಈ ಗಡಿ ಸಮಸ್ಯೆಯ ಬಗ್ಗೆ ಒಂದುವೇಳೆ ಏನಾದರೂ ಇವರು ಫೇಲಾದರೆ ಈ ಪಕ್ಷದವರು ಸಹಕಾರ ಮಾಡಲಿಲ್ಲ, ಆದ್ದರಿಂದ ಈ ರೀತಿ ಆಯಿತು ಎನ್ನತಕ್ಕಂಥಾದ್ದನ್ನು ಯಾರದೋ ಪಾಪ ಸನ್ಯಾಸಿಯ ತಲೆಯಮೇಲೆ ಎನ್ನುವ ಹಾಗೆ ಇವರು ಮಾಡುವುದಕ್ಕೆ ಹೊರಟಿದ್ದಾರೆ ಎಂಬುದು ನಮಗೆ ಬೇಕಾದಷ್ಟು ಮನದಟ್ಟಾಗಿದೆ. ಆದ್ದರಿಂದ ನಾನು ವಿನಯಪೂರ್ವಕವಾಗಿ ಹೇಳುತ್ತೇನೆ, ಯಾರು ಯಾವ ನಿರ್ಣಯವನ್ನು ತಂದು ಪಾಸು ಮಾಡಿಕೊಂಡು ಈ ದೇಶದ ಹಿತರಕ್ಷಣೆಯನ್ನು ಮಾಡಬೇಕೆಂದು ಹೊರಟಿದ್ದಾರೆಯೋ ಅವರೇ ಅದನ್ನು ಮಾಡಲಿ, ನಮಗೆ ತುಂಬಾ ಸಂತೋಷ. ನಾವು ಸಹಕಾರ ನೀಡುತ್ತೇವೆ ಎಂದು ದೇಶಕ್ಕೆ ಹೇಳುತ್ತೇವೆ. ನಾವೂ ಸಹ ಕೇಂದ್ರ ಸರ್ಕಾರಕ್ಕಾಗಲೀ, ನಮ್ಮ ರಾಜ್ಯ ಸರ್ಕಾರಕ್ಕಾಗಲೀ, ನಮ್ಮ ರಾಜ್ಯದ ರಕ್ಷಣೆ ಮಾಡುವುದಕ್ಕಾಗಲೀ, ನಮ್ಮ ಕೈಲಾದ ಸಹಾಯವನ್ನು ಮಾಡುತ್ತೇವೆ. ನಾವು ಸಹಕಾರ ಮಾಡಲು ಮಾನ್ಯ ಮುಖ್ಯಮಂತ್ರಿಗಳು ನಮಗೆ ದಾರಿ ತೋರಿಸುತ್ತಿಲ್ಲ. ನಾವು ಹೊರಗಡೆ ಇದ್ದು ನಮ್ಮ ಕೈಲಾದ ಪ್ರಯತ್ನವನ್ನು ಮಾಡುತ್ತೇವೆ, ನಾವು ಇದರಲ್ಲಿ ಭಾಗಿಯಾಗುವುದಿಲ್ಲ ಎಂದು ಹೇಳಿ ನಾವು ಹೊರಗಡೆ ಹೋಗುತ್ತೇವೆ.

[*At this stage Sri H. Siddaveerappa and a few other Hon. Members withdraw.*]

†ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಅಧ್ಯಕ್ಷರೇ, ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ರೂಲ್ಸ್ ಆಫ್ ಪ್ರೊಸೀಜರ್ ರೂಲ್ ನಂಬರ್ 28 ಕ್ಲಾಜ್ (2)ರ ಪ್ರಕಾರ ಈ ಮಾನ್ಯ ಸದನದ ಸದಸ್ಯರು ಒಬ್ಬರಿಗೊಬ್ಬರು ಪರ್ಸನಲ್ ಚಾರ್ಜ್ ಮಾಡಬಾರದು ಎಂದು ಇದೆ. ಮಾನ್ಯ ಮುಖ್ಯಮಂತ್ರಿಗಳು ಇದುವರೆಗೂ ಏನು ಉತ್ತರವನ್ನು ಕೊಟ್ಟಿದ್ದಾರೆ ಇದರಲ್ಲಿ ಮೈಸೂರು ರಾಜ್ಯದ ಜನತೆ ಮತ್ತು ಗಡಿ ವಿವಾದದ ಬಗ್ಗೆ ಒಂದು ಒಗ್ಗಟ್ಟಿನ ತೀರ್ಮಾನವನ್ನು ನಾವು ನಿರೀಕ್ಷಿಸುತ್ತಿದ್ದೆವು. ಅವರಂತೆ ಇಡೀ ದೇಶ ಇದನ್ನು ನಿರೀಕ್ಷಿಸುತ್ತಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ವರ್ತನೆ ನನ್ನ ಪ್ರಕಾರ ಮೇಲ್ಮಟ್ಟದ್ದಾಗಿರಬೇಕಾಗಿತ್ತು. ಈ ಗಡಿ ಪ್ರಶ್ನೆ ಇಂಡಿಕೇಟ್ ಮತ್ತು ಸಿಂಡಿಕೇಟ್ ಪ್ರಶ್ನೆ ಅಲ್ಲ. ಆ ಕಡೆ ಮತ್ತು ಈ ಕಡೆ ಎರಡೂ ಪ್ರಶ್ನೆ

ಇದು. ಎರಡೂಕಡೆಯ ಸಮಸ್ಯೆ, ಮತ್ತು ದೇಶದ ಸಮಸ್ಯೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳ ಭಾಷಣ ಬಹಳ ಮೇಲ್ಮಟ್ಟದ್ದಾಗಿರಬೇಕಾಗಿತ್ತು. ಮತ್ತು ಇದುವರೆಗೆ ಅವರ ಭಾಷಣವನ್ನು ಮುಗಿಸ ಬಹುದಾಗಿತ್ತು. ಮತ್ತು ಈ ಗಡಿ ವಿಚಾರದಲ್ಲಿ ಕೆಲವರು ಮಾತನಾಡುವಾಗ ಸಿಂಡಿಕೇಟ್‌ನವರ ಮೇಲೆ, ಶ್ರೀಮಾನ್ ನಿಜಲಿಂಗಪ್ಪನವರಮೇಲೆ ಹಲವಾರು ಆಪಾದನೆಗಳನ್ನು ಮಾಡಿದ್ದರು. ಅದಕ್ಕೆ ತದ್ವಿರುದ್ಧವಾಗಿ ಮಾನ್ಯ ಮುಖ್ಯ ಮಂತ್ರಿಗಳು ಈಗ ಹೇಳುತ್ತಿದ್ದಾರೆ. ಇದನ್ನೆಲ್ಲಾ ನಾನು ಕೇಳುತ್ತಿದ್ದೆ. ಮುಖ್ಯಮಂತ್ರಿಗಳ ಭಾಷಣದಲ್ಲಿ ಬರೀ ಇಂಡಿಕೇಟ್ ಪಕ್ಷದವರ ವಿಷಯ ಮಾತ್ರ ಇತ್ತು. ಅದಲ್ಲವೆ ಬೇರೆ ಯಾವ ಪಕ್ಷದವರೂ ಹೇಳಿದಂತಹ ವಿಷಯಗಳನ್ನು ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಲಿಲ್ಲ. ವಿರೋಧಪಕ್ಷದಲ್ಲಿ ಬೇರೆಯವರು ಇಲ್ಲವೇ, ಕರ್ನಾಟಕ ರಾಜ್ಯದಲ್ಲಿ ಹಲವಾರು ರಾಜಕೀಯ ವಿರೋಧ ಪಕ್ಷಗಳು ಇವೆ. ಪಿ.ಎಸ್.ಪಿ. ಇದೆ, ಎಸ್.ಎಸ್.ಪಿ. ಇದೆ, ಕಮ್ಯುನಿಸ್ಟ್ ಪಕ್ಷ ಇದೆ, ಸ್ವತಂತ್ರ ಪಕ್ಷ ಇದೆ. ಶ್ರೀಮಾನ್ ಶಿವಪ್ಪನವರು ಇದ್ದಾರೆ, ಶ್ರೀಮಾನ್ ಗೋಪಾಲಗೌಡರು ಇದ್ದಾರೆ. ಇವರೂ ಸಹ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಇವರು ಹೋರಾಟ ಮಾಡಿರತಕ್ಕ ಒಂದು ವಿಷಯ ವನ್ನೂ, ಒಂದು ಉದಾಹರಣೆಯನ್ನೂ ಕೊಡದೆ ತಮ್ಮ ಭಾಷಣದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರ ಬಗ್ಗೆ ಶ್ರೀಮಾನ್ ಸಿದ್ಧವೀರಪ್ಪನವರು ಮತ್ತು ದಯಾನಂದಸಾಗರ್ ಅವರು ಏನು ಹೇಳಿದ್ದಾರೆ ಅದಕ್ಕೆ ಮಾತ್ರ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳುತ್ತಿದ್ದರು. ಈ ಸದನದ ಮುಂದೆ ಗಡೀ ಸಮಸ್ಯೆಯ ಬಗ್ಗೆ ನಿರ್ಣಯವನ್ನು ಕನ್‌ಸಿಡರೇಷನ್ನಿಗೆ ಇಟ್ಟು ಅದರ ಬಗ್ಗೆ ತೀರ್ಮಾನ ತೆಗೆದು ಕೊಳ್ಳಬೇಕಾದ ಸಂದರ್ಭ ಇರುವಾಗ ಅದರ ವಿಚಾರವನ್ನು ಮಾತನಾಡದೆ ನಮ್ಮ ವೈಯಕ್ತಿಕವಾದ ರಾಜಕೀಯ ಪಕ್ಷಬೇಧಗಳನ್ನು ಮಾತನಾಡಿ ಈ ಸದನದ ಹಾಗೂ ಈ ನಿರ್ಣಯದ ಘನತೆಯನ್ನು ಕಡಿಮೆ ಮಾಡಿದ್ದಾರೆ. ರಾಜ್ಯದ ಮುಖ್ಯ ಮಂತ್ರಿಗಳು ಇನ್ನೂ ಬಹಳ ಮೇಲ್ಮಟ್ಟದ ಭಾಷಣವನ್ನು ಮಾಡಬೇಕಾಗಿತ್ತು. ಅವರು ಪರ್ಸನಲ್ ಚಾರ್ಜನ್ನು ಮಾಡುವುದು ಒಳ್ಳೆಯದಲ್ಲ, ಅದನ್ನು ಬಿಡ ಬೇಕು. ಈಗ ಇಲ್ಲಿ ಬಂದಿರತಕ್ಕ ನಿರ್ಣಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಬೇಕು. ಒಂದು ವೇಳೆ ಶ್ರೀಮಾನ್ ದಯಾನಂದ ಸಾಗರ್ ಮತ್ತು ಸಿದ್ಧವೀರಪ್ಪನವರು ಹೇಳಿದಂತಹ ವಿಷಯಗಳಿಗೆ ತಾವು ತಯಾರಾಗಿದ್ದರೆ ಅದಕ್ಕಾಗಿ ಒಂದು ಸ್ಪೆಷಲ್ ಸೆಷನ್ ಕರೆದು ಅವರಿಗೆ ಉತ್ತರವನ್ನು ಹೇಳ ಬೇಕು. ಆದ್ದರಿಂದ ತಾವು ಮುಖ್ಯ ಮಂತ್ರಿಗಳಿಗೆ ಆದೇಶವನ್ನು ಕೊಡಬೇಕು ಪರ್ಸನಲ್ ಚಾರ್ಜಸ್ ಮಾಡಬಾರದು ಎಂದು. ಮತ್ತು ದಯವಿಟ್ಟು ನಿರ್ಣಯಕ್ಕೆ ಬರಬೇಕು ಎನ್ನುವುದು ನನ್ನ ಪಾಯಿಂಟ್ ಆಫ್ ಆರ್ಡರ್.

MR. SPEAKER.—I have heard the Hon. Chief Minister. I do not find that he has said anything irrelevent or anything undignified. He has been all along dignified in his approach and speech. I am sorry I cannot uphold the point of order.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಶ್ರೀಮಾನ್ ದಯಾನಂದ ಸಾಗರ್ ಅವರು ಪ್ರತಿಯೊಂದು ಸಲವೂ ಶ್ರೀಮಾನ್ ನಿಜಲಿಂಗಪ್ಪನವರ ಹೆಸರನ್ನು ಹೇಳಿ ಮಾತನಾಡುತ್ತಿದ್ದರು. ಶ್ರೀಮಾನ್ ನಿಜಲಿಂಗಪ್ಪನವರಮೇಲೆ ಅವರಿಗೆ ಕೋಪ ಇದೆ. ಅವರ ಬಗ್ಗೆ ನಾನು ಹೆಚ್ಚು ಏನು ಹೇಳಿದೆ ಅವರನ್ನು ಸೂಪರ್‌ಸೀಡ್ ಮಾಡಿ ಮಾತನಾಡುವುದಕ್ಕೆ ನಾನು ಹೊರಟಿರಲಿಲ್ಲ ಎಂದು ಹೇಳಬೇಕಾಗುತ್ತದೆ. ಶ್ರೀಮಾನ್ ಸಿದ್ಧವೀರಪ್ಪನವರು ಮತ್ತು ಅವರ ಜೊತೆಗಾರರು ಯಾವುದೋ ಒಂದು ಕಾರಣವನ್ನು ಇಟ್ಟುಕೊಂಡು ಹೊರಗಡೆ ಹೋಗಿರುವುದು ದುರದೃಷ್ಟಕರವಾದುದು. ನನ್ನಗೆ ಗೊತ್ತಿರುವ ಹಾಗೆ ನನ್ನ ಭಾಷಣ ಮೇಲ್ಮಟ್ಟದಲ್ಲಿ ಹೋಗುತ್ತಿದೆ ಎಂದು ನನಗೆ ಅನಿಸುತ್ತದೆ. ನಾನು ಅವರಿಂದ ಸಹಕಾರವನ್ನು ತೆಗೆದುಕೊಳ್ಳಬಾರದು ಎನ್ನುವ ವಿಚಾರದಿಂದ ಇದ್ದೇನೆ ಎಂದು ಅವರು ಹೇಳಿದ್ದಾರೆ. ಅದಕ್ಕೆ ಪ್ರಾರಂಭದಲ್ಲೇ ಪೀಠಿಕೆಯಲ್ಲೇ ಅನೇಕ ವಿಚಾರಗಳನ್ನು ನಾನು ಹೇಳಿದ್ದೇನೆ. ನಾನು ಅವರ ಬಗ್ಗೆ ಯಾವ ಡಿಸ್‌ಕ್ರಿಮಿನೇಷನ್ ಮಾಡಿಲ್ಲ. ಮುಂದೆ ಕೂಡ ಮಾಡುವುದಿಲ್ಲ. ಎಲ್ಲಾ ಸಮಸ್ಯೆಗಳಿಗೂ ಸಹಕಾರ ನೀಡಬೇಕು ಎಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಸಹಕಾರ ನೀಡುವುದು ಬಿಡುವುದು ಅವರ ಜವಾಬ್ದಾರಿ. ನಾನು ಅವರನ್ನು ಕೇಳುವುದನ್ನು ಕಡಿಮೆ ಮಾಡುವುದಿಲ್ಲ. ಈಗ ಅಲ್ಲಲ್ಲಿ ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ—ನಮ್ಮ ಮಕ್ಕಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಇದರ ಬಗ್ಗೆ ಬಹಳ ಮನ ನೊಂದುಕೊಂಡಿದ್ದಾರೆಂದು ನಾನು ತಿಳಿಯುತ್ತೇನೆ. ಅಲ್ಲಲ್ಲಿ ಇವತ್ತು ಗಲಭೆಗಳು ಆಗುತ್ತಾ ಇವೆ. ಇವತ್ತು ದೇಶದಲ್ಲಿ ಅನ್ ಸೋಶಿಯಲ್ ಎಲಿಮೆಂಟ್ಸ್ ಬಹಳ ಇದ್ದಾರೆ. ಆದರೆ ಇದಕ್ಕೆಲ್ಲಾ ಬಲಿಯಾಗುವವರು ನಮ್ಮ ಮಕ್ಕಳು. ಮೊನ್ನೆ ಹುಬ್ಬಳ್ಳಿ, ಧಾರವಾಡ, ಬಿಜಾಪುರ, ಗದಗ್, ಗುಲ್ಬರ್ಗ ಮುಂತಾದ ಕಡೆಗಳಲ್ಲಿ ನಡೆದ ಘಟನೆಗಳನ್ನು

(ಶ್ರೀ ವೀರೇಂದ್ರ ಪಾಟೀಲ್)

ನೋಡಿದರೆ, ಇದಕ್ಕೆ ತುತ್ತಾಗುವವರು ನಿರಪರಾಧಿಗಳು. ಬಹುಶಃ ನಿನ್ನೆ ನಾನು ಮೇಲ್ಮನೆಯಲ್ಲೂ ಹೇಳುತ್ತಿದ್ದೆ ಏನೆಂದರೆ ಈ ರೀತಿಯ ಗಲಭೆ, ಗಲಾಟೆ ನಮ್ಮ ಸಂಸ್ಕೃತಿಗೆ, ಸಂಯಮಕ್ಕೆ, ಸಹನಶೀಲತೆಗೆ ಹೆಸರಾದ ಕರ್ಣಾಟಕದಲ್ಲಿ ಈ ರೀತಿ ಮಾಡಬಾರದು. ವಿದ್ಯಾರ್ಥಿಗಳು ಅಶಾಂತಿ ಹುಟ್ಟಿಸುವುದಕ್ಕೆ ಕಾನೂನು ಭಂಗ ಮಾಡುವುದಕ್ಕೆ ಹೋಗಬಾರದೆಂದು ಅವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಮತ್ತು ಈ ಪ್ರಶ್ನೆಯನ್ನು ಪ್ರತಿನಿಧಿಗಳಾದ ನಮಗೆ ಇತ್ಯರ್ಥ ಮಾಡುವುದಕ್ಕೆ ಬಿಡಬೇಕು. ಇದನ್ನು ನಾವೇ ಇತ್ಯರ್ಥ ಮಾಡಬೇಕಾಗಿರುವುದರಿಂದ, ವಿದ್ಯಾರ್ಥಿಗಳು ತಲೆಕೆಡಿಸಿಕೊಂಡು, ತಮ್ಮ ಭವಿಷ್ಯವನ್ನು, ಪರೀಕ್ಷೆಯನ್ನು ನಿರ್ಲಕ್ಷಮಾಡಬಾರದು ; ಮತ್ತು ಅನ್ ಸೋಶಿಯಲ್ ಎಲಿಮೆಂಟ್ಸ್‌ಗಳ ಮಾತಿಗೆ ತುತ್ತಾಗಿ ಶಾಂತಿ ಭಂಗಮಾಡಬಾರದು. ಅವರು ವಿಚಾರ ಮಾಡಬೇಕೇನೆಂದರೆ, ಕನ್ನಡಿಗರು ಕೇವಲ ಕನ್ನಡ ರಾಜ್ಯದಲ್ಲಿ ಮಾತ್ರ ಇರುವುದಿಲ್ಲ. ಅವರು ಬೇರೆ ರಾಜ್ಯಗಳಲ್ಲಿಯೂ ಇದ್ದಾರೆ, ಬಾಂಬೆಯಲ್ಲೂ ಇದ್ದಾರೆ. ಇಲ್ಲಿ ಎರಡನೇಯವರಿಗೆ ಏನಾದರೂ ಆದರೆ, ಅದರ ಪ್ರತಿಕ್ರಿಯೆ ಅಲ್ಲೂ ಹೊರಗಡೆ ಇದ್ದವರಿಗೆ ತಗಲುತ್ತದೆ. ಅಷ್ಟೇ ಅಲ್ಲದೆ ಈ ರೀತಿಯ ಚಳವಳಿಯಿಂದ ಕನ್ನಡ ರಾಜ್ಯದ ಹಿತಕ್ಕೆ ಧಕ್ಕೆಯಾಗುತ್ತದಲ್ಲದೆ, ಯಾವ ರೀತಿಯ ನ್ಯಾಯವೂ ಆಗುವುದಿಲ್ಲ. ಅದಕ್ಕಾಗಿ ಇಂಥ ಹಿಂಸಾಕೃತ್ಯಗಳಿಗೆ ನಮ್ಮ ಮಕ್ಕಳು ಬಲಿಯಾಗಬಾರದು ಎಂದು ವಿನಂತಿಮಾಡಿಕೊಳ್ಳುತ್ತೇನೆ. ಇನ್ನೊಂದು ಕಳಕಳಿಯ ವಿಚಾರ ಕೆಲವು ಪತ್ರಿಕೆಗಳಲ್ಲಿ ನಾವು ನೋಡುತ್ತಿದ್ದೇವೆ. ನಮ್ಮ ದೇಶದ ಪ್ರಧಾನ ಮಂತ್ರಿಯವರ ಕೇಂದ್ರದ ಗೃಹಮಂತ್ರಿಯವರ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಯವರ ಎಫಿಜಿಯನ್ನು ಇವರು ಅಲ್ಲಲ್ಲಿ ಸುಡುತ್ತಿದ್ದಾರೆ. ಇದು ನಮಗೆ ಭೂಷಣವಲ್ಲ. ಇವತ್ತು ಏನಾದರೂ ಮತಭೇಧಗಳಿರಬಹುದು. ಆದರೆ ಅವರು ನಮ್ಮ ದೇಶದ ನಾಯಕರು. ಅವರಿಗೆ ಏನೊಂದು ಮರ್ಯಾದೆ ಸಲ್ಲಿಸಬೇಕೋ, ಅದನ್ನು ಕೊಡುವುದಕ್ಕೆ ನಾವು ಹಿಂದೆ ಮುಂದೆ ನೋಡಬಾರದು. ಆದ್ದರಿಂದ ಇಂಥ ಕೃತ್ಯಗಳಿಗೆ ಮಕ್ಕಳು ಕೈಹಾಕಬಾರದೆಂದು ನಾನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಎರಡನೇ ತಾರೀಕಿನಂದು ಬೊಂಬಾಯಿಯಲ್ಲಿ ಬಂದ್ ಆಗಬೇಕೆಂದು ಶಿವಸೇನೆಯವರು ಪ್ರಯತ್ನ ಮಾಡುತ್ತಿದ್ದಾರೆಂದು ನಾನು ಕೇಳಿದೆ. ಅದರ ಬಗ್ಗೆ ನಾನು ಇವತ್ತು ಒಂದು ಟೆಲಿಗ್ರಾಂ ಮಾಡಿದ್ದೇನೆ, ಮತ್ತೊಂದು ಪತ್ರವನ್ನು ಮಾನ್ಯ ವಿ. ಪಿ. ನಾಯಕರಿಗೆ ಬರೆಯುತ್ತಿದ್ದೇನೆ. ನಾವು ನೋಡಿದಹಾಗೆ ಇವತ್ತು, ಶಿವಸೇನೆಯವರು ನಮ್ಮ ಚಳವಳಿ ಚಟುವಟಿಕೆಗಳನ್ನು ಪ್ರಾರಂಭ ಮಾಡಿದರೆ, ಅವರ ಮೊದಲ ಟಾರ್ಗೆಟ್ ಅಲ್ಲಿರತಕ್ಕ ಕನ್ನಡಿಗರ ಮೇಲೆ. ಆದ್ದರಿಂದ ಅಲ್ಲಿರುವ ಕನ್ನಡಿಗರ ಆಸ್ತಿಪಾಸ್ತಿಗಳನ್ನು ಮತ್ತು ಅವರಿಗೆ ಯಾವ ತೊಂದರೆಯೂ ಆಗದ ಹಾಗೆ ಅವರ ಹಿತರಕ್ಷಣೆ ಮಾಡುವಂತಹ ಇಫೆಕ್ಟಿವ್ ಕ್ರಮ ತಗೆದುಕೊಳ್ಳಬೇಕೆಂದು ಈಗಾಗಲೇ ಮಹಾರಾಷ್ಟ್ರದ ಮುಖ್ಯಮಂತ್ರಿಯವರಿಗೆ ಮನವಿಮಾಡಿಕೊಂಡಿದ್ದೇನೆ. ಬಹುಶಃ ಕನ್ನಡಿಗರ ಹಿತರಕ್ಷಣೆ ಮಾಡುವುದಕ್ಕೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬಹುದೆಂದು ನಾನು ಆಶಿಸುತ್ತೇನೆ.

[MR. DEPUTY SPEAKER in the Chair]

ಕೊನೆಯದಾಗಿ ಕೆಲವು ಮಾನ್ಯ ಸದಸ್ಯರುಗಳು ನಾನು ರಾಜಿನಾಮೆ ಕೊಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಪ್ರಶ್ನೋತ್ತರ ಕಾಲದಲ್ಲಿ ಹೇಳಿದ್ದೇನೆ. ಈ ಪ್ರಶ್ನೆ ನನ್ನ ಒಬ್ಬನ ಪ್ರಶ್ನೆಯಲ್ಲ. ಆದರೆ ನನ್ನ ರಾಜಿನಾಮೆ ಮೇಲೆ ಈ ಪ್ರಶ್ನೆ ಇತ್ಯರ್ಥ ಆಗುವುದಾದರೆ ನಾನು ಅದಕ್ಕೆ ಹಿಂದು ಮುಂದು ನೋಡುವುದಿಲ್ಲ.

ಶ್ರೀ ಎಂ. ನಾಗಪ್ಪ.—ನಮ್ಮ ಮಂತ್ರಿಮಂಡಲ ಮತ್ತು ಎಲ್ಲಾ ಮನೆಯ ಸದಸ್ಯರು ರಾಜಿನಾಮೆ ಕೊಟ್ಟು ನಾವು ರಾಜ್ಯಭಾರ ಮಾಡುವುದಿಲ್ಲವೆಂದು ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಯಾರಿಗೆ ಕೊಡಬೇಕು ?

ಶ್ರೀ ಎಂ. ಎಸ್. ಕೃಷ್ಣನ್.—ತಾವು ರಾಜಿನಾಮೆ ಕೊಟ್ಟು ಬಿಟ್ಟು ಇಂಡಿಕೇಟಿಗೆ ರಾಜ್ಯಭಾರ ವಹಿಸಿದರೆ ಆವಾಗ ಪ್ರಶ್ನೆ ಇತ್ಯರ್ಥವಾಗಬಹುದೆಂದು ಕಾಣುತ್ತದೆ. ಅಥವಾ ತಾವು ಏನಾದರೂ ಇಂಡಿಕೇಟಿಗೆ ಸೇರಿದರೆ ಇತ್ಯರ್ಥವಾಗುವ ಹಾಗಿದ್ದರೆ ಸೇರುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದರ ಬಗ್ಗೆ ತಾವು ಗ್ಯಾರಂಟಿ ಕೊಡುತ್ತೀರಾ ? ಅದರ ಸಲುವಾಗಿ ನನ್ನ ರಾಜಿನಾಮೆಯ ಪ್ರಶ್ನೆಯನ್ನು ಅಷ್ಟೊಂದು ಮಹತ್ವದ್ದಾಗಿ ಮಾಡಿ ಎತ್ತಿ ಹಿಡಿಯಬೇಕಾದ ಅವಶ್ಯಕತೆ ಇಲ್ಲ. ಈ ಪ್ರಶ್ನೆ ಮುಂದೆ ಯಾವ ರೀತಿಯಲ್ಲಿ ಡೆವಲಪ್ ಆಗುತ್ತದೆಂಬುದನ್ನು

ನೋಡಬೇಕಾಗುತ್ತದೆ. ಮತ್ತು ಹಂತ ಹಂತಗಳಲ್ಲಿ ಎಲ್ಲರೂ ಸೇರಿ ವಿಚಾರಮಾಡಬೇಕಾಗುತ್ತದೆ. ಈ ಪ್ರಶ್ನೆಯಲ್ಲಿ ಮತಭೇದಗಳಿವೆ ಎಂಬ ರೀತಿಯಲ್ಲಿ ನೋಡಿಕೊಳ್ಳಬಾರದು. ನಮ್ಮ ನಾಡಿನ ಹಿತರಕ್ಷಣೆಗಾಗಿ, ನಾವೆಲ್ಲರೂ ಒಂದೇ ಧ್ವನಿಯಿಂದ, ಒಂದೇ ಮನಸ್ಸಿನಿಂದ, ನಮ್ಮ ದೇಶದ, ನಮ್ಮ ನಾಡಿನ ಸೇವೆಯನ್ನು ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ನಾನು ಈಗ ವಿವರಣೆ ಕೊಡುವುದಕ್ಕಾಗಿ ಎದ್ದು ನಿಂತಿದ್ದೇನೆ. ಈ ಆಯವ್ಯಯ ಅಧಿವೇಶನದಲ್ಲಿ ಬಹಳ ವಿಸ್ಮಯಕರವಾದ ರೀತಿಯಲ್ಲಿ, ಆಯವ್ಯಯಕ್ಕಿಂತಲೂ ಒಂದು ರೀತಿಯಲ್ಲಿ ಹೆಚ್ಚು ಪ್ರಧಾನವಾದ ಪ್ರಶ್ನೆ ದೇಶದ ಮುಂದೆ ಮತ್ತು ಮುಖ್ಯವಾಗಿ ನಮ್ಮ ರಾಜ್ಯದ ಮುಂದೆ ಬಂತು. ಈ ಪ್ರಶ್ನೆಯನ್ನು ನಾವು ಕಡೆಗಣಿಸುವ ಹಾಗೆ ಇರಲಿಲ್ಲ. ಒಂದು ಸಾರಿ ವೀರೇಂದ್ರ ಪಾಟೀಲರು ಕಳೆದ ಅಧಿವೇಶನ ಮುಕ್ತಾಯವಾಗಿ, ಮುಂದಿನ ಅಧಿವೇಶನ ಯಾವ ತಾರೀಕು ಎನ್ನುವ ವಿಷಯ ನಮ್ಮ ಮುಂದೆ ಬಂದು ಚರ್ಚೆ ಮಾಡಿದಾಗ ಈ ಸಮಸ್ಯೆ ನಮ್ಮ ಮುಂದೆ ಇರಲಿಲ್ಲ. ಇನ್ನೊಂದು ಏನೆಂದರೆ, ಅವರು ಒತ್ತಾಯಪೂರ್ವಕವಾಗಿ ವಿರೋಧ ಪಕ್ಷದ ಎಲ್ಲಾ ನಾಯಕರು ಈ ಕಾರ್ಯ ಕಲಾಪಗಳನ್ನು ಗೊತ್ತು ಮಾಡಬೇಕೆಂದು ಸಭೆಯಲ್ಲಿ ಹೇಳಿದ್ದರು. ಏನೇ ಆಗಲಿ, 30ನೇ ತಾರೀಕು ನಾವು ಓಟು ಮಾಡಬೇಕಾಗುತ್ತದೆ, ಬಜೆಟ್ ಮತಕ್ಕೆ ಹಾಕಬೇಕು, ಮತ್ತು 31 ಅಪ್ರೋಪ್ರಿಯೇಶನ್ ಬಿಲ್ ಬರಬೇಕು. ಹೆಚ್ಚು ಕಮ್ಮಿ ನಾವೆಲ್ಲರೂ ಇದನ್ನು ಒಪ್ಪಿದ್ದೇವೆ. ಮತ್ತು ಇದನ್ನು ಬಹಳ ಚರ್ಚೆ ಮಾಡಿ ಒಂದು ಇತ್ಯರ್ಥಕ್ಕೆ ಬಂದಿದ್ದೇವೆ. ನಾವು ಕೆಲವು ಕಾರಣಗಳಿಂದ ಊರಲ್ಲಿ ಇರಲಿಲ್ಲ. ಇದರಲ್ಲಿ ಓಟ್ ಆನ್ ಅಕೌಂಟ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆ ಸಂಪ್ರದಾಯ ಇಲ್ಲ. ಚುನಾವಣೆಯ ವರ್ಷದಲ್ಲಿ ಮಾತ್ರ ಹಾಗೆ ಮಾಡಿದ್ದು ಉಂಟು. ಆದರೆ ಲೋಕಸಭೆಯವರು ಮಾಡುತ್ತಾರೆ. ಅದನ್ನು ರಾಜ್ಯಸಭೆಗಳೂ ಮಾಡುವುದು ತಪ್ಪಾಗಬಹುದು ಎಂದು ವಿವರಣೆ ಕೊಟ್ಟರು. ಏನೇ ಇರಲಿ, ಕೇಂದ್ರದಲ್ಲಿ ಕಾಂಗ್ರೆಸ್ (ಆರ್) ರಾಜ್ಯದಲ್ಲಿ ಕಾಂಗ್ರೆಸ್ (ಒ) ಆಡಳಿತಪಕ್ಷಗಳಾಗಿರುವುದರಿಂದ ಅವರಿಗೆ ಈ ಅನಿಶ್ಚಿತ ಪರಿಸ್ಥಿತಿಯ ವಾತಾವರಣದಲ್ಲಿ ಯಾವ ಗಳಿಗೆಯಲ್ಲಿ ಏನು ಉಂಟಾಗಬಹುದು ಎನ್ನತಕ್ಕ ಶಂಕೆ, ಭಯ ಇದೆ. ಅದಕ್ಕಾಗಿ ಅವರು ಏನು ಮಾಡುತ್ತಾರೆಂದರೆ, ಈ ಸಭೆಗೆ ಕಾರಣಗಳನ್ನು ಏನೇನೋ ಕೊಟ್ಟು ಚರ್ಚೆಯನ್ನು ಮುಗಿಸಬೇಕೆಂದು ಹೇಳಿವರೆ ಮಾರ್ಚ್ 31ರೊಳಗೆ ಈ ಆಯವ್ಯಯವನ್ನು ಚರ್ಚೆ ಮಾಡಿ, ಮುಗಿಸಬೇಕು. ಅಷ್ಟು ನಮಗೆ ಕೊಡಿ, ಆಮೇಲೆ ನಾವು ನೋಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಬೀಸುವ ದೊಣ್ಣೆ ತಪ್ಪಿದರೆ ಕೊನೆಯ ಪಕ್ಷ ಆರು ತಿಂಗಳು ಆಯಸ್ಸು ಇರುತ್ತದೆಂಬುದಾಗಿ ಈಗ ಈ ರಾಜ್ಯ ಸರ್ಕಾರದವರ ಇಂಗಿತ ಇರಬಹುದು. ಇಂತಹ ಒಂದು ಸಂದಿಗ್ಧ ಸಮಯದಲ್ಲಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಏನಾದರೂ ಕೂಡ ನಮ್ಮ ಹಿಂದಿನ ರೂಢಿಯಂತೆ ಇವನ್ನು ಪಾಸ್ ಮಾಡಬೇಕು. ಆದರೂ ಇವತ್ತು ಅವಕ್ಕಿಂತ ಒಂದು ಮಹತ್ವದ ವಿಷಯ ನಮ್ಮ ಮುಂದೆ ಬಂದಿದೆ. ಅದೇನೆಂಬುದು ನಮ್ಮೆಲ್ಲರಿಗೂ ಗೊತ್ತಿದೆ. ಅದನ್ನು ರಾಜ್ಯ ಸರ್ಕಾರದ ಮಂತ್ರಿಗಳು ಯಾರೂ ಅದಕ್ಕೆ ಜವಾಬ್ದಾರರು ಅಲ್ಲ. ಮಹಾಜನ್ ಕಮಿಷನ್‌ನ್ನು ನಮ್ಮ ಮೇಲೆ ಹೇರಿದಂತೆ ಅವರ ವರದಿಯ ಮೇಲೆ ತೀರ್ಮಾನ ತೆಗೆದುಕೊಳ್ಳುವುದನ್ನು ಇದು ವರೆಗೂ ವಿಳಂಬ ಮಾಡಿ, ಈಗ ಅದನ್ನು ನಮ್ಮ ಮೇಲೆ ಏಕಪಕ್ಷೀಯವಾಗಿ ತಿದ್ದುಪಡಿ ಮಾಡಿ ಹೇರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದು ಸಾಮಾನ್ಯವಾಗಿ ಯಾವ ಕನ್ನಡಿಗನೂ ಯಾರೂ ಕರ್ನಾಟಕವಾಗಬೇಕೆಂದು ಕನಸು ಇಟ್ಟುಕೊಂಡಿದ್ದನೋ ಅವನು ನಿಜವಾಗಿ ಇವತ್ತು ಜೀವಂತನಾಗಿದ್ದರೆ, ಅವನು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸದೇ ಇರಲಾರನು. ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರವಿರಲಿ, ಅಥವಾ ಮಾನ್ಯ ಶ್ರೀ ನಿಜಲಿಂಗಪ್ಪನವರೇ ಅಲ್ಲಿ ಇರಲಿ, ಅಲ್ಲಿ ವ್ಯಕ್ತಿ ಯಾರು ಎಂಬ ಪ್ರಶ್ನೆಯಲ್ಲ. ಇದು ರಾಜ್ಯದ ಪ್ರಶ್ನೆ ಪಕ್ಷಾತೀತವಾದ ಪ್ರಶ್ನೆ, ದೇಶದ ಪ್ರಶ್ನೆ. ಇದು ಪ್ರತಿಷ್ಠೆಯ ಪ್ರಶ್ನೆಯಲ್ಲ. ಇವುಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು ಮತ್ತು ಇದರ ಆಗುಹೋಗುಗಳನ್ನು ಅರ್ಥ ಮಾಡಿಕೊಂಡು ಇದರ ಬಗ್ಗೆ ನಾವು ಬಹಳ ಜವಾಬ್ದಾರಿಯಿಂದ ಮಾತನಾಡಬೇಕು ಇದರ ಮೇಲೆ ಪೂರ್ವಾಗ್ರಹ ಪೀಡಿತರಾಗಿ ನಾವು ಮಾತನಾಡಬಾರದು. ಏಕೆಂದರೆ ಇದು ಒಂದು ಭಾವನಾತ್ಮಕವಾದ ವಿಷಯ. ಆದ್ದರಿಂದ ಆದಷ್ಟುಮಟ್ಟಿಗೆ ಭಾವೋದ್ರೇಕಕ್ಕೆ ಒಳಗಾಗದೆ ಎಲ್ಲರೂ ಮಾತನಾಡಬೇಕೆಂದು ನಾನು ಮೊದಲೇ ಭಿನ್ನೈಸಿಕೊಂಡೆ. ಇನ್ನೊಂದು ವಿಷಯ, ನನ್ನ ಭಾಷಣ ಸಪ್ಪೆಯಾಗಿತ್ತು ಎಂದು ಹೇಳಿದರು. ಈ ವಿಷಯದಲ್ಲಿ ಗಂಟಲು ಎತ್ತಿ ಕೂಗುವುದರಿಂದ, ಮನಮುಟ್ಟುವಂತೆ ಪ್ರತಿಪಾದನೆ ಮಾಡಿದಂತಾಗುವುದಿಲ್ಲ ಎಂದು ನಾನು ಭಾವಿಸಿದ್ದೇನೆ. ನಾನು ಸಾಮಾನ್ಯವಾಗಿ ಭಾವಪರವಶನಾಗಿರುತ್ತೇನೆ ಅನೇಕ ವೇಳೆ, ತಾವೆಲ್ಲರೂ ನೋಡಿರುವ ಹಾಗೆ, ಕೂತು ಮಾತನಾಡುವುದಕ್ಕೆ ಏನೋ ಒಂದು ಕಾರಣ ಇರಬಹುದೆಂದು ತಿಳಿಯಬೇಕಾಗಿದೆ. ಅದಕ್ಕೆ ನನ್ನ ಒಂದು ಆರೋಗ್ಯವೇ ಕಾರಣ. ನನಗೆ ಆರೋಗ್ಯ ಚೆನ್ನಾಗಿಲ್ಲವೆಂಬ ವಿಷಯವನ್ನು ಈ ಸಭೆಯ

(ಶ್ರೀ ಎಸ್. ಗೋಪಾಲಗೌಡ)

ಗಮನಕ್ಕೆ ಈಗಾಗಲೇ ನಾನು ತಂದಿದ್ದೇನೆ. ಅಭ್ಯಾಸದಮೇಲೆ ಓಡಾಡುತ್ತೇನೆ. ಸ್ವಲ್ಪ ದಿವಸಗಳಾದರೂ ಆಸ್ಪತ್ರೆಗೆ ಹೋಗಿ ಸೇರಿ ಎಂದು ಒಂದೇ ಸಮನೆ ಡಾಕ್ಟರ್ ಹೇಳುತ್ತಿದ್ದಾರೆ. ನನ್ನ ಹತ್ತಿರ ಈಗಲೂ ಔಷಧಿಗಳಿವೆ. ಅದು ಒಂದು ವ್ಯಕ್ತಿಗತವಾದ ವಿಷಯ. ಆದಾಗ್ಯೂ ಈ ನಿರ್ಣಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬಹಳವಾಗಿ ಹೇಳಿದ್ದಾರೆ. ಅದರಲ್ಲಿ ಇನ್ನೊಂದು ವಿಷಯ ಭಾವೋದ್ರೇಕವಾಗಿ ಮಾತನಾಡಬಾರದೆಂದು ಇದ್ದುದರಿಂದ, ಉದ್ದೇಶಪೂರ್ವಕವಾಗಿ ನಾನು ಬಹಳ ನಮ್ರವಾಗಿ ಎಲ್ಲರಿಗೂ ವಿನಂತಿ ಮಾಡಿಕೊಂಡೆ. ಇದು ರಾಜಕೀಯವಾಗಿ ತೀರ್ಮಾನಮಾಡುವ ವಿಷಯವಲ್ಲ. ಒಂದು ಸೂತ್ರದಮೇಲೆ ಸದಾ ಕಾಲವೂ ಎಲ್ಲರೂ ಒಪ್ಪುವಂಥ ಕೆಲಸವನ್ನು ಮಾಡಬೇಕು. ಫಜಲಾಲಿ ಕಮಿಷನ್ನಿನವರು ರಾಜಕೀಯ ಕೈ ಬಿಟ್ಟರೂ ಎಲ್ಲರಿಗೂ ನ್ಯಾಯವನ್ನು ದೊರಕಿಸಿಕೊಡಲಾರದೆ ಹೋದರು. ಅದು ಎಲ್ಲರಿಗೂ ತಿಳಿದಿರುವ ವಿಷಯ. ನಾವು ವೈಯಕ್ತಿಕವಾಗಿ ಮಹಾಜನ್ ಕಮಿಷನ್ನನ್ನು ಕಾದಿ ಬೇಡಿಮಾಡಿದ್ದಲ್ಲ ಅದನ್ನು ಮಾನ್ಯ ಶ್ರೀ ಚವಾಣ್ ಅವರೇ ಒಪ್ಪಿ, ಮಹಾರಾಷ್ಟ್ರದವರ ಒಂದು ಒತ್ತಾಯಕ್ಕೆ ಮಣಿದು ರಚನೆಯಾದುದು ಎಂಬುದಾಗಿ ನಾನು ಮೊದಲೇ ಹೇಳಿದ್ದೇನೆ. ಈಗ ನಮಗೇನೂ ಬರುವುದಿಲ್ಲವೆಂದು ಹೇಳಿದರೆ ಅದು ತಪ್ಪು. ರಕ್ತದ ಕೋಡಿ ಹರಿಸುವುದು, ಬೆಂಕಿ ಹಾಕುವುದು, ಚಳುವಳಿಗಳನ್ನು ಮಾಡುವುದು ಈ ರೀತಿ ಮಾಡುವುದಕ್ಕೆ ಬರುವುದಿಲ್ಲ ಇವನ್ನು ಸ್ವಂತ ಬೆಂಕಿ ಹಾಕುವುದಿಲ್ಲ, ಇವ ಸಭ್ಯಸ್ಥ, ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು. ಕೊನೆಯ ಪಕ್ಷ ರಕ್ತದ ಕೋಡಿಯನ್ನು ಹರಿಸುವುದಕ್ಕೆ ನನಗೆ ಆಗದೇ ಇದ್ದರೂ ನನಗೆ ಇಲ್ಲಿ ಮಾತನಾಡುವುದಕ್ಕೇನು ಅಡ್ಡಿ ? ನೀವು ಅಡ್ಡಿ ಬರುತ್ತೀರಾ ? ಅಸೆಂಬ್ಲಿ ಷುರುವಾದಮೇಲೆ ನಾನು ಹೊರಗೆ ಹೋಗುತ್ತೇನೆಂದು, ಹೇಳಿದರೆ ನೀವು ನಮಗೆ ಅಡ್ಡಿಪಡಿಸುವುದಕ್ಕಾಗುತ್ತದೆಯೇ ! ಮೊದಲೇ ನಾನು ಆ ಮಾತನ್ನು ಹೇಳಲಿಲ್ಲ. ಆದ್ದರಿಂದ ಯಾರೂ ನನ್ನ ಮೇಲೆ ತಪ್ಪಾಗಿ ತಿಳಿದುಕೊಳ್ಳಬಾರದೆಂದು ನಾನು ಮನವಿಮಾಡುತ್ತೇನೆ.

ಎರಡನೆಯದಾಗಿ, ನನ್ನ ವೈಯಕ್ತಿಕ ವಿವರಣೆ ಇದರ ಬಗ್ಗೆ ಏನೆಂದರೆ, ದುರಾದೃಷ್ಟವಶಾತ್ ನನ್ನ ಈ ನಿರ್ಣಯವನ್ನು ನಾನು ಈ ಸಭೆಯ ಮುಂದೆ ಇಡಬೇಕಾಯಿತು. ಏಕೆಂದರೆ ನಾನು ಕೇಳಿಕೊಂಡ ಪ್ರಕಾರ ಈ ವಿಷಯದ ಬಗ್ಗೆ ಒಂದು ನಿರ್ಣಯವಾಗಬೇಕು, ಅದನ್ನು ಮಾನ್ಯ ಶ್ರೀ ಸಿದ್ಧವೀರಪ್ಪನವರು ಮಂಡಿಸಬೇಕು ಅಥವಾ ಅವರು ತಪ್ಪಿದರೆ ಮಾನ್ಯ ಶ್ರೀ ಶಿವಪ್ಪನವರು ಮಂಡಿಸಬೇಕೆಂದು

12-30 P.M.

ಈ ಎರಡು ವಿಷಯಗಳಲ್ಲಿ ನಾನು ಸ್ಪಷ್ಟವಾಗಿ ಇದ್ದೆ. ನಾನು ಹರಿಹರದಿಂದಲೇ ಒಂದು ಕಾಗದ ಬರೆದೆ. ಇದನ್ನು 23ನೇ ತಾರೀಖಿನ ದಿನವೇ ಬರೆದಿದ್ದೆ. ಇದೆಲ್ಲಾ ಆದಮೇಲೆ ನನ್ನನ್ನು ಕರೆದರಲ್ಲಾ ಎಂದು ನಾನೇ ಬಂದೆ. ಇದರ ಮಧ್ಯದಲ್ಲಿ ಶ್ರೀ ಸಿದ್ಧವೀರಪ್ಪನವರಿಗೂ ಅಧ್ಯಕ್ಷರಿಗೂ ಏನು ಚರ್ಚೆಯಾಗಿದೆ ಅದರಂತೆ ಒಂದು ನಿರ್ಣಯ ಅವರೇ ತರುತ್ತಾರೆ, ನಾನು ಬೇರೆ ತಂದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ ಎಂದೂ ತಿಳಿದಿದ್ದೆ. ಇದಕ್ಕೆ ಐದಾರು ದಿನಗಳ ಹಿಂದೆಯೇ ಚೀಫ್ ಮಿನಿಸ್ಟರ್‌ರವರು ಒಂದು ಮೀಟಿಂಗು ಕರೆದಿದ್ದೇವೆ, ಇದಕ್ಕೆ ನನ್ನನ್ನೂ ಬರಬೇಕು ಎಂದು ಸೂಚನೆಗಳನ್ನು ಕಳಿಸಿದ್ದರು. ಇದರಲ್ಲಿ ಯಾವುದಾದರೂ ವ್ಯಕ್ತಿಗೆ ಸಂಬಂಧಪಟ್ಟ ವಿಷಯವಾಗಿದ್ದರೆ ಇದರ ಬಗ್ಗೆ ಚರ್ಚೆ ಮಾಡಿ ಭಾಗವಹಿಸಬೇಕೆಂದು ಕರೆದಾಗ ನಾನು ಬರುವುದಿಲ್ಲ ಎಂದು ಹೇಳಿದರೆ ಯಾರು ನನ್ನನ್ನು ಬಲಾತ್ಕರಿಸಲಾರರು. ಆದರೆ ಇದು ಒಂದು ಪ್ರಮುಖವಾದ ಪ್ರಶ್ನೆಯಾಗಿದೆ, ಇದರ ಬಗ್ಗೆ ನಾನು ಬಂದರೆ ಚರ್ಚೆ ಮಾಡಿ ಸೂಕ್ತವಾದ ನಿರ್ಣಯ ಮಾಡಬಹುದು ಎಂದೂ ಸಲಹೆ ಮಾಡಿದ್ದರು. ನಾನು ಆಗ ಸಾಗರ ಮತ್ತು ಶಿವಮೊಗ್ಗದಲ್ಲಿದ್ದೆ ಇಲ್ಲೂ ಕೂಡ ನನ್ನ ಸ್ನೇಹಿತರು ಕೆಲವರು ಇದರ ಬಗ್ಗೆ ನೀವು ಹೇಳಿಕೆ ಕೊಡಬೇಡವೇ ಎಂದು ಕೇಳಿದಾಗ ನಾನು ಇದರಲ್ಲಿ ಹೇಳುವುದೇನಿದೆ ? ಹೇಳುವುದನ್ನೆಲ್ಲಾ ಆಗಲೇ ಹಿಂದೆಯೇ ಹೇಳಲಾಗಿದೆ. ಈ ಹಳ್ಳಿಯಿಂದ ನಾನು ಹೇಳಿಕೆ ಕೊಟ್ಟರೆ ಏನಾಗುತ್ತದೆ. ಇದರ ಬಗ್ಗೆ ಪೇಪರುಗಳಲ್ಲಿ ಯಾವ ಯಾವ ವಿಚಾರಗಳು ಬರುತ್ತಿವೆ ಅವನ್ನೂ ನೋಡಿ ತಿಳಿದುಕೊಳ್ಳುತ್ತಿದ್ದೆ. ಮುಖ್ಯ ಮಂತ್ರಿಗಳು ಅಂದು ಸಭೆಯನ್ನು 11-30 ಗಂಟೆಗೆ ಕರೆದಿದ್ದರು. ನಾನು ಅಲ್ಲಿಗೆ ಸ್ವಲ್ಪ ತಡವಾಗಿ ಹೋಗಬೇಕಾಗಿ ಬಂತು. ಅಂತೂ ಹೋದೆ. ಹೋಗಿದ್ದಾಗ ಅಲ್ಲಿದ್ದ ಅನೇಕ ಮಾನ್ಯ ಸದಸ್ಯರುಗಳು ಕೆಲವು ವಿಚಾರಗಳ ಬಗ್ಗೆ ಚರ್ಚೆ ಮಾಡಿ ಸಾಮಾನ್ಯವಾದ ಒಂದು ತೀರ್ಮಾನಕ್ಕೆ ಬಂದಿದ್ದರು. ಇದಾದಮೇಲೆ 24ನೇ ತಾರೀಖು ನಾನು ಇದರ ಬಗ್ಗೆ ಒಂದು ನಿರ್ಣಯ ಏನು ಮಾಡಬೇಕು ಎಂದೂ ಹೇಳಿದೆ. ಅದನ್ನು ಅಲ್ಲೇ ಅಧ್ಯಕ್ಷರ ಹತ್ತಿರದಲ್ಲೇ ಕಾಗದ ತೆಗೆದುಕೊಂಡು ಬರೆದೆ. ಆಗ ನಾನು ಮೊದಲಿಗೆ ಬರೆ

ದಾಗ ಆಯೋಗದ ವರದಿ ಎಂದು ಬರೆಯಬೇಕೆಂದು ಹೇಳಿದಾಗ ಅಲ್ಲೇ ಇದ್ದ ಶ್ರೀ ಅಗ್ನಿಹೋತ್ರಿಯವರು ಇದನ್ನು ಐತೀರ್ಪು ಎಂದು ಬದಲಾಯಿಸೋಣ ಎಂದರು. ಹೀಗೆ ಈ ಐತೀರ್ಪನ್ನು ಕೇಂದ್ರ ಸರಕಾರ ಏಕಪಕ್ಷೀಯವಾಗಿ ತೀರ್ಮಾನ ಮಾಡಿ ಇದನ್ನು ಕಾರ್ಯಗತ ಮಾಡಲು ಹೊರಟಿದೆ, ಇದರಿಂದಾಗಿ ನಮ್ಮ ದೇಶದ ಜನರು ತಮ್ಮ ಕಳವಳವನ್ನು ವ್ಯಕ್ತಮಾಡುತ್ತಿದ್ದಾರೆ ಮತ್ತು ಈ ರೀತಿ ಮಾಡುವುದರಿಂದ ಸರಿಯಾಗುವುದಿಲ್ಲ ಎಂದು ಇದೇ ರೀತಿ ಐದಾರು ವಾಕ್ಯಗಳನ್ನು ಬರಿದಿದ್ದೆ. ಇದರಲ್ಲಿ ಆಮೇಲೆ ಸಲಹೆ ಮಾಡುತ್ತಾ 1967 ನೇ ಇಸವಿಯಲ್ಲಿ ಇದೇ ಅಸೆಂಬ್ಲಿಯಲ್ಲಾದ ತೀರ್ಮಾನದ ವಿಚಾರವನ್ನೂ ಇದರಲ್ಲಿ ಸೇರಿಸಿಕೊಳ್ಳಬೇಕು ಎಂದು ಹೇಳಿವೆ. ಮತ್ತು ಇಂತಹ ಒಂದು ನಿರ್ಣಯವನ್ನು ನಾನೇ ನನ್ನ ಹೆಸರಿನಲ್ಲಿ ತರಬೇಕೆಂದು ಇಷ್ಟ ಇರಲಿಲ್ಲ. ಇದನ್ನು ಬೇರೆ ಯಾರಾದರೂ ತರಲಿ. ಅದನ್ನು ಎಲ್ಲರೂ ಒಪ್ಪುವುದು ಸಾಧ್ಯವಾಗುತ್ತದೆ ಎಂದೂ ಸಲಹೆ ಮಾಡಿದೆ. ಆದರೆ ಬೇರೆ ಯಾರೂ ಇಂತಹ ನಿರ್ಣಯ ತರುವುದಿಲ್ಲ. ಈ ನಿರ್ಣಯ ನನ್ನ ಹೆಸರಿನಲ್ಲೇ ಹೋಗಬೇಕು ಎಂದು ಹೇಳಿದರು. ನಮ್ಮ ಲೆಜಿಸ್ಲೇಚರು ಸೆಕ್ರಟೇರಿಯಟ್ ಕಾರ್ಯದರ್ಶಿಗಳು ಹಾಗೂ ಇನ್ನಿತರರು ಇಂತಹ ಒಂದು ನಿರ್ಣಯವನ್ನು ಡ್ರಾಫ್ಟ್ ಮಾಡಿ ತಂದರು. ಅದನ್ನು ನಾನು 25ನೇ ತಾರೀಖು ಮೀಟಿಂಗು ಕರೆದಾಗ 11 ಗಂಟೆ ವೇಳೆಯಲ್ಲಿ ನೋಡಿದೆ. ಇಂಗ್ಲಿಷಿನಲ್ಲಿ ಆ ರೆಸಲ್ಯೂಷನ್ ಟೈಪ್ ಆಗಿತ್ತು. ನಾನು ಕೊಡುತ್ತಿರುವ ನಿರ್ಣಯ ಮಾನ್ಯ ಸದಸ್ಯರಾದ ಶ್ರೀ ಪಿ. ಎನ್. ಪಾಟೀಲ್‌ರವರ ನಿರ್ಣಯಕ್ಕೆ ಬದಲಾಗಿ ಕೊಡಬೇಕೆಂದು ತಂದಿದ್ದರು. ಇವನ್ನೆಲ್ಲಾ ಅಧ್ಯಕ್ಷರ ಎದುರಿನಲ್ಲೇ ಬರೆಯಲಾಯಿತು. ಅಧ್ಯಕ್ಷರ ಬಳಿ ಕಾರ್ಯದರ್ಶಿಗಳು ಹಾಗೂ ಅವರ ನೌಕರವರ್ಗದವರು ಸೇರಿಕೊಂಡು ಬರೆಯುತ್ತಿದ್ದರು. ಇದರಲ್ಲಿ ಇನ್ಯಾರು ಇದ್ದರೋ ನನಗೆ ಗೊತ್ತಿಲ್ಲ. ಸರಕಾರ ಇಂತಹ ಒಂದು ರೆಸಲ್ಯೂಷನ್ ಇಲ್ಲಿ ತಂದು ಮೂವ್ ಮಾಡುವ ಹಾಗಿಲ್ಲ. ಇದಕ್ಕಾಗಿ ಇತರ ನಿರ್ಣಯಗಳು ಬಂದಿವೆ. ಇದರಲ್ಲಿ ಯಾವ ನಿರ್ಣಯಕ್ಕೆ ಸರಕಾರ ಒಗೊಡುತ್ತೋ ಇಲ್ಲವೇ ಒಪ್ಪುತ್ತೋ ಅದು ಅಷ್ಟು ನನಗೆ ಗೊತ್ತಿರಲಿಲ್ಲ. ಸರಕಾರವೇ ನಿರ್ಣಯ ತರುವುದು ಅಷ್ಟು ಸಮಂಜಸ ಎಂದೂ ನಾನೂ ತಿಳಿದಿರಲಿಲ್ಲ. ಮಾನ್ಯ ಶ್ರೀ ಸಿದ್ದವೀರಪ್ಪನವರು ಹೇಳಿದುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಹೇಳಿರುವ ಮಾತುಗಳಲ್ಲಿ ಮಾಗ್ಯ ಎಲ್ಲೋ ಸತ್ಯ ಇದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಶ್ರೀಮಾನ್ ಪುಟ್ಟಸ್ವಾಮಿಯವರು, ಶ್ರೀ ವೆಂಕಟರಮಣಅಯ್ಯರ್‌ರವರು, ಶ್ರೀ ಹನುಮಂತಪ್ಪನವರು ನನ್ನನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಲಿಲ್ಲ. ಎರಡನೆಯದು, ನನ್ನ ನಿರ್ಣಯವನ್ನೇ ಅವರು ಒಪ್ಪಿಕೊಳ್ಳಬೇಕು ಎಂದು ನಾನು ಹೇಳಿಲ್ಲ ಇಂತಿಂತಹ ಸಲಹೆಗಳಿಂದ ಕೂಡಿ ಇದನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಇರತಕ್ಕ ಶಬ್ದಗಳಲ್ಲಿ ಇನ್ನೊಂದು ಅಲ್ಲೊಂದು ಸರಿ ಮಾಡಿ ಎಲ್ಲ ಶಬ್ದಗಳನ್ನೂ ಸರಿಯಾಗಿ ಹಾಕಿ ಸರ್ವತೋಮುಖವಾದ ಒಂದು ನಿರ್ಣಯ ಬರೆದು ತರಬೇಕು ಮತ್ತು ಅದರಲ್ಲಿ ಆದಷ್ಟು ಕಡಿಮೆ ಶಬ್ದಗಳನ್ನುಪಯೋಗಿಸಬೇಕು ಮತ್ತು ಇಂತಹ ಒಂದು ನಿರ್ಣಯವನ್ನು ಮಾನ್ಯ ಸದಸ್ಯರಾದ ಶ್ರೀ ಸಿದ್ದವೀರಪ್ಪನವರೇ ತರಬೇಕು ಎನ್ನುವುದು ನನ್ನ ಉದ್ದೇಶವಾಗಿತ್ತು. ಆದರೆ ಅವರು ಯಾವುದೋ ಕಾರಣಕ್ಕಾಗಿ ನಿರ್ಣಯ ತರುವುದಿಲ್ಲ ಎಂದು ಹೇಳಿದರು. ಇದಕ್ಕೆ ಎರಡು ಕಾರಣಗಳಿವೆ. ಮುಖ್ಯ ಮಂತ್ರಿಗಳು ಹೇಳಿದ ಪ್ರಕಾರ ಹಿಂದಿನ ಸಾರಿ ನಿಜಲಿಂಗಪ್ಪನವರು ಇಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ಇಂತಹ ಒಂದು ನಿರ್ಣಯವನ್ನು ಅವರು ತರದೆ ಅದನ್ನು ಜತ್ತಿಯವರ ಮೂಲಕ ಮಂಡಿಸಿದರು ಮತ್ತು ಅದರಂತೆ ಮಹಾಜನ್ ವರದಿಯನ್ನು ಕೇಂದ್ರದವರು ಪೂರ್ತಿ ಒಪ್ಪಿಕೊಂಡು ಕಾರ್ಯಗತ ಮಾಡಬೇಕು ಎಂದೂ ಇತ್ತು. ಇಲ್ಲಿ ಚರ್ಚೆಯಾದಮೇಲೆ ಇಂತಹ ಒಂದು ನಿರ್ಣಯ ಪಾಸಾಯಿತು. ಇದೇ ರೀತಿ ಇಲ್ಲೂ ಕೂಡ ಒಂದು ರೀತಿಯ ಸಂದಿಗ್ಧ ಪರಿಸ್ಥಿತಿ ಇದೆ, ರಾಜ್ಯದ ಜನತೆಗೆ ಆಶ್ವಾಸನೆಯನ್ನು ಸರಕಾರದ ಪರವಾಗಿ ಕೊಡುವ ಹೊರೆ ನಮ್ಮ ಮೇಲೆ ಬರುತ್ತದೆ, ಇದರ ಮೇಲೆ ಇದೇ ಕರೆಕ್ಟ್ ವ್ಯೂ ಎಂದು ನಾನು ಹೇಳುವುದು ಕಷ್ಟ ಮತ್ತು ನಾನೇ ಇಂತಹ ನಿರ್ಣಯ ತರುವುದು ಸರಿಯಿಲ್ಲ ಎಂದು ಮಾನ್ಯ ಸಿದ್ದವೀರಪ್ಪನವರು ಹೇಳಿದರು. 21ನೇ ತಾರೀಖಿನ ಅಜೆಂಡಾದಲ್ಲಿ ಗೋಪಾಲಗೌಡರ ಹೆಸರಿನಲ್ಲಿ ನಿರ್ಣಯ ಇದೆ ಎಂದು ನಾನು ಪೇಪರಿನಲ್ಲಿ ಓದುವುದಕ್ಕೆ ಮುಂಚೆ ನನ್ನ ಹೆಸರಿನಲ್ಲಿ ನಿರ್ಣಯ ಇರುವುದು ನನಗೆ ಗೊತ್ತಿರಲಿಲ್ಲ. ಮತ್ತೆ ಇದರ ಬಗ್ಗೆ ಚೀಫ್ ಮಿನಿಸ್ಟರ್‌ರವರೂ ಕೂಡ ನನಗೆ ಬರೆದಿದ್ದರು ಮತ್ತು ಶ್ರೀ ಸಿದ್ದವೀರಪ್ಪನವರು ರೆಸಲ್ಯೂಷನ್ ತರುವುದಿಲ್ಲ ಎಂದಾಗ ಇದರ ಬಗ್ಗೆ ಸ್ವಲ್ಪ ವಿವೇಚನೆಯಿಂದ ಯೋಚನೆ ಮಾಡಬೇಕಾಯಿತು. ಏನು ಮಾಡಬೇಕಾದರೂ ಇದಕ್ಕೆ ಶ್ರೀ ಶಿವಪ್ಪನವರೇ ನಿಂತು ಮಾಡಿದ್ದರೆ ಸರಿಯಾಗಿರುತ್ತೆ, ಅವರ ಕಡೆಯಿಂದ ಮಾಡಿಸಿ ಎಂದು ಹೇಳಿದಾಗ ಅವರೂ ಕೂಡ ನಾನೇ ಇಲ್ಲಿ ನಿರ್ಣಯ ಮಂಡಿಸಬೇಕೆಂದು ನನ್ನ ಹೆಸರಿನಲ್ಲೇ ಇರಲಿ ಎಂದೂ ಹೇಳಿದರು. ಅದರಂತೆ ಇಲ್ಲಿ ಇಂತಹ ಒಂದು ನಿರ್ಣಯ ಬಂತು. ಇದರಲ್ಲಿ ಹೆಚ್ಚು ಕಡಿಮೆ ಏನೂ ಮಾಡಿಲ್ಲ. ಒಂದು ವೇಳೆ ಸರಕಾರದ ಪಕ್ಷದವರು ಇದಕ್ಕೆ ಬೆಂಬಲ ಕೊಟ್ಟರೆ ನಿರ್ಣಯ ಪಾಸಾಗುತ್ತೆ ಇಲ್ಲದಿದ್ದರೆ ಆಗುವುದಿಲ್ಲ. ಒಟ್ಟಿನಲ್ಲಿ ಈ ನಿರ್ಣಯವನ್ನು ನಾನು ನನ್ನ ಹೆಸರಿನಲ್ಲೇ ತರಬೇಕೆಂದು

(ಶ್ರೀ ಎಸ್. ಗೋಪಾಲಗೌಡ)

ಮತ್ತು ಇಲ್ಲಿ ವಾದ ವಿವಾದ ಮಾಡಬೇಕೆಂದು ಇರಲಿಲ್ಲ. ನನ್ನ ಠರಾವು ಬಂದಾಗ ಇದು ಕನ್ನಡದಲ್ಲಿ ಇರಬೇಕು ಎಂದು ಸವಿಸ್ತಾರವಾಗಿ ಬರೆದು ಇದರಲ್ಲಿ ಒಂದೆರಡು ಶಬ್ದಗಳನ್ನು ಕಡಿಮೆ ಮಾಡಿ ತರಬೇಕೆಂದು ಹೇಳಿದ್ದೆ.

ಅದು ಏನೇ ಇರಲಿ ಅದನ್ನು ವಿವರಿಸಬೇಕಾಗಿಲ್ಲ. ಆ ನಿರ್ಣಯವನ್ನು ತಂದಾಗ ಇಂತಹ ಒಂದು ನಿರ್ಣಯ ಆದರೆ ಸರಿಕಾಗುತ್ತದೆ ಎಂದು ಹೇಳಿದ್ದೆ, ಮೂವ್ ಮಾಡುವವರು ಯಾರು ಅಂತ ಪ್ರಶ್ನೆ ಬೇರೆ ಬಂದಾಗ ಏನೋ ಕಾರಣದಿಂದ ಶಿವಪ್ಪನವರು ಬೇಡ ಅಂದಾಗ ಮತ್ತು ಸಿದ್ಧವೀರಪ್ಪನವರು ಸಭೆಗೆ ಬರದೇ ಇದ್ದಾಗ ಏನು ಮಾಡುವುದು ಅಂತ ಪ್ರಶ್ನೆ ಬಂತು. ನಾನು 24ನೇ ತಾರೀಖೇ ಮಾತನಾಡುವುದಕ್ಕೆ ಎದ್ದೆ. ಶ್ರೀಮಾನ್ ಸಿದ್ದವೀರಪ್ಪನವರು ಸಭೆಯಲ್ಲಿ ಇದ್ದಾಗ ನಾವು ಮಾತನಾಡಬಹುದು ತಾನೆ ಎಂದು ಕೇಳಿದಾಗ ನಿಮ್ಮ ಹತ್ತಿರ ಏನು ಪ್ರಪೋಸಲ್ಸ್ ಇವೆ ಕೊಡಿ ಅದನ್ನು ನಾನು ನನ್ನ ಪಕ್ಷದ ಸದಸ್ಯರ ಮುಂದು ಇಟ್ಟು ನಿಮಗೆ ನಾಳೆ 11 ಗಂಟೆಗೆ ಉತ್ತರಕೊಡುತ್ತೇನೆ ಎಂದು ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದರು. ಇದು ಒಂದು ಕಾಲಹರಣದ ದೃಷ್ಟಿ. ಇನ್ನೊಂದು ದೃಷ್ಟಿ ನಾವು ಏನು ನಿಲುವು ತೆಗೆದುಕೊಳ್ಳಬೇಕು ಅನ್ನುವುದನ್ನು ಕೇಳಬೇಕು ಅಂತ ಅನ್ನುವುದು. ಇದೇನೂ ಅಂತಹ ದೊಡ್ಡ ವಿಷಯ ಅಲ್ಲ, ದೇಶದ ಆಗುಹೋಗುಗಳ ಪ್ರಶ್ನೆ ಇದರಲ್ಲೇನೂ ಇಲ್ಲ. ಹಾಗಿದ್ದಾಗ್ಯೂ, ಎರಡು ದಿವಸ ಕಳೆದೆವು, 24 ಆಯಿತು 25 ಆಯಿತು, ಬಜೆಟ್ ಏನು ಆಗಬೇಕು ಅನ್ನುವುದು ತೀರ್ಮಾನವಾಗಬೇಕಾಗಿದೆ, ಯಾವುದಾದರೂ ಒಂದು ತೀರ್ಮಾನ ಮಾಡಿ ಎಂದು ಹೇಳಿದೆ. 25ನೇ ತಾರೀಖು ಕೂಡ ಯಾವಾಗ ಅವರಿಂದ ಏನೂ ಉತ್ತರ ಬರಲಿಲ್ಲ ಆಗ ಅವತ್ತು ಸ್ಪಷ್ಟವಾಯಿತು ಅವರ ನಿಲವು. ನಾವು ಯಾವ ರೀತಿಯಲ್ಲೂ ಇದರಲ್ಲಿ ಭಾಗಿಗಳಾಗಬಾರದು ಅಂತ ಅನ್ನುವುದು ಯಾವಾಗ ಗೊತ್ತಾಯಿತೋ ಆಗ ನಾನು ನನ್ನ ನಿರ್ಣಯವನ್ನು ಅಧ್ಯಕ್ಷರ ಚೇಂಬರ್‌ನಲ್ಲಿ ಕೊಟ್ಟೆ, ಒಪ್ಪಿಕೊಂಡರು ಏನಂತ ಅಂದರೆ ಅದನ್ನು ನಿಮ್ಮ ಹೆಸರಿನಲ್ಲಿ ಇಡುತ್ತೇನೆ ನಿಮ್ಮ ಹೆಸರಿನಲ್ಲಿ ಮೂವ್ ಆಗುತ್ತದೆ ಅಂತ. ಸಿದ್ಧವೀರಪ್ಪನವರು, ಶಿವಪ್ಪನವರು ಮತ್ತು ಮುಖ್ಯಮಂತ್ರಿಗಳು ಇಲ್ಲದೇ ಇದ್ದರೆ ನಾಲ್ಕನೆಯ ಹೆಸರು ಹೇಳುವುದಿಲ್ಲ ಅದು ಎಲ್ಲರಿಗೂ ಗೊತ್ತಿರುವಂತಹ ವಿಷಯ ನಾನು ಈಗ ಆ ಸ್ಟೇಟ್‌ಮೆಂಟನ್ನು ತಿದ್ದುಪಡಿಮಾಡಿಕೊಳ್ಳುತಾ ಇಲ್ಲ. ಆದಾದಮೇಲೆ ಇಷ್ಟೆಲ್ಲಾ ನಡೆದಿದೆ. ಇದರಲ್ಲಿ ಒಂದು ವಿಷಯ ಇದೆ, ಕೇಂದ್ರದಿಂದ ಹೀಗೆಯೇ ನೀವು ನಡೆದುಕೊಳ್ಳತಕ್ಕದ್ದು ಎಂಬ ಆದೇಶ ಇದ್ದಪಕ್ಷದಲ್ಲಿ ಅವರ ನಡವಳಿಕೆಯನ್ನು ನಾವು ಪ್ರಶ್ನೆ ಮಾಡಲಿಕ್ಕೆ ಬರುವುದಿಲ್ಲ, ಅದರೆ ಒಂದು ವಿಷಯ ದುರದೃಷ್ಟಕರ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದನ್ನು ಅದೇ ಅರ್ಥದಲ್ಲಿ ನಾನು ಹೇಳುತ್ತೇನೆ. ಏಕೆಂದರೆ ಈ ಒಂದು ವಿಷಯದ ಮೇಲೆ ಈ ಸಭೆ ಒಂದು ನಿರ್ಣಯವನ್ನು ಮಾಡಿದಮೇಲೆ ನಾವು ಯಾವುದದಾರೂ ಒಂದು ಆ ನಿರ್ಣಯಕ್ಕೆ ವಿರೋಧವಿರುವ ಪಕ್ಷಕ್ಕೆ ಸೇರಿದ್ದೇವೆ ಎಂಬ ಕಾರಣಕ್ಕಾಗಿ ನಿಲುವನ್ನು ಬದಲಾಯಿಸುವುದಕ್ಕಾಗುವುದಿಲ್ಲ ಎಂಬುದು ನನ್ನ ದೃಢವಾದ ನಿಲುವು, ಸೈದ್ಧಾಂತಿಕ ನಿಲುವು. ಏಕೆಂದರೆ ಇವತ್ತು ಈ ಪಕ್ಷದಲ್ಲಿ ಇದ್ದೇನೆ, ನಾಳೆ ಮತ್ತೊಂದು ಪಾರ್ಟಿಗೆ ಹೋದೆ, ಆಗ ಇದೆಲ್ಲಾ ಸುಮ್ಮನೆ ಹುಚ್ಚು, ರಾಷ್ಟ್ರೀಕರಣಕ್ಕೆ ನಾನು ತಯಾರಾಗಿಲ್ಲ, ಅದು ಒಂದು ಹುಚ್ಚು ಕೆಲಸ ಅಂತ ಹೇಳಿದರೆ ಯಾವ ಒಂದು ತತ್ವ, ನಿಲುವು, ನಿಯಮ ಇಲ್ಲದೇ ಇರುವ ಮನುಷ್ಯ ಅಂತ ಹೇಳಿ ಎಲ್ಲರಿಗೂ ಕಂಡುಬರುತ್ತದೆ. ಹಾಗೆ ನಾನು ಮಾಡುವುದಕ್ಕಾಗುವುದಿಲ್ಲ. ನನ್ನ 20—22 ವರ್ಷದ ಜೀವನದಲ್ಲಿ ನಾನು ಜೀವನದ ಒಂದು ಗುರಿಗೆ ಹೊರಟವನು, ಇನ್ನೂ ಆ ಗುರಿ ಮುಟ್ಟಿಲ್ಲ, ವೈಯಕ್ತಿಕವಾಗಿ ನಾನು ಆ ಗುರಿ ಮುಟ್ಟಬಹುದು. ಆದರೆ ಆ ಗುರಿ ಬಹಳ ದೊಡ್ಡದು, ಆ ಗುರಿ ಮುಟ್ಟುವ ತನಕ ಹೋರಾಡಬೇಕು ಕೆಲವನ್ನಾದರೂ ಮುಟ್ಟಬೇಕು ಅನ್ನುವ ಆತ್ಮವಿಶ್ವಾಸದಿಂದ ನಾನು ಹೊರಟವನು.

[Mr. SPEAKER in the Chair]

ಇದಕ್ಕಿಂತ ಇನ್ನು ಹೆಚ್ಚು ಏನೂ ಹೇಳುವುದಿಲ್ಲ. ನಾವು ತಿಳಿದುಕೊಂಡಿರುವ ಮಟ್ಟಿಗೆ ಮಹಾರಾಷ್ಟ್ರದವರ ಒತ್ತಾಯಕ್ಕೆ ಮಣಿದು ಸಾಧ್ಯವಾದಷ್ಟುಮಟ್ಟಿಗೂ ಮಾರ್ಚಿ ಎರಡರೊಳಗೆ ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ ಎಂದು ಪ್ರಧಾನಮಂತ್ರಿಯವರು ಹೇಳಿದ್ದುಂಟು. ಆದರೆ ಪ್ರಧಾನಿಯವರಿಗೂ ಕೂಡ ಈ ರೀತಿಯ ಏಕ ಪಕ್ಷೀಯವಾದ ಬದಲಾವಣೆಗಳನ್ನು ತಿದ್ದುಪಡಿಗಳನ್ನು ಮಾಡಿ ಮಹಾಜನ್ ಆಯೋಗದ ವರದಿಯನ್ನು ಕಾರ್ಯಗತ ಮಾಡುವುದಕ್ಕೆ ಇಷ್ಟವಿಲ್ಲ ಎಂದು ಹೇಳಿದ್ದೇನೆ. ದೆಹಲಿಯಿಂದ ಬಂದಿರುವ ವರ್ತಮಾನ ದೆಹಲಿಯಲ್ಲಿರತಕ್ಕ ಕರ್ನಾಟಕದ ಪಾರ್ಲಿಮೆಂಟ್ ಸದಸ್ಯರು ಸಭೆ ಸೇರಿ ದೆಹಲಿಯಲ್ಲಿ ತೀವ್ರವಾಗಿ ಇದನ್ನು ಪ್ರತಿಭಟನೆ ಮಾಡಿ ಅಕ್ಕಲಕೋಟೆ, ಜತ್ ಮತ್ತು ದಕ್ಷಿಣ ಸೋಲಾಪುರ ಗಡಿ ಮತ್ತು ಇತರ ಭಾಗಗಳನ್ನು ಕೊಡುವುದಕ್ಕೆ ಅಸಮ್ಮತಿಯನ್ನು

ಸೂಚಿಸಿದ್ದಾರೆ. ಮಹಾಜನ್‌ರವರು ಕೊಟ್ಟಿರತಕ್ಕ ತೀರ್ಮಾನವನ್ನು ನಾವು ವ್ಯಥೆಯಿಂದ ಒಪ್ಪಿಕೊಂಡಿದ್ದೇವೆ, ಅದರಲ್ಲಿ ನಿಪ್ಪಾಣಿ ಬಿಟ್ಟುಹೋಗಿದೆ, ಆದರೂ ಕೂಡ ಒಪ್ಪಿಕೊಂಡಿದ್ದೇವೆ. ಇಷ್ಟಾದರೂ ಕೂಡ ಇವತ್ತು ಪುನಃ ರಾಜಕೀಯವನ್ನು ಇದರಲ್ಲಿ ಬೆರೆಸಿ, ಎರಡು ರಾಜ್ಯಗಳನ್ನು ಗೊಂದಲದಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡಿರತಕ್ಕದು ಖಂಡನೀಯ ಎಂದು ನಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದರಲ್ಲಿ ಪ್ರಧಾನಿಯವರು ಸ್ವತಃ ಇದನ್ನು ಕಾರ್ಯಗತ ಮಾಡಿ ಏನಾದರೂ ಒಂದು ತೀರ್ಮಾನ ಮಾಡಲೇಬೇಕೆಂಬ ಒಂದು ಆತುರ ಏನೂ ಅವರು ತೋರಿಸಿಲ್ಲ. ಮುಖ್ಯಮಂತ್ರಿಗಳು ದೆಹಲಿಗೆ ಹೋಗಬೇಕಾಗಿತ್ತು ಎಂಬ ಆಪಾದನೆ ಇದೆ. ನಾನು ಒಪ್ಪಿಕೊಳ್ಳುತ್ತೇನೆ. ಅವರು ಅನಾರೋಗ್ಯದ ಕಾರಣ ಕೊಟ್ಟಿದ್ದರಿಂದ ನಾನು ಸುಮ್ಮನಾಗಬೇಕಾಯಿತು. ಇಲ್ಲದೇ ಇದ್ದರೆ ನಾನೂ ಕೂಡ ಏಕೆ ಹೋಗಲಿಲ್ಲ ಎಂದು ಕೇಳುತ್ತಾ ಇದ್ದೆ. ಇದು ಒಂದು ಸೂಕ್ಷ್ಮವಾದ ವಿಷಯ. ಪ್ರತಿಯೊಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ ನಿಲುವನ್ನೂ ಮುಂದುವರಿಸುವುದಕ್ಕಾಗುವುದಿಲ್ಲ. ಕೆಲವನ್ನು ಬಿಟ್ಟುಬಿಡಬೇಕಾಗುತ್ತದೆ. ಆ ರೀತಿ ಅವರು ಹೋಗದೇ ಇದ್ದರೂ ರಾಜ್ಯದ ಕೆಲವು ಅಧಿಕಾರಿಗಳನ್ನು ಕಳುಹಿಸಿದ್ದಾರೆ, ಸೂಕ್ಷ್ಮವಾಗಿ ಅವರಿಗೆ ಬ್ರೀಫ್ ಮಾಡಿಕಳುಹಿಸಿದ್ದಾರೆ. ಎಂದು ನಾನು ತಿಳಿದುಕೊಂಡಿದ್ದೇನೆ. ಅವರೇ ಮಾತನಾಡಬೇಕಾಗಿತ್ತು ಮಾತನಾಡಲಿಲ್ಲ ಅದು ಬೇರೆ ವಿಷಯ. ಅದೇ ಒಂದು ದೊಡ್ಡ ತಪ್ಪು ಅಂತ ಅದನ್ನೇ ಹಿಡಿದು ಆಕ್ಷೇಪಣೆ ಮಾಡುವುದು ಸರಿಯಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಅನೇಕ ವಿಷಯಗಳನ್ನು ಹೇಳುತ್ತೇವೆ. ವಿರೋಧ ಪಕ್ಷದವರು ಒಂದು ಗಂಟೆ ಎಂದರೆ ನಾನು ಎರಡು ಗಂಟೆ ಅಂತ ಅನ್ನುವುದು, ಇವತ್ತು ಸರ್ಕಾರಿ ಕೆಲಸ ಅಂದರೆ ಅದಾಗದು ನಾನ್ ಅಫಿಷಿಯಲ್ ಬಿಸಿನೆಸ್ ಆಗಬೇಕು ಅಂತ ಅನ್ನುವುದು ಈ ರೀತಿ ಎಲ್ಲಾ ಹೇಳುವುದು ಇದೆ. ಅದರ ಜೊತೆಗೆ ಸದಸ್ಯರು ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳುವುದು ಇಷ್ಟನ್ನು ಬಿಟ್ಟರೆ ಅದರಲ್ಲಿ ಇನ್ನೇನು ಇದೆ ಅಂತ ಅನ್ನುವುದು ಗೊತ್ತಾಗುವುದಿಲ್ಲ. ಅಲ್ಲಿ ರಾಜಕೀಯ ಮಾಡುತ್ತೇವೆ ಅಂದರೆ ಇನ್ನೇನೂ ಅಲ್ಲ, ಮೂರು ದಿವಸ ಅಂದರೆ ಆಗುವುದಿಲ್ಲ 4 ದಿವಸ ಅನ್ನುವುದು, 4 ದಿವಸ ಅಂದರೆ ಆಗುವುದಿಲ್ಲ 6 ದಿವಸ ಅಂತ ಅನ್ನುವುದು, 6 ದಿವಸ ಎಂದರೆ 8 ದಿವಸ ಅಂತ ಅನ್ನುವುದು ಈ ರೀತಿ ಕೈ ಒರಿಸಿಕೊಂಡು ಹೊರಟುಬಿಡುತ್ತೇವೆ. ಈ ರೀತಿಯ ರಾಜಕೀಯ ನೋಡಿ ಆಶ್ಚರ್ಯವಾಯಿತು. ಆದರಲ್ಲಿ ಇಂಡಿಕೇಟಿನವರು ತೆಗೆದುಕೊಂಡಿರುವ ನಿಲುವು ಯಾವ ದೃಷ್ಟಿಯಿಂದಲೂ ಹಿತಕರವಾಗಿಲ್ಲ? ಇದರಿಂದ ಅವರ ಭವಿಷ್ಯಕ್ಕೆ, ಪ್ರಧಾನಿಗಳ ಪಕ್ಷದ ಭವಿಷ್ಯಕ್ಕೆ ಕುಂದನ್ನುಂಟುಮಾಡುತ್ತದೆ ಎಂದು ಅವರಿಗೆ ಹೇಳಿದ್ದೆ. ಒಂದು ರೀತಿ ಹಿಂದೆ ಬಿಸಿಯಲ್ಲಿ ಏನೋ ನಡೆದುಹೋಯಿತು. ಮುಂದೆ ಪುಟ್ಟಸ್ವಾಮಿಗಳಂಥವರು ಪಕ್ಷ ಬಿಟ್ಟುಹೋಗಬಹುದು, ಹೊಸದಾಗಿ ಉತ್ಸಾಹದಿಂದ ಅವರು ಹೊಸ ಪಕ್ಷಕ್ಕೆ ಸೇರಿದ್ದಾರೆ. ಅವರು ತಾಳವಾಡಿ ಫಿರ್ಕಕ್ಕೆ ಸಂಬಂಧಪಟ್ಟವರು, ಪಕ್ಕದ ಊರಿನವರು, ಅವರು ತಾಳವಾಡಿಯವರಿಗಾಗಿ ತಿದ್ದುಪಡಿ ತರಬೇಕಾಯಿತು. ಈ ರೀತಿಯ ಸನ್ನಿವೇಶವಿದೆ. ಈಗಲಾದರೂ ನಮ್ಮ ಇಂಡಿಕೇಟ್ ಸ್ನೇಹಿತರು ದೇಶದ ಹಿತವನ್ನು ಅರ್ಥಮಾಡಿಕೊಳ್ಳಲಿ, ಮುಂದೇನು ನಡೆಯಬಹುದೆಂಬುದನ್ನು ಅರ್ಥಮಾಡಿಕೊಳ್ಳಲಿ, ರಾಜ್ಯದ ಹಿತದೃಷ್ಟಿಯಿಂದ ನಾವು ಯಾವ ದಾರಿಯಲ್ಲಿ ಹೋಗಬೇಕೆಂಬುದನ್ನು ಅರ್ಥಮಾಡಿಕೊಂಡು ವಿವರಣೆ ಕೊಡಲಿ ಎಂದು ನಾನು ಕಳಕಳಿಯಿಂದ ಹೇಳುತ್ತೇನೆ. ನನಗೆ ಜಗಳ ನೋಡುವುದು ಕಷ್ಟ, ಬ್ಲಡ್‌ಪ್ರೆಷರ್ ಇರುವುದರಿಂದ ಜಗಳವಾದರೆ ಹೊರಗೆ ಹೋಗುತ್ತೇನೆ. ಈ ಸಾಲಿಗೆ ಅವರು ಬರುವುದು, ಇಲ್ಲಿಂದ ಅಲ್ಲಿಗೆ ಹೋಗುವುದು ಸ್ವಲ್ಪ ಕಾಲ ನಡೆಯುತ್ತದೆ. ಈಗಲೂ ಈ ಕೆಲಸ ನಡೆಯುತ್ತದೆ, ನೀವು ನೀವಲ್ಲದೆ ನಾವು ನಾವೂ ಹೊಡಕೊಳ್ಳಬೇಕಾಗುತ್ತದೆ. 1948 ರಲ್ಲಿ ಸಾಮೂಹಿಕವಾಗಿ ನಾವು ರಾಜೀನಾಮೆ ಕೊಟ್ಟೆವು. ನಾನಾಗಲಿ ಶಿವಪ್ಪನವರಾಗಲಿ ಕಾಂಗ್ರೆಸ್ಸನ್ನು ವಿರೋಧಿಸುತ್ತಿಲ್ಲ, ಕಾಂಗ್ರೆಸ್ಸಿನ ಕಾರ್ಯಕ್ರಮ, ಧೋರಣೆ ಮುಂತಾದುವುಗಳ ಬಗ್ಗೆ ವಿಶ್ವಾಸ ಕಡಮೆಯಾಗಿದೆ. ಕಾಂಗ್ರೆಸ್ಸಿನವರಮೇಲೆ ವೈಯಕ್ತಿಕವಾಗಿ ಹೆಣ್ಣು ಕೊಡಲಿಲ್ಲವೆಂದು ಬೇಜಾರಿಲ್ಲ ಅಥವಾ ಗಂಡು ಮಾಡಿಕೊಳ್ಳಲಿಲ್ಲ ಎಂದು ಬೇಜಾರಿಲ್ಲ ಅಥವಾ ಲೈಸೆನ್ಸ್ ಯಾವುದಕ್ಕೋ ಕೊಡಲಿಲ್ಲ ಎಂಬ ಅಸಮಾಧಾನವಿಲ್ಲ. ಇದು ಯುದ್ಧರಂಗ, ಇಂದು ನಾವು ಆ ಶಾಂತಿ ಪರ್ವ ದಾಟಿ ಈ ಭಾರತದಲ್ಲಿ ಯುದ್ಧಪರ್ವಕ್ಕೆ ಅಣಿಯಾಗುತ್ತಿದ್ದೇವೆ. ಆದುದರಿಂದ ಯಾರ ಜೀವ ಯಾರ ಕೈಲಿದೆ ಎಂದು ಭರವಸೆ ಕೊಡುವುದಿಲ್ಲ. ಮುರಾರ್ಜಿಯವರು ಹತ್ತು ವರ್ಷ ಅರಾಜಕತೆ ಇರಬಹುದು ಎಂದು ಹೇಳುತ್ತಾರೆ, ನಾನೂ ಅದನ್ನೇ ಹೇಳಬಹುದು. ಮಿಲಿಟರಿ ಡಿಕ್ಟೇಟರ್‌ಷಿಪ್ ಅಥವಾ ಬೇರೊಂದು ಬಂದರೆ ಅದು ಬೇರೆ ಮಾತು. ಹೊರದೇಶದ ಮಿಲಿಟರಿ ಬರುವುದೋ ಅಥವಾ ನಮ್ಮ ದೇಶದ ಮಿಲಿಟರಿ ಬರುವುದೋ ಗೊತ್ತಿಲ್ಲ ಆ ಎರಡು ದೊಡ್ಡ ದೇಶಗಳು ನಮ್ಮ ದೇಶವನ್ನು ತಮ್ಮ ಕಡೆ ಎಳೆದುಕೊಳ್ಳಲು ಪ್ರಯತ್ನಮಾಡುತ್ತಿವೆ. ಹೀಗಿರುವಾಗ ದೇಶದೊಳಗೆ ಸರ್ವಾಧಿಕಾರ ಬರಬಹುದು ಅಥವಾ ಹೊರಗಿನ ಸರ್ವಾಧಿಕಾರ ಬರಬಹುದು. ಮುಖ್ಯಮಂತ್ರಿಗಳು ಇದು ಸರ್ವಾಧಿಕಾರ ಎಂದು ಹೇಳುತ್ತಾರೆ, ಅದನ್ನು ಒಪ್ಪುವುದಿಲ್ಲ, ಇದೊಂದು

(ಶ್ರೀ ಎಸ್. ಗೋಪಾಲಗೌಡ)

ರೀತಿಯ ಅಧಿಕಾರ, ಇದಕ್ಕೆ ಏನೂ ಹೇಳುವುದಿಲ್ಲ. ಆದರೆ ಸರ್ವಾಧಿಕಾರ ಬಂದರೆ ಅದು ಎಂಥಾದ್ದು ಎಂಬುದು ಗೊತ್ತಾಗುತ್ತದೆ. ಬ್ರಿಟಿಷರು ಕೂಡ ಸರ್ವಾಧಿಕಾರ ನಡೆಸಲಿಲ್ಲ, ಅವರು ಕನ್ನಡವಲ್ಲೇ ಮನಿಯಾರ್ಡರು ಫಾರಮನ್ನು ಪ್ರಿಂಟ್‌ಮಾಡಿದರು, ಅವರ ಕಾಲದಲ್ಲಿ ಕನ್ನಡದಲ್ಲೇ ಗ್ರಾಮ ಪಂಚಾಯಿತಿ ಲೆಕ್ಕ ಇಡುತ್ತಿದ್ದರು. ಎರಡು ನೂರು ವರ್ಷದ ನಂತರ ಒಂದು ರೀತಿಯ ಆಡಳಿತ ನಡೆಯುತ್ತಿದೆ. ಮದರ್ ಪಾರ್ಲಿಮೆಂಟ್ ಎಂದು ಹೇಳುತ್ತಾರೆ, ಇತಿಹಾಸ ಬೇರೆ, ಆ ದೇಶವೇ ಬೇರೆ ; ಈ ದೇಶದ ಇತಿಹಾಸವೇ ಬೇರೆ, ಈ ದೇಶವೇ ಬೇರೆ, ಜನರೇ ಬೇರೆ. ಅವರು ದಾಟಿರುವ ಗಂಡಾಂತರ ನಾವಿನ್ನೂ ದಾಟಬೇಕಾಗಿದೆ. ಈ ರೀತಿ ಇರುವುದರಿಂದ ಇಲ್ಲಿ ನಾವು ನಮ್ಮನ್ನೇ ಹೋಲಿಸಿಕೊಳ್ಳಬೇಕು. ಇಂದು ಇಂಡಿಕೇಟಿನವರು ಒಂದು ಗಂಡಾಂತರಕಾರಿ ಹಾದಿ ತುಳಿದಿದ್ದಾರೆ. ಬಹುಶಃ ಇಲ್ಲಿ ಸಿಂಡಿಕೇಟಿನವರು ಅಧಿಕಾರದಲ್ಲಿರುವುದರಿಂದ ನಾವೇನೂ ಕೆಲಸ ಮಾಡಿಕೊಡಬಾರದು ಎಂಬ ಭಾವನೆ ಅವರಿಗಿದೆಯೋ ಏನೋ. ಪ್ರಧಾನಿಯವರು ಹಾಗೆ ಮಾಡಬೇಕೆಂದು ಹೇಳಿದ್ದಾರೆಂದು ನಾನು ಹೇಳುವುದಿಲ್ಲ. ಆದೇಶ ಮೇಲಿನಿಂದ ಬಂದರೆ ಮಾಡಲೇಬೇಕು, ಅದನ್ನು ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ, ಅದು ಬೇರೆ. ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಾದ ನಂದೀಹಳ್ಳಿಯವರು ಭಾಷಣ ಮಾಡಿದರು, ಅವರಿಗೆ ಕನ್ನಡ ಬರುವುದಿಲ್ಲ, ಇಂಗ್ಲೀಷ್, ಸಹ ಚೆನ್ನಾಗಿ ಬರುವುದಿಲ್ಲ, ಒಂದು ರೀತಿ ಅವರು ಹೇಳಿದರು; ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಹೇಳಿದರು. ಅದು ಒಳ್ಳೆಯ ಶಬ್ದವಲ್ಲ. ಆದರೂ ಯುದ್ಧದ ಹಂತದಲ್ಲಿ ಅವರಿದ್ದಾರಂತೆ. ಇದು ಅವರ ಪಕ್ಷದಿಂದ ಬಂದಿರುವ ನಿರ್ದೇಶ. ಅದರ ಪ್ರಕಾರ ಅವರು ಹೇಳುವುದರಿಂದ ನಾವೇನೂ ಮಾಡುವುದಕ್ಕಾಗುವುದಿಲ್ಲ, ಎಂ. ಇ. ಎಸ್. ನಿರ್ಣಯ ಹಾಗೆ ಎಂದು ಅವರು ಹೇಳುವುದು. ಅವರು ಆ ರೀತಿ ಹೇಳುವುದರಿಂದ ಅವರನ್ನು ಬಿಟ್ಟರೂ ನಾವೆಲ್ಲಾ ಒಂದಾಗುತ್ತೇವೆ ಎಂಬ ಆಸೆ ಇತ್ತು. ಆದರೆ ಸಿದ್ದವೀರಪ್ಪನವರು ಬೇರೆ ದಾರಿ ಹಿಡಿದಿದ್ದಾರೆ, ಅವರು ಯಾವುದೋ ಒಂದು ಆಸೆಯಿಂದ ಕೆಲಸಮಾಡುತ್ತಿದ್ದಾರೆ, ಅವರು ನಿರಾಸೆಗೆ ಒಳಗಾಗುತ್ತಾರೆಂಬ ಅಭಿಪ್ರಾಯವಿದೆ.

ಇನ್ನೊಂದು ವಿಷಯ, ಗೋಪಾಲಗೌಡರು ಸರಕಾರದ ಪೋಷಕರು, ರಕ್ಷಕರು, ಅದಕ್ಕೆ ಸರಿಯಾದ ನಿರ್ಣಯ ತಂದಿದ್ದಾರೆ ಎಂದು ಹೇಳಿದರು· ಆ ಮಾತನ್ನು ಅಲ್ಲಗಳೆಯುವುದಿಲ್ಲ, ಇಂದು ಸರಕಾರವನ್ನು ರಕ್ಷಿಸುವ ಮತ್ತು ಪೋಷಿಸುವ ನಿರ್ಣಯವಿದೆ. ಹಾಗಿಲ್ಲದಿದ್ದರೆ ಸರಕಾರದ ಪಕ್ಷದವರು ಅದಕ್ಕೆ ಬೆಂಬಲ ಕೊಡುತ್ತಿರಲಿಲ್ಲ, ಎರಡನೆಯದಾಗಿ ಮುಖ್ಯ ಮಂತ್ರಿಗಳು ಸಮರ್ಥನ ಮಾಡುತ್ತಿರಲಿಲ್ಲ. ಇದು ಎಲ್ಲರಿಗೂ ಗೊತ್ತಾಗುತ್ತದೆ. ಹಿಂದೆ ಶ್ರೀ ಸಿದ್ದಯ್ಯ ಕಾಶಿಮಠ ಅವರು ಸದಸ್ಯರ ಸಂಬಳವನ್ನು ಹೆಚ್ಚಿಸುವ ಮಸೂದೆಯನ್ನು ಸಭೆಯ ಮುಂದೆ ತಂದರು. ಅವರನ್ನು ನಾವೆಲ್ಲರೂ ಬಹಳ ಕಟುವಾಗಿ ಟೀಕೆ ಮಾಡಿದೆವು. 'ನೀವು ಶ್ರೀಮಾನ್ ಕಂಠಿಯವರ ಕೈಗೊಂಬೆಯಾಗಿದ್ದೀರಿ' ಎಂದು ಹೇಳಿದೆವು. ಸ್ವಲ್ಪಮಟ್ಟಿಗೆ ಸತ್ಯವಿರಬಹುದು. ಸಂಬಳ ಬಿಡಿ ಎಂದು ನನಗೆ ಹೇಳಿದರು. ನಾನು ಅಷ್ಟು ಮೂರ್ಖನಲ್ಲ ನಿಮಗೆಲ್ಲ ಸಂಬಳ ಕೊಟ್ಟು ನಾನು ತಿರುಪೆ ಬೇಡುವಷ್ಟು ಮೂರ್ಖನಲ್ಲ. ಎಲ್ಲರೂ ತೆಗೆದುಕೊಂಡಾಗ ನಾನೂ ತೆಗೆದುಕೊಳ್ಳುತ್ತೇನೆಂದು ಹೇಳಿದೆ. ಆಗ ನಾನು ತೆಗೆದುಕೊಂಡ ನಿಲುವು ಬೇರೆ. ಆಗ ನಾನು ನನ್ನ ವೈಯಕ್ತಿಕ ಪ್ರಶ್ನೆಯ ಮೇಲಿನಿಂದ ಹೇಳಲಿಲ್ಲ. ದೇಶದಲ್ಲಿ ಕಡು ಬಡವರಿರುವಾಗ ನಾವು ನೂರು ರೂಪಾಯಿ ಎಲ್ಲರಿಗೂ ಕೊಡಿಸುವುದಕ್ಕೆ ಆಗದೆ ಇರುವಾಗ, ರೂಲಿಂಗ್ ಕ್ಲಾಸ್ ಎಂದು 400 ರೂಪಾಯಿ ತೆಗೆದುಕೊಳ್ಳೋಣವೇ ? ಎರಡು ರೂಪಾಯಿ ಕೊಡುವುದಕ್ಕಾಗದೆ ಇರುವಾಗ 25 ರೂಪಾಯಿ ತೆಗೆದುಕೊಳ್ಳೋಣವೇ ? ನಮ್ಮದು ಬಹಳ ದೊಡ್ಡ ಆದರ್ಶ ಆಗುತ್ತದೆಯೇ ? ಈ ಅರ್ಥದಲ್ಲಿ ನಾನು ಮಾತನಾಡಿದ್ದು. ದೇಶದಲ್ಲಿ ಎಲ್ಲ ಕಡೆಯೂ ಪಾರ್ಲಿಮೆಂಟ್‌ನಲ್ಲಿ ಮಾಡಿದ್ದಾರೆ, ಇನ್ನೊಂದು ರಾಜ್ಯದಲ್ಲಿ ಮಾಡಿದ್ದಾರೆ ಎಂದು ಎಲ್ಲರೂ ಮಾಡುತ್ತಾರೆ. ಮುಂದೆ ಏನಾಗುತ್ತದೆ ಎನ್ನುವುದನ್ನು ನೋಡೋಣ.

1-00 P. M.

ನಿರ್ಣಯಗಳನ್ನು ಮತಕ್ಕೆ ಹಾಕುವ ಮುಂಚೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಶ್ರೀಮಾನ್ ವಿ. ಎನ್. ಪಾಟೀಲರ ನಿರ್ಣಯದಲ್ಲಿ, ಕೇಂದ್ರ ಸರ್ಕಾರ ಈ ರೀತಿಯ ನಿಲುವನ್ನು ತಳೆಯುತ್ತದೆ ಎಂಬುದು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ರೀತಿ ಮತ್ತು ಅದರಿಂದ ಉದ್ಭವಿಸಿರುವ ಸನ್ನಿವೇಶವನ್ನು, ರಾಜ್ಯದಲ್ಲಿ ಉದ್ಭವಿಸಿರುವ ವಿಷಯವನ್ನು ಈ ಸಭೆ ಚರ್ಚಿಸಬೇಕು ಎಂದು ಕೇಳಿದ್ದಾರೆ. ನಮ್ಮ ಪಕ್ಷದ ಸದಸ್ಯರಾದ ಶ್ರೀ ಎಂ. ನಾಗಪ್ಪನವರು ಒಂದು ನಿರ್ಣಯವನ್ನು

ಕೊಟ್ಟಿದ್ದಾರೆ. ಅವರು ಬಹಳ ಪ್ರಿಸೈಸ್ ಆಗಿ ಬರೆದಿದ್ದಾರೆ. ನನ್ನ ನಿರ್ಣಯಕ್ಕೂ ಶ್ರೀ ನಾಗಪ್ಪ ನವರ ನಿರ್ಣಯಕ್ಕೂ ಏನೂ ವ್ಯತ್ಯಾಸವಿಲ್ಲ. ಯಾರಾದರೂ ಭಾಷಾ ಪಂಡಿತರು ನೋಡಬಹುದು, ಈನ್ನೊಬ್ಬ ಪಂಡಿತರು ನೋಡಬಹುದು. ಶ್ರೀ ನಾಗಪ್ಪನವರು ನನ್ನ ಹತ್ತಿರ ಮಾತನಾಡಿದ್ದು ಅವರು ನಿರ್ಣಯವನ್ನು ಕೊಟ್ಟ ನಂತರ ಅವರ ನಿರ್ಣಯ ಈ ರೀತಿ ಇದೆ :

> "This House while reiterating its previous resolution urges the Government of India to accept the Mahajan Commission report *in toto* and implement it forthwith. Any change or deviation is not only not acceptable but is condemned."

ಪ್ರಿಸೈಸ್ ಆಗಿ, ಕಂಡೆಮು್ ಮಾಡುತ್ತೇವೆ ಎನ್ನುವ ಪದವನ್ನು ಹಾಕಿದ್ದಾರೆ. ಕಂಡೆಮು್ ಮಾಡುವುದು ಬೇಡ, ಯಾರನ್ನು ಯಾರು ಕಂಡೆಮು್ ಮಾಡುವುದು ಬೇಡ, ಈಗ ಸದ್ಯಕ್ಕೆ ಇಷ್ಟು ಮಾಡಿ, ಇದು ನಿಮ್ಮ ನಿರ್ಣಯದ ಎಲಾಬೊರೇಷನ್‌ನಂತೆ ಇದೆ. ನನ್ನ ನಿರ್ಣಯದಲ್ಲಿ ಒಂದುವಿಷಯ ಮಾತ್ರ ಹೊಸದು ಇದೆ. ನೀವು ಒಪ್ಪುವುದಾದರೆ ನಿಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ನಾನು ಅವರನ್ನು ಕೇಳಿಕೊಂಡಿದ್ದೇನೆ.

ಇನ್ನು ನಂಜೇಗೌಡರ ನಿರ್ಣಯ, ಶ್ರೀ ಸಿದ್ದವೀರಪ್ಪನವರ ನಿರ್ಣಯದ ಎಬಿಟಮೈಸ್ಡ್ ವರ್ಷನ್ ಎಂದು ಹೇಳಬಹುದು.

> This House is of the opinion that no change in the boundaries of Mysore State fixed in the S. R. C. Act 1959 should be made except for such minor changes as may be found necessary by the Southern Zonal Council.

ಬಹಳ ಸಣ್ಣಗೆ ಮೂರೇ ವಾಕ್ಯಗಳಲ್ಲಿ ಬರೆದಿದ್ದಾರೆ.

ಶ್ರೀ ಸಿದ್ದವೀರಪ್ಪನವರು ಬರೆದಿರುವುದನ್ನು ನೋಡಿ ನನಗೆ ವ್ಯಸನವಾಗುತ್ತದೆ. ಗೋಪಾಲ ಗೌಡರ ಹೆಸರಿನಲ್ಲಿ ಮೊದಲೇ ಕೊಟ್ಟಿದ್ದಾರೆ ಎನ್ನುವುದೂ ಒಂದು. ಮುಖ್ಯ ಮಂತ್ರಿಗಳು ಸರಿಯಾಗಿ ಮಾತನಾಡಲಿಲ್ಲ ಎನ್ನುವುದು ಒಂದು ಇತ್ಯಾದಿ ಇತ್ಯಾದಿ ಕಾರಣಗಳು ನನಗೆ ಬಹಳ ದುಃಖವನ್ನುಂಟು ಮಾಡಿವೆ. ನನ್ನ ನಿರ್ಣಯವಾದರೂ, ನಾನು ಮನೆಯಲ್ಲಿಯೇ ಕುಳಿತುಕೊಂಡು ಅವರು ಕಳುಹಿಸಿ ದಂತೆ ಕಳುಹಿಸಿರುವುದಿಲ್ಲ. ಚರ್ಚೆ ಮಾಡಿ, ಸರ್ಕಾರ ಎಷ್ಟು ದೂರ ನಮ್ಮ ಜೊತೆಗೆ ಬರಬಹುದು, ಎಷ್ಟು ದೂರ ಬರಲಾರದು, ಏನೇನು ಕಮಿಟ್‌ಮೆಂಟ್ಸ್ ಮಾಡಿಕೊಂಡಿದೆ ಎನ್ನುವುದನ್ನು ಗಮನ ದಲ್ಲಿಟ್ಟುಕೊಂಡು ಬರೆದಿರುವುದು. ಮಾನ್ಯ ಸಿದ್ದವೀರಪ್ಪನವರ ನಿರ್ಣಯ ಈ ರೀತಿಯಾಗಿದೆ.

> "In view of the serious tension and unhealthy controversies that have developed in the country on the Mysore–Maharashtra Border issue, this House of is opinion that it is expedient and in the interest of the country to stick to status quo already established under the provisions and procedures for adjustments as provided in the States Re-organisation Act, 1956."

ಶ್ರೀ ನಂಜೇಗೌಡರ ನಿರ್ಣಯ ಇದಕ್ಕಿಂತ ಯಾವರೀತಿಯಲ್ಲಿ ಬೇರೆಯದು ಎಂದು ಅವರು ಯಾರೂ ಹೇಳಲಿಲ್ಲ, ನಾನು ಬಹಳ ಸಲ ಓದಿದೆ. ನಿನ್ನೆಯದಿನ ಶ್ರೀ ಸಿದ್ದವೀರಪ್ಪನವರು ಅವರ ನಿರ್ಣಯಕ್ಕೆ ಒಂದು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ತಾಳವಾಡಿ ಫಿರ್ಕಾ, ಹೊಸೂರು ಬೇಕಾದರೆ ಸೇರಿಸಿಕೊಳ್ಳಿ ಎಂದು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ಇದು ಅವರ ಮೂಲ ನಿರ್ಣಯಕ್ಕೆ ವಿರುದ್ಧವಾಗುತ್ತದೆ. ಮಾನ್ಯ ಸಿದ್ದವೀರಪ್ಪನವರು ಇದಕ್ಕೆ ಎಟ್‌ಸೆಟ್ರಾ ಎಂದು ಸೇರಿಸಿಕೊಳ್ಳಿ ಎಂದು ಈ ದಿನ ಹೇಳಿದರು. ಇದು ಬಾಲ ನಾಯಿಯನ್ನು ಅಲ್ಲಾಡಿಸಿದ ಹಾಗೆ ಆಗುತ್ತದೆ. ಒಂದೆರಡು ಹಳ್ಳಿಯನ್ನು ಬಿಟ್ಟಿದ್ದರೆ ಎಟ್ಸೆಟ್ರಾ ಎಂದು ಹೇಳಬಹುದು. ನಿಪ್ಪಾಣಿ ಎಂದು ಬರೆದು ಅನಂತರ ಎಟ್ಸೆಟ್ರಾ ಎಂದು ಬರೆದರೆ ಅದರ ಹತ್ತಿರವಿರುವ ಯಾವುದಾದರೂ ಹಳ್ಳಿಗಳಿರಬಹುದು ಎಂದು ಅರ್ಥವಾಗುತ್ತದೆ. ಈ ರೀತಿ ಅವರ ವಾಕ್ ವೈಖರಿ ಇದ್ದರೆ, ನಾವು ಏನು ಹೇಳುವುದಕ್ಕೆ ಸಾಧ್ಯ ? ಈ ಒಂದು ವಿಷಯವನ್ನು ಯಾವ ಕಾರಣಕ್ಕಾಗಿ ಸೇರಿಸಿದ್ದಾರೆ ? ಸದುದ್ದೇಶದಿಂದ ಸೇರಿಸಿದ್ದಾರೆಂದು ಹೇಳೋಣವೇ ? ದೇಶವನ್ನು ಕಾಪಾಡುವುದರಲ್ಲಿ, ಹೋರಾಟ

(ಶ್ರೀ ಎಸ್. ಗೋಪಾಲಗೌಡ)

ಮಾಡುವುದರಲ್ಲಿ ಉತ್ತರನ ಪೌರುಷ ಎಂದು ಏನೋ ಹೇಳುತ್ತಾರಲ್ಲ ಹಾಗಾಗಬಾರದು. ಬೃಹನ್ನಳೆ ಯಾರು, ಉತ್ತರ ಯಾರು ಎನ್ನುವ ವಿಷಯದಲ್ಲಿ ಶಂಕೆ ಪಟ್ಟಿದ್ದೇನೆ. ಅದನ್ನು ಬಿಟ್ಟರೆ ಮಿಕ್ಕಿದ್ದೆಲ್ಲ ಅರ್ಥವಾಗುತ್ತದೆ. ಶ್ರೀ ಸಿದ್ಧವೀರಪ್ಪನವರು ಕೊಟ್ಟಿರುವ ತಿದ್ದುಪಡಿ ಹೀಗಿದೆ. ಕನ್ನಡ ಪ್ರದೇಶಗಳಾದ ತಾಳವಾಡಿ ಫಿರ್ಕಾ, ಹೊಸೂರು ಮತ್ತು ಮಡಕಸಿರಾ ಎಂದು ಹೇಳಿದ್ದಾರೆ. ಅನಂತರ ಎಟ್ಸೆಟ್ರಾ ಎಂದು ಬೇರೆ ಸೇರಿಸುತ್ತಾರೆ.

ದಕ್ಷಿಣ ವಲಯ ಸಮಿತಿಯ ಸಭೆಯಲ್ಲಿ ಒಂದು ಸಲ ಗೋವಿಂದ ವಲ್ಲಭ ಪಂತ್ ಅವರು ಹೇಳಿದರು, ಯಾವುದಾದರು ಹೊಂದಾಣಿಕೆ ಮಾಡಬೇಕು ಎಂದರೆ ಅಲ್ಲಿನ ಮುಖ್ಯಮಂತ್ರಿಗಳು ಸೇರಿ ಒಂದು ತಾಲ್ಲೂಕಿನಲ್ಲಿ ಒಂದು ಹೋಬಳಿ, ಅಥವಾ ಫಿರ್ಕಾ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹೋಗುವುದಾದರೆ ಅಮಿಕಬಲ್ ಅಗಿ ಮಾಡಿಕೊಳ್ಳಬೇಕು ಎಂದು ಹೇಳಿದರು. ಆದರೆ ಕಳೆದ ಎಂಟು ವರ್ಷಗಳಿಂದ ನಾನು ನೋಡುತ್ತಿದ್ದೇನೆ. ದಕ್ಷಿಣ ವಲಯದು ಜೋನಲ್ ಕೌನ್ಸಿಲ್ಲು ಸೇರುತ್ತ ಇಲ್ಲ. ಜಗಳ ತಂದು ಹಾಕುವುದಷ್ಟೇ ಕೆಲಸವಾಗಿದೆ. ಅಧಿಕಾರಿಗಳು ಕುಳಿತುಕೊಂಡು ಚರ್ಚೆಮಾಡಿದ್ದು ಅಷ್ಟೆ ಆಗಿದೆ. ಆದರೆ ಇಂದು ಮಹಾರಾಷ್ಟ್ರದಲ್ಲಿ ಶಿವಸೇನೆ ಪೆಡಂಭೂತವಾಗಿ ಕೂತುಬಿಟ್ಟಿದೆ. ಆದವಾನಿ, ರಾಯದುರ್ಗ ನಮ್ಮ ಕೈಬಿಟ್ಟಿದ್ದರೂ ಕೂಡ ನಾವು ಹಾಗೇ ಇದ್ದೇವೆ. ಅದವಾನಿ, ರಾಯದುರ್ಗ ಕೈ ಬಿಟ್ಟುಹೋಯಿತು. ಮಡಕಶಿರಾ ನಕಾಶದಲ್ಲಿ ಮಾತ್ರ ಇದೆ. ಕೊಯಿಮತ್ತೂರಿನಲ್ಲಿ ಬಹಳ ಜನ ಕನ್ನಡ ಮಾತನಾಡುವ ಜನ ಇದ್ದಾರೆ, ಕೊಯಿಮತ್ತೂರು ಕೂಡ ಬೇಕು ಎಂದು ಕೇಳಿದ್ದೆವು. ಆದರೆ ಅದು ನಮಗೆ ಬರಲಿಲ್ಲ. ಮುಖ್ಯಮಂತ್ರಿಗಳಾಗಿ ನಿಜಲಿಂಗಪ್ಪನವರು ಇರಲಿಲ್ಲವೇ ? ಸಿದ್ಧವೀರಪ್ಪನವರೂ ಇದ್ದರು, ಹನುಮಂತಯ್ಯನವರೂ ಇದ್ದರು. ಆದರೆ ಅವರು ಕರ್ನಾಟಕ ಆಗುತ್ತದೆ ಎಂದು ಹೇಳಿದ್ದಾಗ್ಗೆ ಅವರು ಏನೇನು ಮಾಡಿದರು ಅದನ್ನು ಪೂರ್ತಿಯಾಗಿ ಹೇಳುವುದಿಲ್ಲ. ಏನೋ ಗಂಡಾಗುಂಡಿಯಾಗಿ ಕರ್ನಾಟಕ ಆಗಬೇಕು ಕರ್ನಾಟಕ ಮಾಡಬೇಕು ಎಂದು ಹೇಳಿದರು. ಶ್ರೀ ದೊಡ್ಡಮೇಟಿಯವರೂ ಕೂಡ ಮಾತನಾಡುವಾಗ ಸಹ ಅವರಿಗೆ ನಾನು ಒಂದು ಮಾತು ಹೇಳಿದ್ದೇನೆ. ಆದರೆ ಈಗ ಈ ಅಪಸ್ವರ ಬಂದಿರುವುದು ದುರದೃಷ್ಟಕರ. ನಾವು ಕನ್ನಡಿಗರು ಗಡಿ ವಿಸ್ತರಿಸುವುದಕ್ಕೆ ಹೋಗುವುದಿಲ್ಲ. ರಾಜ್ಯವನ್ನು ಪುನಃ ನಿರ್ಮಾಣ ಮಾಡಬೇಕು ಎಂದು ಹೇಳುವುದು ಸರಿಯಲ್ಲ. ಆದುದರಿಂದ ಶ್ರೀಮಾನ್ ಸಿದ್ಧವೀರಪ್ಪನವರ ನಿರ್ಣಯ ಮತ್ತು ನನ್ನ ನಿರ್ಣಯದಲ್ಲಿ ಭೂಮಿ ಆಕಾಶದಷ್ಟು ಅಂತರ ಇದೆ. ಈ ರೀತಿ ಈ ಪ್ರಶ್ನೆ ಬಗೆಹರಿಸಲು ಕಷ್ಟವಾಗುತ್ತದೆ. ನಾವು ಮುಂದಕ್ಕೆ ಇಟ್ಟಿರುವ ಹಜ್ಜೆ ಹಿಂದೆ ತೆಗೆದುಕೊಂಡರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಡಬೇಕೆಂದಿರುವ ಕಾಳಿ ನದಿ ಯೋಜನೆ ಮಾಡಲು ಸಾಧ್ಯವೇ ? ಅಲ್ಲದೆ ಇಂಥ ದೊಡ್ಡ ದೊಡ್ಡ ಯೋಜನೆ ಮಾಡಲು ಸಾಧ್ಯವಾಗುತ್ತದೆಯೇ? ಎರಡು ಕರ್ನಾಟಕ ಆಗಬೇಕು ಎಂದು ಹೇಳುವುದು ಸಹ ತಪ್ಪು ಅಭಿಪ್ರಾಯ. ಶ್ರೀಮಾನ್ ಸಿದ್ಧವೀರಪ್ಪನವರು ಶ್ರೀಮಾನ್ ಚನ್ನಬಸಪ್ಪನವರು ಒಳ್ಳೇ ಭಾಷಣ ಮಾಡಿದರು, ಅವರ ಬಗ್ಗೆ ಹೆಚ್ಚು ಹೇಳಲು ನಾನು ಹೋಗುವುದಿಲ್ಲ. ಆದರೆ ಅವರು ಮಂತ್ರಿಗಳಾಗಿದ್ದರು, ಅವರು ಮಂತ್ರಿಗಳಾಗಿ ಬಳ್ಳಾರಿಗೆ ಬಂದಾಗ್ಗೆ ಸಭೆಯಲ್ಲಿ ಏನು ಹೇಳಿದರು ನನಗೆ ಗೊತ್ತಿದೆ. ನಾನೂ ಸಹ ಆ ಸಭೆಯಲ್ಲಿ ಇದ್ದೆ. ಮಂತ್ರಿಗಳಾಗಿದ್ದ ಚನ್ನಬಸಪ್ಪನವರನ್ನು ಬಹು ಕಷ್ಟದಿಂದ ಮಂತ್ರಿಮಂಡಳದಿಂದ ಹೊರಗೆ ಇಡಬೇಕಾಯಿತು. ನನಗೆ ತಿಳಿದಮಟ್ಟಿಗೆ ಗೊತ್ತಿರುವ ವಿಷಯ ಹೇಳಿದೆ. ಅವರು ಕೃಷ್ಣಾ ಕಾವೇರಿ ನೀರಿನ ವಿವಾದದಲ್ಲಿ ತೆಗೆದುಕೊಂಡ ನಿಲುವನ್ನು ಬೇರೆ ವಿಷಯದಲ್ಲಿ ತೆಗೆದುಕೊಳ್ಳಲಿಲ್ಲ. ಒಂದು ರೀತಿ ಕಾವೇರಿ ನೀರು ಹೇಗೆ ರಕ್ಷಣೆ ಮಾಡಬೇಕು ಎನ್ನುವುದಕ್ಕೆ ಒಂದು ನಿಲುವನ್ನು ಅವರು ತೆಗೆದುಕೊಂಡಿದ್ದಾರೆ. ದೇಶದ ಹಿತರಕ್ಷಣೆ ಮಾಡುವುದಕ್ಕೆ ಹೋರಾಟ ಮಾಡಿದ್ದಾರೆ, ನಾನೂ ಒಬ್ಬ ಪತ್ರಿಕೋದ್ಯಮಿಯೇ ನಾನೂ ಕಾರ್ಟೂನುಗಳನ್ನೂ ಬರೆಯುತ್ತೇನೆ. ನಾನೂ ಹಿಂದೆ ಒಂದು ಪತ್ರಿಕೆಯನ್ನೂ ಕೂಡ ಹೊರಡಿಸುತ್ತಿದ್ದೆ. ಹಿಂದೆ ಮೊರಾರ್ಜಿ ದೇಸಾಯಿ ಅವರು ಕೇಂದ್ರದ ಆರ್ಥಿಕ ಸಚಿವರಾಗಿದ್ದಾಗ ಅವರು ಪಾರ್ಲಿಯಮೆಂಟಿನಲ್ಲಿ ಒಂದಾವರ್ತಿ ಆಯವ್ಯಯಪಟ್ಟಿಯನ್ನು ಮಂಡಿಸುತ್ತಿದ್ದ ಕಾಲಕ್ಕೆ ಅವರ ಒಂದು ಆರ್ಥಿಕ ಧೋರಣೆಯ ಬಗ್ಗೆ ನನಗೆ ಮನಸ್ಸಿನಲ್ಲಿ ಏನು ಅನಿಸಿತ್ತು ಅದಕ್ಕನುಗುಣವಾಗಿ ಅವರು ತಲೆಯಮೇಲೆ ಒಂಭತ್ತು ಮಡಿಕೆಗಳನ್ನು ಹೊತ್ತುಕೊಂಡು ನವರಂಗ್ ಭರತನಾಟ್ಯವನ್ನು ಆಡುತ್ತಿದ್ದಂತೆ ಇದ್ದ ಕಾಲದಲ್ಲಿ ಅವರು ಒಂದು ನಾಟ್ಯಭಂಗಿಯಲ್ಲಿ ಕಾಲನ್ನು ಎತ್ತಿದ್ದಾಗ ತಲೆಯಮೇಲೆ ಹೊತ್ತಿದ್ದ ಮಡಿಕೆಗಳೆಲ್ಲಾ ತಳಕೆಳಗಾಗಿ ಬರುತ್ತಿದ್ದವು ಅನ್ನತಕ್ಕ ರೀತಿಯಲ್ಲಿ ಒಂದು ಕಾರ್ಟೂನನ್ನು ಕೂಡ ಬರೆದಿದ್ದೆ. ಅದರಲ್ಲಿ ಅವರ ಹೆಸರನ್ನೆ ಸಹಾ ಬರೆದಿದ್ದೆ, ಇಲ್ಲದಿದ್ದರೆ ಅದರ ಬಗ್ಗೆ ಯಾರಿಗೂ ಅದು ಅರ್ಥವಾಗುತ್ತಿರಲಿಲ್ಲ, ಅದಾಗ್ಯೂ ಅದರಲ್ಲಿ ಯಾರೇನೂ ತಪ್ಪನ್ನು ಹುಡುಕಲಿಲ್ಲ, ನನ್ನ ಮೇಲೆ ಯಾವ ಅಪಾದನೆಯೂ ಬರಲಿಲ್ಲ, ಆದರೆ ಹಳೆಕಾಲದ

ಗಾದೆಯಿದೆ—ಗಾಜಿನ ಮನೆಯಲ್ಲಿ ವಾಸಮಾಡತಕ್ಕವರು ಮತ್ತೊಬ್ಬರ ಮನೆಯಮೇಲೆ ಕಲ್ಲನ್ನೆಸೆಯಬಾರದು ಎಂದು. ಈ ದಿವಸ ಇಂಡಿಕೇಟಿನವರ ವಾದವಿವಾದಗಳೇ ಅವರ ಭವಿಷ್ಯವನ್ನು ನಿರ್ಣಯಮಾಡುತ್ತಿವೆ? ಹಾಗಿರುವಾಗ ಅವರು ಒಂದು ವೇಳೆ ದೆಹಲಿಯಿಂದ ದುಡ್ಡನ್ನು ತಂದು ಇಲ್ಲಿರತಕ್ಕ ಜನರಿಗೆ, ಕೊಟ್ಟು ನೀವೆಲ್ಲರೂ ನಮ್ಮ ಪಕ್ಷಕ್ಕೆ ಸೇರಿ ಎಂದರೆ ಯಾರೂ ಸೇರುವುದಿಲ್ಲ. ಇಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಮಾತನಾಡುತ್ತಿದ್ದಾಗ ತಡೆಯಲಾರದೆ ಸಭೆಯಿಂದ 3—4 ಸಾರ್ತಿ ಎದ್ದು ಹೊರಗಡೆಗೆ ಹೋದೆ,

ಇನ್ನು ಶ್ರೀ ಆರ್. ದಯಾನಂದ ಸಾಗರರ ವಿಚಾರಕ್ಕೆ ಬಂದರೆ—ಅವರೂ ನಾನೂ ಇಬ್ಬರೂ ಒಟ್ಟಿಗೆ ಸುಮಾರು 14 ತಿಂಗಳುಗಳ ಕಾಲ ಜೊತೆಯಲ್ಲಿ ಜಾಯಿಂಟ್ ಸೆಕ್ರಟರಿಗಳಾಗಿ ಕೆಲಸಮಾಡಿದ್ದೇವೆ. ಅವರು ಸಿಟ್ಟು ಬಂದರೆ ಕುರ್ಚಿಯನ್ನೇ ಎತ್ತಿ ತಲೆಗೆ ಹೊಡೆದು ಬಿಡುತ್ತಾರೆ; ಅವರದು ಅಷ್ಟು ಕೋಪ. ಅವರ ವಿಷಯ ಹೀಗಿದ್ದು ಕಾರಣ ನಾನು ಇಲ್ಲಿ ಕುಳಿತಿದ್ದಾಗ ನನಗೆ ಬಹಳ ಘಾಬರಿಯೂ ಆಗಿತ್ತು. ಸಾಲದ್ದಕ್ಕೆ ಅವರು ಬ್ಯಾರಿಸ್ಟರ್; ಅನೇಕ ಊರುಗಳನ್ನು ತಿರುಗಿದ್ದಾರೆ; ಚೆನ್ನಾಗಿ ದುಡ್ಡನ್ನೂ ಕೂಡ ಮಾಡಿದ್ದಾರೆ. ಅಂತೂ ಅವರು ನನಗಿಂತ ಎಲ್ಲಾ ವಿಚಾರಗಳಲ್ಲೂ—ವಿದ್ಯೆ ಬುದ್ಧಿ ಧೃಡಕಾಯತ್ವ ತಾರುಣ್ಯ ಮತ್ತು ವಯಸ್ಸುಗಳು ಈ ಎಲ್ಲಾ ವಿಚಾರಗಳಲ್ಲೂ ಚೆನ್ನಾಗಿದ್ದಾರೆ. ಅವರು ಮನಸ್ಸು ಮಾಡಿದರೆ ಕರ್ನಾಟಕ ಆಗಬೇಕು ಅಂತಲೂ ಮಾತನಾಡುತ್ತಾರೆ ಅದು ಬೇಡ ಎನ್ನುವುದಾದರೆ ಅದಕ್ಕೂ ಅವರು ಮಾತನಾಡುತ್ತಾರೆ. ನಮಗೆ ಸ್ವಾತಂತ್ರ್ಯ ಬರತಕ್ಕ ಕಾಲಕ್ಕೆ ಅದು ಬೇಡ ಎಂದು ವಾದ ಮಾಡಿದ್ದರೂ ಅದು ಬಂದನಂತರ ಬರಬೇಕಾಗಿತ್ತೆಂತಲೂ ಭಾಷಣಮಾಡುತ್ತಾರೆ. ಅಂತೂ ಅವರು ಯಾವ ವಿಚಾರ ಕೊಟ್ಟರೂ ಆ ಬಗ್ಗೆ ಎರಡೂ ವಿಧಗಳಲ್ಲಿ ವಾದ ಮಾಡತಕ್ಕ ಶಕ್ತಿ ಅರವಲ್ಲಿ ಇದೆ. ಅವರು ವಾದದಲ್ಲಿ ಮುಂದಿಟ್ಟ ಹೆಜ್ಜೆಯನ್ನು ಎಂದೂ ಹಿಂದಕ್ಕೆ ತೆಗೆಯತಕ್ಕವರಲ್ಲ.

"I am extending my helping hand and nobody grasped it. What can I do ?"

ಅವರು ಹೀಗೆ ಇದೇ ಸಭೆಯಲ್ಲಿ ಕುಳಿತು ಮಾತನಾಡಲಿಲ್ಲವೇನು ? ಆಗ ನೀವುಗಳು ಯಾರೂ ಏಕೆ ಅವರು ಕೊಟ್ಟ ಆ ಹೆಲ್ಪಿಂಗ್ ಹ್ಯಾಂಡನ್ನು ಹಿಡಿದುಕೊಳ್ಳಲಿಲ್ಲ ? ಆದರೆ ಈ ದಿವಸ ಕೇಂದ್ರ ಸರ್ಕಾರ ಒಂದು ದೊಡ್ಡ ಇಕ್ಕಟ್ಟಿಗೆ ಸಿಕ್ಕಿ ಪೇಚಿನಲ್ಲಿ ಬಿದ್ದಿರುವಾಗ ಇನ್ನು ಬೇರೆಯೇನೂ ಗತಿಯೇ ಇಲ್ಲ ಅನ್ನುವಾಗ ಮಿಶ್ರ ಸರ್ಕಾರಗಳು ಆಗಲೇಬೇಕು. ಈ ದಿವಸ ಬಿಹಾರ್ ಮತ್ತು ಉತ್ತರ ಪ್ರದೇಶಗಳಲ್ಲಿ ಒಂದು ಪಾರ್ಟಿಯಲ್ಲಿದ್ದವರು ನಾಳೆ ಆ ಪಾರ್ಟಿಯಲ್ಲಿ ಕಾಣುವುದಿಲ್ಲ, ಬೇರೊಂದು ಪಾರ್ಟಿಯಲ್ಲಿ ಇರುತ್ತಾರೆ. ಹೀಗೆ ಈ ರಾಜಕೀಯದಲ್ಲಿ ಒಂದು ಹೊಸ ಚಳವಳಿ ಉಂಟಾಗಿದೆ. ಕೊನೆಗೆ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಇದು ಒಂದು ಕೊನೆ ಮುಟ್ಟುವುದರೊಳಗೆ ದೇಶದಲ್ಲಿ ಒಂದು ಕ್ರಾಂತಿಯುದ್ಧ ಉಂಟಾದರೂ ಆಗಬಹುದು. ಅಂಥ ಒಂದು ಯುದ್ಧಕ್ಕೆ ಈಗಾಗಲೆ ಅನೇಕ ಕಡೆಗಳಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಲೂ ಇರಬಹುದು. ಅಂತೂ ನಾವು ಇಂದು ಇಂಥ ಒಂದು ಅರಾಜಕತೆಯ ಕಾಲದಲ್ಲಿದ್ದೇವೆ. ಇಂಥ ಸನ್ನಿವೇಶದಲ್ಲಿ ನಮ್ಮ ಸ್ನೇಹಿತರು ಇಲ್ಲಿ ಹೇಳಿರತಕ್ಕ ವಾದ ಅಥವಾ ಅವರ ನಿಲುವು ಸರಿಯಾದ್ದಲ್ಲ ಎಂದು ಅಷ್ಟೇ ಹೇಳುತ್ತೇನೆ. ಪ್ರತಿಯೊಬ್ಬರ ಬಗ್ಗೆಯೂ ಹೇಳಬೇಕೆಂದರೆ ನನಗೆ ಬೇಕಾದಷ್ಟು ಗೊತ್ತಿದೆ. ಆದರೆ ನನಗೆ ನಿಂತು ಮಾತನಾಡುವುದಕ್ಕೆ ಅಷ್ಟು ಶಕ್ತಿಯಿಲ್ಲ. ಶ್ರೀ ಬೊಮ್ಮಯ್ಯ ಅವರೇನೋ ತಮ್ಮ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಏಕೆಂದರೆ ಅವರ ಮತ್ತು ನನ್ನ ನಿರ್ಣಯಗಳೆರಡೂ ಸ್ವಲ್ಪ ಹೆಚ್ಚುಕಡಿಮೆ ಒಂದೇ ಆಗಿವೆ. ಆದರೆ ನಾವೇನು ಈ ಸರ್ಕಾರದವರ ದಳ್ಳಾಳಿಯಾಗಿ ಆಗಲಿ ಅಥವಾ ಸಿಂಡಿಕೇಟಿನವರ ದಳ್ಳಾಳಿಯಾಗಿ ಆಗಲಿ ಕೆಲಸಮಾಡುತಕ್ಕವನಲ್ಲ. ಹಿಂದೆ ಅಲ್ಲೆಲ್ಲೋ ಒಂದಾವರ್ತಿ ಮಧುಲಿಮೆ ಅವರಿಗೆ "ಸಿಂಡಿಕೇಟ್ ದಲಾಲ್ ಹೈ ತುಂ ಚಲೇಜಾವ್" ಎಂದು ಹೇಳಿದ್ದರಂತೆ ಆದ್ದರಿಂದ ಯಾವ ಯಾವ ಕಾಲಕ್ಕೆ ಯಾರ್ಯಾರಿಗೆ ಏನೇನು ಹೆಸರುಗಳು ಬರುತ್ತವೆಯೋ ಬರಲಿ, ನೋಡಿಕೊಳ್ಳೋಣ. ನಾನು ದಳ್ಳಾಳಿ ಕೆಲಸ ಮಾಡಲಿ ಮಾಡದಿರಲಿ, ಅಂತೂ ಈ ನಿರ್ಣಯಗಳೆರಡೂ ಒಂದೇ ರೀತಿಯಲ್ಲಿವೆ.

ಇನ್ನು ಶ್ರೀಕಂಠಯ್ಯನವರ ವಿಚಾರಕ್ಕೆ ಬಂದರೆ—ಅವರು ಹೇಳುತ್ತಾರೆ : ದೇಶದಲ್ಲಿ ಜನರ ದುರಿನಲ್ಲಿ ನಮ್ಮೆಲ್ಲರದೂ ಬಹಳ ನಗೆಪಾಟಲಾಗುತ್ತಿದೆ. ಇದರಲ್ಲಿ ಏನಾದರೂ ಮಾಡಿ ಒಂದು ರಾಜೀ ಮಾಡುವುದಕ್ಕಾಗುವುದಿಲ್ಲವೆ, ಎಂದು ಅವರು ಹೇಳುತ್ತಿದಾರೆ. ಅವರು ಒಂದು ಪ್ರಪೋಜಲನ್ನು ಬರೆಯುವುದು ಅದನ್ನ ಹರಿದು ಮತ್ತೊಂದು ಪ್ರಪೋಜಲ್ಲನ್ನು ತಯಾರಿಸುವುದು ಹೀಗೆ ಅವರು 10—15 ಪ್ರಪೋಜಲ್‌ಗಳನ್ನು ಹರಿದು ಮತ್ತೆ ಬರೆದು ಅವರು ಈ ದಿವಸ ಪ್ರೊಫೆಸರ್ ಶ್ರೀಕಂಠಯ್ಯನವರೂ ಅಲ್ಲ ಡಾಕ್ಟರ್ ಶ್ರೀಕಂಠಯ್ಯನವರೂ ಅಲ್ಲ, ಅವರು ಈ

(ಶ್ರೀ ಎಸ್. ಗೋಪಾಲಗೌಡ)

ದಿವಸ ರಾಜೀ ಶ್ರೀಕಂಠಯ್ಯನವರಾಗಿದ್ದಾರೆ ; ಅಥವಾ ಆಗಿಬಿಟ್ಟಿದ್ದಾರೆ. ಅವರಾದರೂ ಏನು ಹೇಳುತ್ತಿದ್ದಾರೆ—ನಾವು ಇಲ್ಲಿ ನಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕು ಎಂದು. ಅದೇನೊ ಅವರು ಹೇಳತಕ್ಕದ್ದು ಒಳ್ಳೆಯದೇ. ಇನ್ನು ಎರಡನೇಯದಾಗಿ ಇವರನ್ನು ದೆಹಲಿಗೆ ಹೋಗಿ ಅಲ್ಲಿರತಕ್ಕವರನ್ನು ಅಪ್ರೈಜ್ ಮಾಡಬೇಕು, ಅದನ್ನು ಮಾಡದಿದ್ದರೆ ಮುಂದೆ ಆಗತಕ್ಕ ಅನಾಹುತ ಗಳಿಗೆಲ್ಲಾ ನೀವೆ ಕಾರಣರಾಗುತ್ತೀರಿ ಎಂದು ಕೇಂದ್ರದಲ್ಲಿ ಅಧಿಕಾರದಲ್ಲಿರತಕ್ಕವರಿಗೆ ಎಚ್ಚರಪಡಿಸ ಬೇಕು ಮತ್ತು ಮುಂದೆ ಆಗತಕ್ಕ ಅನಾಹುತಗಳೇನಿವೆ ಅವುಗಳನ್ನು ಪುನಃ ಸರಿಗಟ್ಟಿಗೊಳ್ಳುವುದು ಬಹಳ ಕಷ್ಟವಾಗುತ್ತದೆಂಬುದನ್ನು ಅವರಿಗೆ ತಿಳಿಸಬೇಕು ಮತ್ತು ಮೂರನೆಯದಾಗಿ ಹಿಂದೆ ಇದ್ದ ಎಸ್. ಆರ್. ಆಕ್ಟನ್ನು ಅದು ಇದ್ದಹಾಗೆ ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಕೇಂದ್ರ ಸರ್ಕಾರ ದವರು ಹಾಗೇನಾದರೂ ನಮ್ಮ ರಾಜ್ಯಕ್ಕೆ ಒಂದು ಭರವಸೆಯನ್ನು ಕೊಡುವುದಾದರೆ ಮತ್ತು ಸರ್ವರಿಗೂ ಹಿಡಿಸುವಂಥ ಒಂದು ಸರ್ವಸಮ್ಮತವಾದ ಸೂತ್ರವನ್ನು ಕಂಡುಹಿಡಿಯುವ ತನಕ ಮತ್ತು ಅದರ ಬಗ್ಗೆ ಒಂಧು ಉಚ್ಚ ಹೈಪವರ್ ಕಮಿಷನ್ ನೇಮಕ ಮಾಡುವುದು ಮತ್ತು ಅದರ ತೀರ್ಮಾನ ಬರುವತನಕ ನೀವು ಸುಮ್ಮನಿರಬೇಕು ಅಂದರೆ ಆಗೇನು ಮಾಡಬೇಕು ಅನ್ನುವುದನ್ನೆಲ್ಲಾ ಶ್ರೀ ಸಿದ್ಧವೀರಪ್ಪನವರಿಗೆ ಹೇಳಿದರೂ ಅವರೂ ಒಪ್ಪಲಿಲ್ಲ. ಆವರೆ ಒಂದು ವಿಷಯ. ಇಲ್ಲಿ ನಾವೆಲ್ಲರೂ ಸಹೋದ್ಯೋಗಿಗಳು ಮೊದಲು. ಅಂತರ ತಾವು ಅಧ್ಯಕ್ಷರು. ಇನ್ನೊಬ್ಬರು ಸಚಿವರು ಮತ್ತೊಬ್ಬರು ಸಾಮಾನ್ಯ ಸದಸ್ಯರು ಹೀಗೆ ಭಾಗವಾಗಿದ್ದೇವೆ. ಸಾಮಾನ್ಯವಾಗಿ ನಾವೆಲ್ಲಾ ಎಂ.ಎಲ್.ಎ. ಗಳು, ಒಂದೊಂದು ಲಕ್ಷದ ಜನರ ಪ್ರತಿನಿಧಿಯಾಗಿ ಬಂದಂಥ ಜವಾಬ್ದಾರಿಯಾದಂಥ ಜನ ನಾವು. ಅಂದರೆ 2½ ಕೋಟಿ ಜನರ ಪ್ರತಿನಿಧಿಗಳಾಗಿ ಇಲ್ಲಿ ಕೂತಿರತಕ್ಕ ಜನ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಶ್ರೀಕಂಠಯ್ಯನವರು ಈ ರಾಜಿ ನಿರ್ಣಯ ವನ್ನು ತೆಗೆದುಕೊಂಡು ಹೋದಾಗ ಅವನ್ನು ಪರಿಶೀಲನೆಮಾಡಿ ಆಮೇಲೆ ಉತ್ತರ ಬರೆಯುತ್ತೇವೆ ಎಂದು ಹೇಳಿದರು. ಕೊನೆಗೆ ಅದನ್ನು ನಾಯಕರ ಮುಂದೆ ಇಟ್ಟು ಚರ್ಚೆ ಮಾಡಿದಮೇಲೆ ಒಪ್ಪುವುದಕ್ಕಾವುದಿಲ್ಲ ಎಂದು ಹೇಳಿದರು.

1-30 P.M.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದಕ್ಕೆ ಎಲ್ಲರೂ ರುಜು ಹಾಕಿದ್ದಾರೆಯೇ ?

ಶ್ರೀ ಎಸ್. ಗೋಪಾಲಗೌಡ.—ಎಲ್ಲರೂ ರುಜು ಹಾಕಿಕೊಡುತ್ತಾರೆಯೇ? ಒಬ್ಬರು ರುಜು ಹಾಕಿಕೊಡುತ್ತಾರೆ. ನಿನ್ನೆ ದಿವಸ ಅದನ್ನು ರೆಜೆಕ್ಟ್ ಮಾಡಿದರು. ಆದರೂ ನನ್ನ ಪ್ರಯತ್ನವನ್ನು ಬಿಡಲಿಲ್ಲ. ಬೆಳಿಗ್ಗೆ ಪುನಃ ಹೋಗಿ ಹೇಳಿದೆ. ಈಗ ನಿರ್ಣಯ ತಂದಿರುವುದರಲ್ಲಿ ನನ್ನ ಹೆಸರು ಇದೆಯೇ ? ಇಲ್ಲ. ಎಲ್ಲಕ್ಕೂ ತೆ. ಹನುಮಂತಪ್ಪ ಎಂತಲೇ ಇದೆ. ನಾನು ಮೊದಲೇ ಹೇಳಿದ ಹಾಗೆ ನಿರ್ಣಯಗಳು ನಿರ್ದಿಷ್ಟವಾಗಿ ಬಂದಿಲ್ಲ.

ಇನ್ನು ಯಾರು ಸಿಂಡಿಕೇಟ್, ಯಾರು ಇಂಡಿಕೇಟ್ ಎಂದು ಗೊತ್ತಾಗುವುದಿಲ್ಲ. ನಮಗೆ ಗೊತ್ತಿರುವ ದೇವೇಗೌಡರಂಥವರನ್ನು ಕೇಳಬೇಕಾಗುತ್ತದೆ. ಅವರು ಯಾವ ಆಸೆಗೆ ಈ ಕಡೆಯಿಂದ ಅಲ್ಲಿಗೆ ಸೇರಿದರೋ ಆ ಕನಸು ಒಡೆದು ಹೋಯಿತು. ಹಾಗೆ ಚಿಕ್ಕೇಗೌಡರ ಕನಸೂ ಒಡೆದು ಹೋಯಿತು. ಆದುದರಿಂದ ಅವರನ್ನು ನಾವು ಯಾವ ಪಾರ್ಟಿಯಲ್ಲಿ ಇದ್ದಾರೆಂದು ಕೇಳಬೇಕಾಗು ತ್ತದೆ. ನಮ್ಮ ಪಾರ್ಟಿಯಲ್ಲೂ ಕೂಡ ಇದೇ ಅವ್ಯವಸ್ಥೆ ಬಂದಿದೆ. ಅದೇ ರೀತಿ ಪಿ.ಎಸ್.ಪಿ. ಯಲ್ಲೂ ಈ ಅವ್ಯವಸ್ಥೆ ಬಂದಿದೆ.

ಶ್ರೀ ವಿ. ಎನ್. ಪಾಟೀಲ್.—ನಮ್ಮ ಪಾರ್ಟಿಯಲ್ಲೂ ಅಂಥ ಅವ್ಯವಸ್ಥೆ ಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ನಿಮ್ಮ ಪಾರ್ಟಿಯಲ್ಲಿ ಆ ರೀತಿ ದುರವಸ್ಥೆ ಬಂದಿಲ್ಲದೇ ಇದ್ದರೆ ಪರವಾಯಿಲ್ಲ. ಹಾಗಾಗುವುದು ಬೇಡ ಎಂದು ಆಶಿಸುತ್ತೇನೆ. ನಾನು ಬಹಳ ಪುಸ್ತಕಗಳನ್ನು ಓದಿದ್ದೇನೆ. ಎಲ್ಲವನ್ನೂ ಓದಿ ಚೆನ್ನಾಗಿ ತಿಳಿದುಕೊಂಡಿದ್ದೇನೆ. ವಕೀಲರು ಓದುವ ಪುಸ್ತಕ ವನ್ನೂ ಓದಿದ್ದೇನೆ. ಒಟ್ಟಿನಲ್ಲಿ ಹೇಳುವುದಾದರೆ ದುರದೃಷ್ಟವಶಾತ್ ಕಾಂಗ್ರೆಸ್ ಒಡೆದಿರುವುದ ರಿಂದ ಕಾಂಗ್ರೆಸ್‌ನಲ್ಲೇ ಎರಡು ಪಂಗಡವಾಗಿದೆ. ಇದು ಕೆಲವರಿಗೆ ಅದೃಷ್ಟಕರ, ಇನ್ನು ಕೆಲವರಿಗೆ ದುರದೃಷ್ಟಕರ. ನನ್ನ ಅಭಿಪ್ರಾಯ ಮೊದಲೇ ಹೇಳಿದಹಾಗೆ ಶ್ರೀಮಾನ್ ಸಿದ್ಧವೀರಪ್ಪನವರನ್ನು ಈ ನಿರ್ಣಯವನ್ನು ಮೂವ್ ಮಾಡಿ ಎಂದು ಹೇಳಿದೆ. ಅವರು ಮಾಡಲಿಲ್ಲ. ಈ ದಾಯಾದಿ ಜಗಳ ದಲ್ಲಿ ಏನೂ ಹೇಳುವುದಕ್ಕಾಗುವುದಿಲ್ಲ. ಅವರು ವಿರೋಧಪಕ್ಷದಲ್ಲಿ ಕೂತುಕೊಳ್ಳುವ ತನಕವೂ ಅವರಿಗೆ

ಸಂಪೂರ್ಣ ಸಹಕಾರ ನೀಡುತ್ತೇನೆ. ಅದನ್ನು ಮೊದಲೇ ಹೇಳಿದ್ದೇನೆ, ಈಗಲೂ ಹೇಳುತ್ತೇನೆ. ಶಕ್ತಿ ಬಂದಾಗ ಯಾವ ದಾಕ್ಷಿಣ್ಯವೂ ಇಲ್ಲದೆ ಸರ್ಕಾರವನ್ನು ಉರುಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರು ನಮ್ಮ ಕಡೆಯ ಪಾರ್ಟಿಯಲ್ಲಿರುವವರನ್ನೆ ಪಕ್ಷಾಂತರ ಮಾಡುವುದನ್ನು ನೋಡುತ್ತಿದ್ದೇವೆ. ಅಧಿಕಾರದಲ್ಲಿರುವ ಸಂಸ್ಥಾ ಕಾಂಗ್ರೆಸ್‌ನಿಂದ ಸದಸ್ಯರನ್ನು ತಮ್ಮ ಕಡೆಗೆ ಎಳೆದುಕೊಳ್ಳುವುದಕ್ಕಾಗದೆ ವಿರೋಧ ಪಕ್ಷದವರಿಂದಲೇ ಎಳೆದುಕೊಳ್ಳುವ ಪ್ರಯತ್ನ ನಡೆಸುತ್ತಿದ್ದಾರೆ. ಈ ಕಡೆ ಶಿವಪ್ಪನವರ ಹತ್ತಿರ ಕೂತವರನ್ನು ಎಳೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಪಿ. ಎನ್. ಪಾಟೀಲ್.—ಅವರಲ್ಲಿರುವ ಆಕರ್ಷಣಾ ಶಕ್ತಿ ತಮ್ಮ ಕಡೆಯಿಂದಲೇ ಎಳೆದುಕೊಂಡು ಹೋಗುವ ಹವ್ಯಾಸ ಬಂದಿದೆ.

ಶ್ರೀ ಎಸ್. ಗೋಪಾಲಗೌಡ.—ರಾಜಕೀಯದಲ್ಲಿ ಈವೊತ್ತಿನ ದಿವಸ ಭ್ರಷ್ಟಾಚಾರ ಹೆಚ್ಚಿದೆ. ಹೆಚ್ಚುಕಡಿಮೆ ಇದು ಎಲ್ಲಾ ಕಡೆಯೂ ಚಪ್ಪರದಲ್ಲಿ ಬಳ್ಳಿ ಹಬ್ಬಿದಂತೆ ಹಬ್ಬಿದೆ. ಈ ದುಷ್ಕೃತ್ಯ ಎಲ್ಲ ಕಡೆಯೂ ನಡೆದಿದೆ. ಅದರಿಂದ ಅಷ್ಟು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಈಗ ಸಿಂಡಿಕೇಟ್, ಇಂಡಿಕೇಟ್ ಎಂದು ಒಬ್ಬರನೊಬ್ಬರು ಅಬ್ಯೂಸ್ ಮಾಡಿಕೊಳ್ಳುತ್ತಾರೆ. 22 ವರ್ಷದಿಂದಲೂ ಈರೀತಿ ಕಾರ್ಯಭಾರ ನಡೆಯುತ್ತಿದೆ. ನಾವು ತಾತ್ವಿಕವಾಗಿ ಎಲ್ಲರನ್ನೂ ಬಯ್ಯುತ್ತೇವೆ. ಈವೊತ್ತು ಬೊಮ್ಮಾಯಿರವರು ಯಾವ ಉದ್ದೇಶದಿಂದ ನಿರ್ಣಯ ತಂದಿದ್ದಾರೆ ಎನ್ನುವುದನ್ನೂ ಕೇಳಿದ್ದೇವೆ. ಶ್ರೀಮಾನ್ ನಂದಿಹಾಳಿಯವರ ನಿರ್ಣಯವನ್ನು ಯಾವ ಉದ್ದೇಶದಿಂದ ತಂದಿದ್ದಾರೆ ಎನ್ನುವುದನ್ನೂ ಕೇಳಿದ್ದೇವೆ. ಒಟ್ಟಿನಲ್ಲಿ ನಾನು ಹೇಳುವುದಾದರೆ ಈವೊತ್ತಿನ ಸನ್ನಿವೇಶದಲ್ಲಿ ಯಾರೇ ಆಡಳಿತ ಮಾಡುತ್ತಾ ಇರಲಿ, ಯಾರೇ ವಿರೋಧ ಪಕ್ಷದಲ್ಲಿರಲಿ, ಅವರವರ ಕರ್ತವ್ಯ ಏನೆಂದರೆ ರಾಜ್ಯದ ಆಡಳಿತದ ಮತ್ತು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಇಂತಹ ಜಗಳವನ್ನು ಪ್ರೋತ್ಸಾಹಿಸದೇ ಇರತಕ್ಕಂಥಾದ್ದು ಮೊದಲನೆಯದು. ಮತ್ತು ರಾಷ್ಟ್ರದಲ್ಲಿ ಈ ಅನಾಹುತದಿಂದ ರಕ್ತಪಾತ ಆಗುವುದನ್ನು ತಪ್ಪಿಸಬೇಕು. ಬಹಳ ಜನರು ಮೊಸಳೆ ಕಣ್ಣೀರು ಇಡುವಂತೆ ಮಾಡುತ್ತಿದ್ದಾರೆ. ಇಲ್ಲಿ ಹೇಳುವುದು ಒಂದು ಮಾಡುವುದು ಒಂದು. ಈ ನಿರ್ಣಯ ಎರಡು ದಿವಸದಲ್ಲೇ ಮುಗಿಯುತ್ತದೆ ಎಂದು ತಿಳಿದಿದ್ದೆವು. ಅದು ಎರಡು ದಿವಸ ಇದ್ದುದು 5 ದಿವಸವಾಯಿತು. ಇದು ಯಾರ ದುರಾದೃಷ್ಟವೋ. ನಾನು ಇದರಲ್ಲಿ ಭಾಗವಹಿಸಬಾರದಾಗಿತ್ತು. ನಾನು ಈ ನಿರ್ಣಯವನ್ನು ಮಂಡಿಸಬಾರದಾಗಿತ್ತು. ನಾನು ಆಸ್ಪತ್ರೆಯಲ್ಲಿಯೇ ಸೇರಿಕೊಂಡಿರಬಹುದಾಗಿತ್ತು. ಈ ನಿರ್ಣಯವನ್ನು ಮಂಡಿಸಿದ್ದರಿಂದ ನಾನು ಈ ಮನೆಯಿಂದ ದೂರ ಇರುವುದಕ್ಕೆ ಆಗಲಿಲ್ಲ. ನನ್ನ ಜವಾಬ್ದಾರಿ ಕೆಲಸಗಳು ಬೇರೆ ಬೇರೆ ಇದ್ದರೂ ಕೂಡ ಯಾವ ಕಾಲಕ್ಕೆ ಏನೋ ಎಂಬ ಕಾರಣದಿಂದ ನಾನು ಇಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಮಾನ್ಯ ಸಭೆಯ ಅಮೂಲ್ಯವಾದ ಕಾಲವನ್ನು ಇದಕ್ಕಾಗಿ ಇಷ್ಟು ದಿವಸಗಳವರೆಗೆ ಉಪಯೋಗಿಸಿಕೊಳ್ಳಲಾಗಿದೆ. ಬಡ್ಜೆಟ್‌ಗಿಂತಲೂ ಮುಖ್ಯವಾದ ವಿಷಯವಾಗಿದ್ದರಿಂದ ಇದನ್ನ ಮೊದಲು ತೆಗೆದುಕೊಳ್ಳಬೇಕೆಂದು ಎಲ್ಲರೂ ಒಪ್ಪಿದ್ದರಿಂದ ಇದನ್ನೇ ತೆಗೆದುಕೊಳ್ಳಲಾಯಿತು. ಮಹಾಜನ್ ವರದಿಯ ಬಗ್ಗೆ ಈಗಾಗಲೇ ಈ ಮನೆಯಲ್ಲಿ ಸರ್ವಾನುಮತದಿಂದ ನಿರ್ಣಯ ತೆಗೆದುಕೊಂಡಿದ್ದು ಆಗಿದೆ. ಮಹಾಜನ್ ವರದಿಯಲ್ಲಿರುವುದನ್ನು ಬಿಟ್ಟು ಮತ್ತೆ ಬೇರೆ ಏನನ್ನೂ ಕೂಡ ನಮ್ಮ ಮೇಲೆ ಹೇರಬೇಡಿ ಎಂದು ಕೇಂದ್ರಸರ್ಕಾರಕ್ಕೆ ತಿಳಿಸುವುದಕ್ಕೋಸ್ಕರ ನಾವು ಮತ್ತೊಮ್ಮೆ ಏಕಪಕ್ಷೀಯವಾದ ನಿರ್ಣಯ ಚರ್ಚೆ ಮಾಡುತ್ತಿದ್ದೇವೆ. ಇದನ್ನು ಎಲ್ಲರೂ ಕೂಡ ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಮತ್ತು ಅವಶ್ಯಕ ಕಂಡುಬಂದರೆ ನಮ್ಮ ವಿರೋಧಪಕ್ಷದ ಎಲ್ಲ ಸ್ನೇಹಿತರೂ ಕೂಡ ದೆಹಲಿಗೆ ಹೋಗಿ ಈ ಸಂಬಂಧದಲ್ಲಿ ಸಭೆಯ ಅಭಿಪ್ರಾಯ, ಜನತೆಯ ತೀವ್ರ ಮನೋಭಾವವನ್ನು ಕೇಂದ್ರಸರ್ಕಾರಕ್ಕೆ ಮತ್ತು ಸಂಸತ್ತಿನ ಸದಸ್ಯರುಗಳಿಗೆ ತಿಳಿಸುವುದು ಒಳ್ಳೆಯದು. ಇದು ಇಂಡಿಕೇಟ್ ಮತ್ತು ಸಿಂಡಿಕೇಟ್‌ನ ಪ್ರಶ್ನೆ ಅಲ್ಲ. ಇದು ಇಡೀ ರಾಜ್ಯದ ಪ್ರಶ್ನೆ. ಮಹಾರಾಷ್ಟ್ರದ ಎಂ. ಪಿ. ಗಳು ಹೆಚ್ಚು ಜನ ಇದ್ದಾರೆ, ಅವರ ಬೆಂಬಲ ನಮಗೆ ಇದೆ ಎಂಬ ಕಾರಣದಿಂದ ಅವರ ಹೆಗಲ ಮೇಲೆ ಕುಳಿತು ರಾಜ್ಯಭಾರ ಮಾಡಿದರೆ ನೀವು ಹೆಚ್ಚು ದಿನ ಅಧಿಕಾರದಲ್ಲಿ ಇರುವುದಿಲ್ಲವೆಂಬ ಮಾತನ್ನು ಕೇಂದ್ರಸರ್ಕಾರಕ್ಕೆ ತಿಳಿಸಬೇಕಾಗಿದೆ. ಒಂದು ರಾಜ್ಯಕ್ಕೆ ಅನುಕೂಲ ಮಾಡುವುದಕ್ಕೆ ಹೋಗಿ ಇನ್ನೊಂದು ರಾಜ್ಯಕ್ಕೆ ಪಕ್ಷಪಾತ ಮಾಡುವುದು ಸರಿಯಲ್ಲ. ಈ ದೃಷ್ಟಿಯಿಂದ ಕೇಂದ್ರಸರ್ಕಾರದವರು ಈ ಪ್ರಶ್ನೆಯನ್ನು ಪುನರ್ವಿಮರ್ಶೆ ಮಾಡುವುದು ಒಳ್ಳೆಯದು. ಇದೇ ಅವಧಿಯಲ್ಲಿ ಕೆಲವು ಜನ ಪ್ರಾಣ ಕೊಡುತ್ತೇವೆಂದು ಹೇಳಿದ್ದಾರೆ. ಇದು ಭಾವನಾತ್ಮಕವಾದ ವಿಷಯ. ಇದನ್ನೆಲ್ಲಾ ಆಧಾರವಾಗಿಟ್ಟುಕೊಂಡು ನಮ್ಮ ಕೇಸ್ ಏನಿದೆ ಎಂಬುದನ್ನು ಕೇಂದ್ರದಲ್ಲಿರತಕ್ಕಂಥ ವರಿಷ್ಠರಿಗೆ ಮನದಟ್ಟು ಮಾಡಿಕೊಡಬೇಕಾಗಿದೆ. ಶ್ರೀ ದಯಾನಂದಸಾಗರ್ ಅವರು ಮಾತನಾಡುವಾಗ ಹೇಳಿದರು, ಬೇರೆಯವರ ರಾಜ್ಯವನ್ನು ಕಬಳಿಸುವವರು ನಾವಲ್ಲ ಎಂಬುದನ್ನು. ಕನ್ನಡರಾಜ್ಯಕ್ಕೆ ಸೇರಿಲ್ಲದ ಭಾಗವನ್ನು ಇದುವರೆಗೆ ಎಲ್ಲಿಯಾದರು

(ಶ್ರೀ ಎಸ್. ಗೋಪಾಲಗೌಡ)

ಒಳಹಾಕಿಕೊಳ್ಳುವುದಕ್ಕೆ ನಾವು ವಿಚಾರ ಮಾಡಿದ್ದರೆ ಅದನ್ನು ತೋರಿಸಿ ಕೊಡಲಿ. ನಾವು ಇದುವರೆಗೆ ಯಾವ ಸೇನೆಯನ್ನು ಸಹ ಕಟ್ಟಿ ಕೊಂಡಿಲ್ಲ. ನಮ್ಮಲ್ಲಿಯೂ ಕೂಡ ಚೆನ್ನಾಗಿ ಮಾತನಾಡುವ ಜನ ಇದ್ದಾರೆ. ಒಂದೇ ಭಾಷೆ ಮಾತನಾಡುವ ಜನರು ಸೇರಿಕೊಂಡು ಈ ದೇಶವನ್ನು ಕಟ್ಟಿಲ್ಲ ಎಂಬುದನ್ನು ಅವರು ಅರಿತುಕೊಳ್ಳಬೇಕು. ಫಜಲಾಲಿ ಕಮಿಷನ್ ರಿಪೋರ್ಟ್‌ಗೆ ಮಹಾರಾಷ್ಟ್ರದವರು ಒಂದು ಕಾರಣ ಕೊಟ್ಟು ಒಪ್ಪಿಕೊಳ್ಳುವುದಕ್ಕಾವುದಿಲ್ಲವೆಂದು ಹೇಳಿದ್ದರು. ಈಗ ಮಹಾಜನ್ ವರದಿಯನ್ನು ಒಂದು ಕಾರಣ ಕೊಟ್ಟು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಪಟಾಸ್ಕರ್ ಸೂತ್ರವೊಂದು ಮಾತ್ರ ಮಹಾರಾಷ್ಟ್ರದವರಿಗೆ ಅನುಕೂಲಕರವಾಗಿದೆ. ಪಟಾಸ್ಕರ ಸೂತ್ರವನ್ನು ಪರಿಶೀಲನೆ ಮಾಡಿ ನೋಡಿದಾಗ ನಮಗೆ ತಿಳಿಯುತ್ತದೆ, ಏನೆಂದರೆ ಬೆಳಗಾಂನ್ನು ಮಹಾರಾಷ್ಟ್ರದಲ್ಲಿ ಸೇರಿಸುವುದಕ್ಕೋಸ್ಕರ ಆ ಸೂತ್ರವನ್ನು ಒಪ್ಪಿಕೊಂಡಿದ್ದಾರೆಂಬುದು. ಸರ್ವ ರಾಜ್ಯಗಳಿಗೂ ಕೂಡ ಈ ಒಂದು ಸೂತ್ರ ಅನ್ವಯವಾಗಿಲ್ಲ. ಹಿಂದೆ ರಾಜ್ಯಗಳನ್ನು ಒಡೆದು ಬೇರೆ ಬೇರೆ ಮಾಡುವಾಗ ಈ ಪಟಾಸ್ಕರ್ ಸೂತ್ರವನ್ನೇ ಅನುಸರಿಸಿಲ್ಲ. ಪಟಾಸ್ಕರ್ ಸೂತ್ರದಲ್ಲಿ ಹಳ್ಳಿಯನ್ನು ಒಂದು ಘಟಕವನ್ನಾಗಿ ತೆಗೆದುಕೊಳ್ಳಬೇಕೆಂದು ಹೇಳಲಾಗಿದೆ. ಇದೇ ಸೂತ್ರವನ್ನು ದೇಶದಲ್ಲಿರುವ ಎಲ್ಲಾ ಭಾಗಗಳಿಗೂ ಕೂಡ ಅನ್ವಯಮಾಡುವುದಾದರೆ ನಾವೂ ಸಹ ಒಪ್ಪಿಕೋಳ್ಳೋಣ. ಹಳ್ಳಿಯನ್ನೇ ಘಟಕವಾಗಿ ತೆಗೆದುಕೊಂಡರೆ ಒಂದು ಹಳ್ಳಿಯ ಮಧ್ಯೆ ಒಂದು ಹೊಳೆ ಹರಿಯುತ್ತಿರುತ್ತದೆ ಎಂದು ಇಟ್ಟುಕೋಳ್ಳೋಣ, ಹೊಳೆಯ ಇನ್ನೊಂದು ದಡದಲ್ಲಿ ಅದೇ ಹಳ್ಳಿಗೆ ಸೇರಿದಂತೆ ಕೆಲವು ಮನೆಗಳು ಇರುತ್ತವೆ. ಈ ಮನೆಯ ಜನರನ್ನು ಸಹ ಅದೇ ಹಳ್ಳಿಗೆ ಸೇರಿದರೆ ಈ ಜನರು ಎಲ್ಲಾ ಕಾಲದಲ್ಲಿಯೂ ಕೂಡ ಹೊಳೆಯನ್ನು ದಾಟಿಕೊಂಡು ಓಡಾಡುವುದಕ್ಕಾಗುವುದಿಲ್ಲ. ಹೊಳೆಯ ಆ ಕಡೆ ಇರುವ ಜನರು ಅಲ್ಲಿರುವುದೇ ಒಳ್ಳೆಯದು, ಈ ಕಡೆ ಇರುವ ಜನರು ಈ ಕಡೆಯೇ ಇರುವುದು ಒಳ್ಳೆಯದು. ನಾವು ಇಂಡಿಯಾ ದೇಶದವರು, ಎಲ್ಲಿದ್ದರೂ ಒಂದೇ ಎಂಬ ಭಾವನೆ ಎಲ್ಲರಲ್ಲಿಯೂ ಮೊದಲು ಬರಬೇಕು. ಮಹಾರಾಷ್ಟ್ರದವರು ದೊಡ್ಡವರು, ಅವರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಅವರು ಹೇಳುವುದು, ಶೇಕಡ 51ರಷ್ಟು ಜನ ಯಾವ ಭಾಷೆ ಮಾತನಾಡುತ್ತಾರೋ ಆ ಭಾಗದ ಜನರು ಮಹಾರಾಷ್ಟ್ರಕ್ಕೆ ಸೇರಬೇಕು ಎಂಬುದಾಗಿ. ಅಂದರೆ 100ಕ್ಕೆ 49ರಷ್ಟು ಜನ ಕನ್ನಡ ಮಾತನಾಡುವವರು ಏನಿದ್ದಾರೆ ಅವರ ರಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಇವರ ಯೋಗಕ್ಷೇಮವನ್ನು ಸಹ ನೋಡಿಕೊಳ್ಳಬೇಕಾಗುತ್ತದೆ. ಇದು ಒಂದು ರಾಜ್ಯದ ಪ್ರಶ್ನೆ. ಇಲ್ಲಿರುವ ನಮ್ಮ ಮರಾಠಿ ಮಿತ್ರರು ರಾಜ್ಯವನ್ನು ವಿಭಜನೆ ಮಾಡಬೇಕೆಂದು ಆಗ್ರಹಪಡಿಸುತ್ತಿದ್ದಾರೆ. ಮತ್ತು ಪಟಾಸ್ಕರ ಸೂತ್ರವನ್ನೇ ಒಪ್ಪಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ನಮ್ಮ ರಾಜ್ಯದ ಹಿತದೃಷ್ಟಿಯಿಂದ ಅವರ ನಿಲುವನ್ನು ವಾಪಸು ತೆಗೆದುಕೊಳ್ಳುವುದು ಒಳ್ಳೆಯದು. ನಾನು ನನ್ನ ನಿರ್ಣಯದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ನನ್ನ ನಿರ್ಣಯದಲ್ಲಿ ಯಾವುದನ್ನೂ ತೀವ್ರವಾಗಿ ಹೇಳಿಲ್ಲ, ಮತ್ತು ಖಂಡಿಸಿಲ್ಲ. ಇರುವುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಮಹಾಜನ್ ವರದಿಯನ್ನು ಬಿಟ್ಟು ಬೇರೆ ಯಾವ ಸೂತ್ರವನ್ನೂ ಸಹ ನಮ್ಮ ಮೇಲೆ ಹೇರಬಾರದು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ಜನರ ಪರವಾಗಿ ಈ ಮನೆಯ ಸದಸ್ಯರು ನನ್ನ ನಿರ್ಣಯಕ್ಕೆ ಬೆಂಬಲ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ನನ್ನ ಸ್ನೇಹಿತರು ಕೆಲವರು ಏನು ತಪ್ಪು ತಿಳಿದುಕೊಂಡು ಸಭಾತ್ಯಾಗ ಮಾಡಿದರೋ ಗೊತ್ತಿಲ್ಲ. ಅದಕ್ಕಾಗಿ ನಾನು ವಿಷಾದ ಪಡುತ್ತೇನೆ. ಸರ್ವಾನುಮತದಿಂದ ನನ್ನ ನಿರ್ಣಯ ಅಂಗೀಕಾರವಾಗಿದ್ದರೆ ನಾನು ಸಂತೋಷಪಡುತ್ತಿದ್ದೆ. ರಾಜಕೀಯ ಮತ್ತಿತರ ಕಾರಣಗಳಿಗಾಗಿ ಕೆಲವರು ವಾಕ್-ಔಟ್ ಮಾಡಿರಬಹುದು. ಮತ್ತು ಅವರು ನನ್ನ ನಿರ್ಣಯದ ಪ್ರಕಾರ ದೆಹಲಿಗೂ ಕೂಡ ಬರದಿರಬಹುದು. ಅದನ್ನೇ ದೊಡ್ಡದಾಗಿ ಮಾಡದೆ ಇಲ್ಲಿರುವ ಎಲ್ಲ ಸದಸ್ಯರೂ ಕೂಡ ದೊಡ್ಡ ಮನಸ್ಸು ಮಾಡಿ ನನ್ನ ನಿರ್ಣಯವನ್ನು ಅಂಗೀಕಾರ ಮಾಡಿ ತಕ್ಷಣ ದೆಹಲಿಗೆ ಹೋಗಿ ಮಾತುಕತೆ ಆರಂಭ ಮಾಡಿ ಮುಂದೆ ಏನು ಕೆಲಸ ಮಾಡಬೇಕೋ ಅದನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತು ಈ ನನ್ನ ನಿಲುವನ್ನು ಯಾವ ಕಾರಣಕ್ಕೂ ಸರ್ಕಾರದವರು ಕೈಬಿಡಬಾರದೆಂದು ಮತ್ತೊಮ್ಮೆ ಸರ್ಕಾರವನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

Sri V. N. PATIL.—Sir, since I have moved the consideration motion, I may be permitted to speak for a minute or two.

Mr. SPEAKER.—It is nearing 2.00 P.M. The hon. member may please resume his seat.

The House knows that the consideration motion cannot be put to vote as per Rule 279 and only the substitute motions can be put to vote. I want to know from the hon. members who have moved the substitute motions whether any of them are inclined to withdraw.

Sri M. NAGAPPA.—Sir, I beg leave of the House to withdraw my substitute motion.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಶ್ರೀಮಾನ್ ಗೋಪಾಲಗೌಡರ ಸಬ್ಸ್ಟಿಟ್ಯೂಟ್ ಮೋಷನ್ ನನ್ನ ಸಬ್ಸ್ಟಿಟ್ಯೂಟ್ ಮೋಷನ್‌ಗಿಂತ ಒಂದು ಹೆಜ್ಜೆ ಮುಂದೆ ಹೋಗಿರುವುದರಿಂದ ನನ್ನದನ್ನು ಒಮ್ಮತದ ನಿರ್ಣಯಕ್ಕೋಸ್ಕರ ವಿತ್‌ಡ್ರಾ ಮಾಡಿಕೊಳ್ಳುತ್ತೇನೆ.

Sri H. N. NANJE GOWDA.—Sir, I also do not press for my substitute motion.

The substitute motions were by leave withdrawn.

Mr. SPEAKER.—Now, I shall put the substitute motion moved by hon. Member Sri Siddaveerappa and 16 others. The question is :

> "That in view of the serious tension and unhealthy controversies that have developed in the country on the Mysore Maharashtra Border issue, this House is of opinion that it is expedient and in the interest of the country to stick to status quo already established under the provisions and procedures for adjustments of Kannada areas like Kasargod in Kerala, Talawadi and Hosur in Tamil Nadu and Madakasira in Andhra Pradesh as provided in the States Reorganisation Act, 1956."

The motion was negatived.

Sri V. N. PATIL.—Sir, would it not be proper to allow me to speak for a few minutes ? I want to say that I am also in favour of the resolution that is going to be adopted by this House.

Mr. SPEAKER.—Now, I cannot permit the hon. member. He will please resume his seat.

Sri V. N. PATIL.—Sir, since you are deliberately depriving me an opportunity to speak, I stage a walk out in protest against the attitude of the Hon. Chair.

(Sri V. N. Patil withdrew)

Mr. SPEAKER.—Now I shall put the motion moved by hon. Member Sri Gopala Gowda to the House. The question is :

> "ಈ ಸಭೆಯು
>
> ಮಹಾಜನ ಆಯೋಗದ ವರದಿಯ ಬಗ್ಗೆ ಕೇಂದ್ರ ಸರಕಾರವು ತಳೆದಿರುವ ಇತ್ತೀಚಿನ ನಿಲುವು ಮತ್ತು ಅದರ ಪ್ರಕಾರ ಪರಿಶೀಲಿಸುತ್ತಿರುವ ಸೂಚನೆಗಳು ಮೈಸೂರು ರಾಜ್ಯದ ಹಿತಾಸಕ್ತಿಗಳಿಗೆ ಭಾರೀ ಬಾಧಕವಾಗಿರುವುದನ್ನು ಅತ್ಯಂತ ವಿಷಾದದಿಂದ ಗಮನಿಸುತ್ತ,

(MR. SPEAKER)

ಮತ್ತು ಆಯೋಗದ ಶಿಫಾರಸುಗಳನ್ನು ಕೂಡಲೇ ಜಾರಿಗೆ ತರಬೇಕೆಂದು ಈ ಸಭೆಯು 1967ರ ಡಿಸೆಂಬರ್ 15 ರಂದು ಸ್ವೀಕರಿಸಿದ ಸೂಚನೆಯನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತ

ಈ ಮೂಲಕ ತನ್ನ ಮುಂದಿನ ನಿರ್ಣಯವನ್ನು ಪುನರ್ದೃಢೀಕರಿಸುವುದೇನೆಂದರೆ ಆಯೋಗದ ಶಿಫಾರಸುಗಳನ್ನು ಮೈಸೂರು ಮಹಾರಾಷ್ಟ್ರ ಗಡಿಯ ವಿವಾದದಮಟ್ಟಿಗೆ ಮಾತ್ರವಲ್ಲ, ಕೇರಳ ಮತ್ತು ಮೈಸೂರು ಗಡಿ ವಿವಾದದ ಸಂದರ್ಭದಲ್ಲಿಯೂ ಕೂಡ ಐತೀರ್ಪಿನಂತೆ ಕಾರ್ಯಗತಗೊಳಿಸಬೇಕು ;

ಮತ್ತು ಶಿಫಾರಸು ಮಾಡುವುದೇನೆಂದರೆ ಈ ಪ್ರಶ್ನೆಯ ಬಗ್ಗೆ ಜನಮನದಲ್ಲಿ ಉಂಟಾಗಿರುವ ಕ್ಷೋಭೆ ಹಾಗೂ ರಾಜ್ಯದಲ್ಲಿ ಉದ್ಭವಿಸಿರುವ ಪ್ರಕ್ಷುಬ್ಧ ಪರಿಸ್ಥಿತಿ ಮತ್ತು ಆಯೋಗದ ಶಿಫಾರಸುಗಳಿಗೆ ವ್ಯತಿರಿಕ್ತವಾಗಿ ನಿರ್ಣಯವಾದರೆ ಸಂಭವಿಸಬಹುದಾದ ದಾರುಣ ಪರಿಣಾಮಗಳ ಕುರಿತು ಕೇಂದ್ರ ಸರ್ಕಾರಕ್ಕೆ, ಸಂಸತ್ ಸದಸ್ಯರಿಗೆ ಮತ್ತು ಸಂಬಂಧಪಟ್ಟವರಿಗೆ ದೆಹಲಿಗೆ ಹೋಗಿ ಮನವರಿಕೆ ಮಾಡಿಕೊಡಲು ಸರ್ವ ಪಕ್ಷಗಳನ್ನು ಪ್ರತಿನಿಧಿಸುವ ಆಯೋಗವೊಂದನ್ನು ರಚಿಸಬೇಕು.''

The motion was adopted unanimously

MR. SPEAKER.—In view of the fact that the motion moved by hon. Member Sri S. Gopala Gowda has been passed by this House unanimously, all the other motions are barred.

The House will now rise to meet again at One of the Clock on Monday.

The House adjourned at Two of the Clock to meet again at One of the Clock on Monday, the 2nd March, 1970.